ಶನಿವಾರ, ಆಗಸ್ಟ್ 20, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಸುದೇವ

ಉತ್ತರ ಪ್ರದೇಶದ ಆಗ್ರಾದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ ಭಕ್ತರೊಬ್ಬರು ಶುಕ್ರವಾರ ವಸುದೇವ ವೇಷ ಧರಿಸಿ, ಕೃಷ್ಣನ ವೇಷದಲ್ಲಿದ್ದ ಮಗುವನ್ನು ಬುಟ್ಟಿಯಲ್ಲಿ ಹೊತ್ತು ಯಮುನಾ ನದಿ ದಾಟಿದರು



ಶನಿವಾರ, ಆಗಸ್ಟ್ 20, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 231 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಸಾಲು ಸಾಲು ಹಬ್ಬ ಬರಲಿದೆ. ಹೆಂಗಳೆಯರ ಸೀರೆ ಖರೀದಿಯ ಸಂಭ್ರಮವೂ ಇದಕ್ಕೆ ಜತೆಯಾಗಿದೆ



ಚರ್ಚೆ
ಬಿಲ್ಕಿಸ್ ಬಾನು ಮತ್ತು ಇತರರ ಮೇಲೆ ಅತ್ಯಾಚಾರ ಎಸಗಿದ ಅಪರಾಧಿಗಳನ್ನು 'ಸನ್ನಡತೆ' ಆಧಾರದಲ್ಲಿ ಬಿಡುಗಡೆ ಮಾಡಿದ್ದು ಸರಿಯೇ?

ಸೆನ್ಸೆಕ್ಸ್ 652 ಅಂಶ ಕುಸಿತ 12
ಮೊಟ್ಟೆ ಎಸೆತ: 9 ಮಂದಿ ಬಂಧನ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,646	17,758	₹53,400 (ಬೆಂಗಳೂರು)	₹58,400 (ಬೆಂಗಳೂರು)	79.84

ತೆವಳುತ್ತಿರುವ 2,239 ಕೋಟಿ ಮೊತ್ತದ ಕಾಮಗಾರಿಗಳು: ಕೇಂದ್ರ ಸರ್ಕಾರದಿಂದ ಎಚ್ಚರಿಕೆ

ಸ್ಮಾರ್ಟ್ ಸಿಟಿ: ರಾಜ್ಯಕ್ಕೆ ತಪರಾಕಿ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕದ ವಿವಿಧ ನಗರಗಳಲ್ಲಿ ಕೈಗೆತ್ತಿಕೊಂಡಿರುವ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳು ತೆವಳುತ್ತಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಕೇಂದ್ರ ಸರ್ಕಾರ, ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಇಲ್ಲದಿದ್ದರೆ ಕೈಬಿಡಬೇಕು ಎಂದು ನಿರ್ದೇಶನ ನೀಡಿದೆ.

ಆಮೆಗತಿಯಲ್ಲಿ ಸಾಗುತ್ತಿರುವ ₹2,239 ಕೋಟಿ ವೆಚ್ಚದ 41 ಯೋಜನೆಗಳನ್ನು ಕೇಂದ್ರ ಸರ್ಕಾರ ಗುರುತಿಸಿದೆ. ಈ ಪೈಕಿ ಕೆಲವು ಕಾಮಗಾರಿಗಳ ಪ್ರಗತಿ ಶೇ 1ರಿಂದ 5ರಷ್ಟು ಇದೆ. ಮಂಗಳೂರಿನಲ್ಲಿ ₹34 ಕೋಟಿ ವೆಚ್ಚದ ಕಮಾಂಡ್ ಮತ್ತು ನಿಯಂತ್ರಣ ಕೇಂದ್ರದ (ಎರಡನೇ ಹಂತ) ಕಾಮಗಾರಿ ಶುರುವೇ ಆಗಿಲ್ಲ ಎಂಬುದನ್ನು ಬೊಟ್ಟು ಮಾಡಿ ತೋರಿಸಿದೆ.

ಈ ಸಂಬಂಧ ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಮನೋಜ್ ಜೋಷಿ ಅವರು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಆಗಸ್ಟ್ 16ರಂದು ಪತ್ರ ಬರೆದಿದ್ದು, ಯೋಜನೆಯ ಗಡುವು ಮುಗಿದ ಬಳಿಕ ಕೇಂದ್ರ ಸರ್ಕಾರವು ರಾಜ್ಯಕ್ಕೆ ನಯಾಪೈಸೆ ಅನುದಾನ ನೀಡುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

ಅದರ ಬೆನ್ನಲ್ಲೇ, ಸ್ಮಾರ್ಟ್ ಸಿಟಿ ಕಾಮಗಾರಿಗಳ ವಾಸ್ತವಾಂಶದ ವರದಿಯನ್ನು ಕೂಡಲೇ ನೀಡುವಂತೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಮುಖ್ಯ ಕಾರ್ಯದರ್ಶಿ ಸೂಚಿಸಿದ್ದಾರೆ.



ಮಂಗಳೂರಿನಲ್ಲಿ ಸ್ಮಾರ್ಟ್ ಸಿಟಿ ಕಾಮಗಾರಿ

ಪ್ರಜಾವಾಣಿ ವಿಶೇಷ

ಕೇಂದ್ರದ ಪತ್ರದಲ್ಲಿ ಏನಿದೆ: ಸ್ಮಾರ್ಟ್ ಸಿಟಿ ಮಿಷನ್ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ. ಈ ಮಿಷನ್‌ಗೆ 2015ಕ್ಕೆ ಚಾಲನೆ ನೀಡಲಾಗಿದ್ದು, ಏಳು ವರ್ಷಗಳಲ್ಲಿ ಸಾವಿರಾರು ಕೋಟಿ ಮೊತ್ತದ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಈ ಮಿಷನ್ 2023ರ ಜೂನ್‌ಗೆ ಮುಗಿಯಲಿದೆ. ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು 11 ತಿಂಗಳುಗಳಷ್ಟೇ ಉಳಿದಿವೆ.

10ನೇ ಪುಟ ನೋಡಿ

ಅಹವಾಲು ಲಾಗಿನ್‌ನಲ್ಲೇ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರ ಕುಂದು ಕೊರತೆ ಆಲಿಸಲು ಸರ್ಕಾರ ಆರಂಭಿಸಿರುವ ಏಕೀಕೃತ ದೂರು ನಿವಾರಣಾ ವ್ಯವಸ್ಥೆ (ಇಂಟಿಗ್ರೇಟೆಡ್ ಪಬ್ಲಿಕ್ ಗ್ರಿವಿಯೆನ್ಸ್ ಸಿಸ್ಟಮ್) ಆರಂಭದಲ್ಲೇ ಕುಂಟುತ್ತಿದ್ದು, ಆನ್‌ಲೈನ್‌ನಲ್ಲಿ ಸಲ್ಲಿಸಿರುವ ಅಹವಾಲುಗಳನ್ನು ಅಧಿಕಾರಿಗಳು ಕಣ್ಣೆತ್ತಿಯೂ ನೋಡಿಲ್ಲ.

ಸಾರ್ವಜನಿಕರ ಕುಂದು ಕೊರತೆ ದಾಖಲಿಸಿ ನಿವಾರಿಸಲು 'ಏಕೀಕೃತ ಸಾರ್ವಜನಿಕ ಕುಂದು ಕೊರತೆ ನಿವಾರಣಾ ವ್ಯವಸ್ಥೆ' ರೂಪಿಸುವ ಬಗ್ಗೆ 2018- 19ರ ಬಜೆಟ್‌ನಲ್ಲಿ ಸರ್ಕಾರ ಘೋಷಿಸಿತ್ತು. ಅದರಂತೆ ಇ– ಆಡಳಿತ ಇಲಾಖೆ ಮೂಲಕ ತಂತ್ರಾಂಶವೂ ಅಭಿವೃದ್ಧಿಗೊಂಡಿದೆ.

ಬಿಬಿಎಂಪಿ ಮತ್ತು ಪೌರಾಡಳಿತ ನಿರ್ದೇಶನಾಲಯದಲ್ಲೇ ಹೆಚ್ಚು ಅರ್ಜಿಗಳು ಬಾಕಿ ಉಳಿದುಕೊಂಡಿದ್ದು, ಒಟ್ಟಾರೆ 2,203 ಅಹವಾಲುಗಳು ಅಧಿಕಾರಿಗಳ ಲಾಗಿನ್‌ನಲ್ಲೇ ಬಾಕಿ ಇವೆ.

ಇತ್ತೀಚೆಗೆ ಪ್ರಗತಿ ಪರಿಶೀಲನೆ ನಡೆಸಿರುವ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, 'ಅಧಿಕಾರಿಗಳ ಬೇಜವಾಬ್ದಾರಿತನದಿಂದ ನಗರಾಭಿವೃದ್ಧಿ ಇಲಾಖೆಯಲ್ಲೇ ಹೆಚ್ಚು ಅರ್ಜಿಗಳು ಬಾಕಿ ಉಳಿದುಕೊಂಡಿವೆ. ತರಬೇತಿ ನೀಡಿದ್ದರೂ ಅಹವಾಲು ವಿಲೇವಾರಿ ಮಾಡಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಬಿಬಿಎಂಪಿ, ಜಲ ಮಂಡಳಿ, ಪೌರಾಡಳಿತ ನಿರ್ದೇಶನಾಲಯ, ಬಿಡಿಎ ಸೇರಿ ನಗರಾಭಿವೃದ್ಧಿ ಇಲಾಖೆಯ ಅಧೀನ ಸಂಸ್ಥೆಗಳಿಗೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಪತ್ರ ಬರೆದು, ಅಹವಾಲು ಪರಿಶೀಲಿಸಲು ಸೂಚನೆ ನೀಡಿದ್ದಾರೆ.



ಪ್ರಸಾದ ಸವಿಯೋಣ ತಿರುಪತಿಯ ತಿರುಮಲದಲ್ಲಿ ಶುಕ್ರವಾರ ತಿಮ್ಮಪ್ಪನ ದರ್ಶನ ಪಡೆದ ಬಳಿಕ ಶಾಸಕ ಬಿ.ಎಸ್. ಯಡಿಯೂರಪ್ಪ, ಸಚಿವ ಆರ್. ಅಶೋಕ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಶಾಸಕ ಎಸ್. ಆರ್. ವಿಶ್ವನಾಥ್ ಪ್ರಸಾದ ಸವಿದರು

₹14 ಲಕ್ಷದಿಂದ ₹22 ಲಕ್ಷಕ್ಕೆ ಏರಿಕೆ

ಅಧಿಕಾರಿಗಳ ಕಾರು ಖರೀದಿ ಮಿತಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರು ಸೇರಿ ವಿವಿಧ ಹಂತಗಳ ಅಧಿಕಾರಿಗಳ ಹೊಸ ಕಾರುಗಳ ಖರೀದಿಗೆ ಇದ್ದ ಆರ್ಥಿಕ ಮಿತಿಯನ್ನು ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

'ಕಳೆದ ಎರಡು ವರ್ಷಗಳಲ್ಲಿ ಕಾರುಗಳ ಬೆಲೆ ಏರಿಕೆ ಆಗಿರುವುದರಿಂದ ಈ ದರವನ್ನು ಪರಿಷ್ಕರಿಸಲಾಗಿದೆ. ಹಳೆಯ ದರಕ್ಕೆ ಈಗ ಕಾರು ಸಿಗುವುದು ಕಷ್ಟ' ಎಂದು ಹಣಕಾಸು ಇಲಾಖೆ ಸಮಜಾಯಿಷಿ ನೀಡಿದೆ. ಸಚಿವರು ಮತ್ತು ಸಂಸದರು ಕಾರು ಖರೀದಿಸುವ ಆರ್ಥಿಕ ಮಿತಿಯನ್ನು ₹22 ಲಕ್ಷದಿಂದ ₹23 ಲಕ್ಷಕ್ಕೆ (ಎಕ್ಸ್ ಷೋ ರೂಂ ದರ) ಏರಿಸಿ ಫೆಬ್ರುವರಿಯಲ್ಲಿ ಆದೇಶ ಹೊರಡಿಸಲಾಗಿತ್ತು.

ಆರ್ಥಿಕ ಮಿತಿ ಎಷ್ಟು: ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರು (ಕಾರ್ಯದರ್ಶಿ ಶ್ರೇಣಿಯ ಅಧಿಕಾರಿಗಳಾಗಿದ್ದಲ್ಲಿ) ವಾಹನ ಖರೀದಿಸುವ ಆರ್ಥಿಕ ಮಿತಿ ₹14 ಲಕ್ಷದಿಂದ ₹20 ಲಕ್ಷಕ್ಕೆ, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿಇಒಗಳು, ಎಸ್ಪಿಗಳು, ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಿಗೆ ₹9 ಲಕ್ಷದಿಂದ ₹18 ಲಕ್ಷಕ್ಕೆ, ಜಿಲ್ಲಾ ಹಂತದ ಇತರ ಅಧಿಕಾರಿಗಳು, ಉಪ ವಿಭಾಗಾಧಿಕಾರಿಗಳು, ಡಿವೈಎಸ್‌ಪಿಗಳಿಗೆ ₹6.50 ಲಕ್ಷದಿಂದ ₹12.50 ಲಕ್ಷಕ್ಕೆ, ತಹಸೀಲ್ದಾರರು ಮತ್ತು ಇತರ ಅರ್ಹ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ₹9 ಲಕ್ಷ ಆರ್ಥಿಕ ಮಿತಿ ನಿಗದಿ ಮಾಡಲಾಗಿದೆ (ಎಕ್ಸ್ ಷೋ ರೂಂ ದರ, ಜಿಎಸ್‌ಟಿ ಸೇರಿ) ಎಂದು ಸರ್ಕಾರದ ಆದೇಶ ವಿವರಿಸಿದೆ.

ಹೊಸ ವಾಹನ ಖರೀದಿಸುವ ಸಂದರ್ಭದಲ್ಲಿ ಇಂಧನ ಮಿತವ್ಯಯ ಮತ್ತು ನಿರ್ವಹಣಾ ವೆಚ್ಚ ಕಡಿಮೆ ಹೊಂದಿರುವ ವಾಹನಗಳನ್ನು ಖರೀದಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಅಧಿಕಾರಿಗಳು ಮುಂದಿನ ದಿನಗಳಲ್ಲಿ ಹೊಸ ಕಾರು ಖರೀದಿಸುವಾಗ ಪರಿಷ್ಕೃತ ದರ ಅನ್ವಯವಾಗಲಿದೆ. ಈಗ ಬಳಸುತ್ತಿರುವ ವಾಹನ 'ಬಳಕೆಗೆ ಯೋಗ್ಯ'ವಲ್ಲ ಎಂದು ಆರ್‌ಟಿಒಗಳು ಪ್ರಮಾಣ ಪತ್ರ ನೀಡಿದಾಗ ಮಾತ್ರ ಹೊಸ ವಾಹನಗಳನ್ನು ಖರೀದಿಸಲು ಸಾಧ್ಯ. ಕೆಲವು ವಾಹನಗಳು 5 ಲಕ್ಷ ಕಿ.ಮೀ ಓಡಿದ್ದರೂ ಸುಸ್ಥಿತಿಯಲ್ಲಿ ಇರುತ್ತವೆ. ಆಗ ಬದಲಿಸಲು ಸಾಧ್ಯವಿಲ್ಲ. ಇನ್ನು ಕೆಲವು ವಾಹನಗಳು ಎಂಜಿನ್ ಸೇರಿ ವಿವಿಧ ಸಮಸ್ಯೆಗಳಿಂದ ಬಳಕೆಗೆ ಯೋಗ್ಯವಲ್ಲದಿದ್ದರೆ, ಅದಕ್ಕೆ ಕಡ್ಡಾಯವಾಗಿ ಪ್ರಮಾಣ ಪತ್ರ ಪಡೆಯಬೇಕಾಗುತ್ತದೆ. ಆರ್ಥಿಕ ಇಲಾಖೆಯ ಅನುಮತಿಯೂ ಬೇಕಾಗುತ್ತದೆ' ಎಂದು ಸಾರಿಗೆ ಇಲಾಖೆ ಮೂಲಗಳು ಹೇಳಿವೆ.

ಭ್ರಷ್ಟಾಚಾರ: ಹೈಕೋರ್ಟ್ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ದಿನೇ ದಿನೇ ವ್ಯಾಪಕವಾಗುತ್ತಿದ್ದು, ದುಡ್ಡು ಕೊಡದೇ ಯಾವ ಫೈಲೂ ಮುಂದಕ್ಕೆ ಚಲಿಸುವುದಿಲ್ಲ ಎಂಬ ದುಃಸ್ಥಿತಿ ನಿರ್ಮಾಣವಾಗಿದೆ' ಎಂದು ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಸಹಾಯಕ ಎಂಜಿನಿಯರ್ ಬಿ.ಟಿ.ರಾಜು ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಆರೋಪಿ ರಾಜು ವಿರುದ್ಧ ಬಲವಾದ ಸಾಕ್ಷ್ಯಗಳಿರುವ ಕಾರಣ ಜಾಮೀನು ನೀಡಲು ಆಗದು' ಎಂದು ವಜಾಗೊಳಿಸಿದೆ.

ಬಿ.ಟಿ.ರಾಜು, ಅನುಕೂಲಕರ ಆದೇಶ ನೀಡಲು ಮಂಜುನಾಥ್ ಅವರಿಗೆ ₹ 1 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಫಿರ್ಯಾದುದಾರ ಮಂಜುನಾಥ್ ಚೌಕಾಶಿ ನಡೆಸಿದ ನಂತರ ₹ 60 ಲಕ್ಷಕ್ಕೆ ಕೆಲಸ ಮಾಡಲು ಒಪ್ಪಿಕೊಂಡಿದ್ದರು. 2022ರ ಜೂನ್ 7ರಂದು ಲಂಚದ ಮೊತ್ತದಲ್ಲಿ ₹ 5 ಲಕ್ಷ ಮುಂಗಡ ಪಡೆದಾಗ ಎಸಿಬಿ ಬಲೆಗೆ ಸಿಕ್ಕಿಬಿದ್ದಿದ್ದರು.

ದೆಹಲಿ ಅಬಕಾರಿ ನೀತಿಯಲ್ಲಿ ಅಕ್ರಮ ಆರೋಪ

ಸಿಸೋಡಿಯಾಗೆ ಸಿಬಿಐ ಬಿಸಿ

ನವದೆಹಲಿ (ಪಿಟಿಐ): ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರ ಮನೆಯಲ್ಲಿ ಸಿಬಿಐ ಅಧಿಕಾರಿಗಳು ಶುಕ್ರವಾರ ಶೋಧಕಾರ್ಯ ನಡೆಸಿದ್ದಾರೆ. ದೆಹಲಿ ಅಬಕಾರಿ ನೀತಿ–2021ರ ಜಾರಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿದಂತೆ ಸಿಬಿಐ ಈ ಶೋಧ ಕಾರ್ಯ ನಡೆಸಿದೆ.

ದೆಹಲಿ ಸೇರಿ ದೇಶದ ಏಳು ರಾಜ್ಯಗಳ ಒಟ್ಟು 31 ಸ್ಥಳಗಳಲ್ಲಿ ಸಿಬಿಐ ಏಕಕಾಲದಲ್ಲಿ ಶೋಧಕಾರ್ಯ ನಡೆಸಿದೆ. ದೆಹಲಿ, ಹೈದರಾಬಾದ್, ಮುಂಬೈ, ಬೆಂಗಳೂರು, ಲಖನೌ, ಗುರುಗ್ರಾಮ ಸೇರಿ ಹಲವು ನಗರಗಳಲ್ಲಿ ಶೋಧ ಕಾರ್ಯ ನಡೆದಿದೆ. ಶುಕ್ರವಾರ ಬೆಳಿಗ್ಗೆ 8ಕ್ಕೆ ಆರಂಭವಾದ ಶೋಧಕಾರ್ಯವು, ಸಂಜೆಯವರೆಗೂ ಮುಂದುವರಿಯಿತು. ಮನೀಷ್ ಮನೆಯಲ್ಲಿ 15 ತಾಸು ಶೋಧ ನಡೆಸಲಾಗಿದೆ. ಈ ವೇಳೆ ಹಲವು ಪ್ರಮುಖ ದಾಖಲೆಗಳು ಮತ್ತು ಎಲೆಕ್ಟ್ರಾನಿಕ್ ಉಪಕರಣಗಳನ್ನು ವಶಕ್ಕೆ ಪಡೆಯಲಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವೂ ತನಿಖೆ ಆರಂಭಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಎಫ್‌ಐಆರ್‌ನಲ್ಲಿ ಏನಿದೆ?

ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಬುಧವಾರವೇ ಎಫ್‌ಐಆರ್ ದಾಖಲಿಸಿದೆ. ಎಫ್‌ಐಆರ್‌ನಲ್ಲಿನ ವಿವರಗಳ ಬಗ್ಗೆ ಅಧಿಕಾರಿಗಳು ಶುಕ್ರವಾರ ಮಾಹಿತಿ ನೀಡಿದ್ದಾರೆ. ಎಫ್‌ಐಆರ್‌ನಲ್ಲಿ ಮನೀಷ್ ಸಿಸೋಡಿಯಾ ಅವರೇ ಮೊದಲ ಆರೋಪಿ ಎಂದು ಎನ್‌ಡಿಟಿವಿ ವರದಿ ಮಾಡಿದೆ. ಆದರೆ ಈ ಮಾಹಿತಿ ಖಚಿತವಾಗಿಲ್ಲ. ಎಫ್‌ಐಆರ್‌ನಲ್ಲಿನ ವಿವರಗಳು ಇಂತಿವೆ

- ಮನೀಷ್ ಸಿಸೋಡಿಯಾ ಸೇರಿ ಒಟ್ಟು 13 ಜನರು ಮತ್ತು ಎರಡು ಕಂಪನಿಗಳನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಅಬಕಾರಿ ಆಯುಕ್ತ ಅರವ ಗೋಪಿ ಕೃಷ್ಣಾ, ಈ ಹಿಂದಿನ ಅಬಕಾರಿ ಉಪ ಆಯುಕ್ತ ಆನಂದ್ ಕುಮಾರ್ ತಿವಾರಿ, ಸಹಾಯಕ ಅಬಕಾರಿ ಆಯುಕ್ತ ಪಂಕಜ್ ಭಟ್ನಾಗರ್ ಮತ್ತು ಒಂಬತ್ತು ಉದ್ಯಮಿಗಳ ಹೆಸರು ಎಫ್‌ಐಆರ್‌ನಲ್ಲಿದೆ. 'ಓನ್ಲಿ ಮಚ್ ಲೌಡರ್' ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಯ ಸಿಇಒ ವಿಜಯ್ ನಾಯರ್ ಮತ್ತು ಕಂಪನಿಯ ಹಲವು ನೌಕರರು ಈ ಅಕ್ರಮದಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದರು.
- ಮನೀಷ್ ಸಿಸೋಡಿಯಾ ಅವರ ಮೂವರು ಆಪ್ತರು, ಮದ್ಯ ಮಾರಾಟಗಾರರಿಂದ ಹಣ ಪಡೆಯುತ್ತಿದ್ದರು. ಆ ಹಣವನ್ನು ಬೇರೆಡೆಗೆ ಸಾಗಿಸುತ್ತಿದ್ದರು. ಮದ್ಯ ಮಾರಾಟಗಾರರಿಂದ ಪಡೆದ ಹಣವನ್ನು ಎರಡು ಕಂಪನಿಗಳ ಲೆಕ್ಕಪತ್ರದಲ್ಲಿ ಸೇರಿಸಲಾಗುತ್ತಿತ್ತು
- ಮನೀಷ್ ಅವರ ಆಪ್ತ ದಿನೇಶ್ ಅರೋರಾ, ಇಂಡೊಸ್ಪಿರಿಟ್ಸ್ ಮಾಲೀಕರಿಂದ ₹1 ಕೋಟಿ ಹಣ ಪಡೆದಿದ್ದರು
- ಮನೀಷ್ ಅವರ ಮತ್ತೊಬ್ಬ ಆಪ್ತ ಅರುಣ್ ರಾಮಚಂದ್ರ ಪಿಳ್ಳೈ ಮದ್ಯ ಉದ್ಯಮಿಗಳಿಂದ ಹಣ ಪಡೆದು, ಅದನ್ನು ಅಧಿಕಾರಿಗಳಿಗೆ ನೀಡುತ್ತಿದ್ದರು. ಅರ್ಜುನ್ ಪಾಂಡೆ ಎಂಬ ವ್ಯಕ್ತಿ ಒಮ್ಮೆ ಉದ್ಯಮಿಗಳಿಂದ ₹2 ಕೋಟಿಯಿಂದ ₹4 ಕೋಟಿ ಹಣ ಪಡೆದು, ವಿಜಯ್ ನಾಯರ್‌ಗೆ ನೀಡಿದ್ದರು ಎಂದು ಎಫ್‌ಐಆರ್ ನಲ್ಲಿ ಆರೋಪಿಸಲಾಗಿದೆ

ಇನ್ನಷ್ಟು ಸುದ್ದಿಗಳು 10

ಮಂಕಿಪಾಕ್ಸ್: ಸೆರೋ ಸಮೀಕ್ಷೆಗೆ ಚಿಂತನೆ

ನವದೆಹಲಿ (ಪಿಟಿಐ): ಮಂಕಿಪಾಕ್ಸ್ ರೋಗಿಗಳ ಸಂಪರ್ಕಿತರಲ್ಲಿ ಪ್ರತಿಕಾಯದ ಸ್ಥಿತಿಯನ್ನು ತಿಳಿಯಲು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯು (ಐಸಿಎಂಆರ್) ಸೆರೋ ಸಮೀಕ್ಷೆ ನಡೆಸಲಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಸದ್ಯಕ್ಕೆ ಈ ಸೋಂಕು ಲಕ್ಷಣ ರಹಿತವಾಗಿ ಎಷ್ಟು ಮಂದಿಗೆ ಬಾಧಿಸಿದೆ ಎಂಬುದು ತಿಳಿದು ಬಂದಿಲ್ಲ ಎಂದೂ ಹೇಳಿವೆ.

ಇದುವರೆಗೆ ಭಾರತದಲ್ಲಿ ಮಂಕಿಪಾಕ್ಸ್‌ನ ಹತ್ತು ಪ್ರಕರಣಗಳು ವರದಿಯಾಗಿವೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ



ಸುಳ್ಳು ಮೊಕದ್ದಮೆ: ರೌಡಿ ಬಂಧನ

ಬೆಂಗಳೂರು: 'ಸಾರ್ವಜನಿಕರ ಆಸ್ತಿಗಳ ನಕಲಿ ದಾಖಲೆ ಸೃಷ್ಟಿಸಿ ನ್ಯಾಯಾಲಯಗಳಲ್ಲಿ ಸುಳ್ಳು ಮೊಕದ್ದಮೆ ಹೂಡುತ್ತಿದ್ದ ಆರೋಪದಡಿ ರೌಡಿ ಡಿ.ಸಿ. ನಾರಾಯಣಸ್ವಾಮಿ ಅಲಿಯಾಸ್ ಬೂಟ್ ನಾರಾಯಣಸ್ವಾಮಿಯನ್ನು (43) ಬಂಧಿಸಲಾಗಿದೆ' ಎಂದು ಈಶಾನ್ಯ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ತಿಳಿಸಿದ್ದಾರೆ.

'ದೇವನಹಳ್ಳಿ ತಾಲ್ಲೂಕಿನ ದ್ಯಾವರಹಳ್ಳಿ ಗ್ರಾಮದ ನಾರಾಯಣಸ್ವಾಮಿ, ಬೆಂಗಳೂರಿನ ಸಹಕಾರ ನಗರದ ಚಿತ್ರಕೂಟ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲಾಟ್‌ನಲ್ಲಿ ವಾಸವಿದ್ದ. ದೇವನಹಳ್ಳಿ ಠಾಣೆಯಲ್ಲಿ ಆಗಸ್ಟ್ 6ರಂದು ದಾಖಲಾಗಿದ್ದ ಪ್ರಕರಣದಲ್ಲಿ ಈತನನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.



ನಾರಾಯಣ ಸ್ವಾಮಿ

'ಆರೋಪಿ ನಾರಾಯಣಸ್ವಾಮಿ ಅಪರಾಧ ಹಿನ್ನೆಲೆಯುಳ್ಳವ. ಹಲ್ಲೆ, ಜೀವ ಬೆದರಿಕೆ, ಅಪಹರಣ, ವಂಚನೆ, ಲೈಂಗಿಕ ದೌರ್ಜನ್ಯ ಹಾಗೂ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ನಾರಾಯಣಸ್ವಾಮಿ ವಿರುದ್ಧ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಶ್ವನಾಥಪುರ ಠಾಣೆಯ ರೌಡಿ ಪಟ್ಟಿಯಲ್ಲೂ ಈತನ ಹೆಸರಿದೆ' ಎಂದಿದ್ದಾರೆ.

'ಆರ್.ಟಿ.ನಗರದಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ನಾರಾಯಣಸ್ವಾಮಿಗೆ ಮೂರು ವರ್ಷಗಳ ಜೈಲು ಶಿಕ್ಷೆ ಸಹ ಆಗಿತ್ತು. ಇಷ್ಟಾದರೂ ಆರೋಪಿಯು ಪದೇ ಪದೇ ಅಪರಾಧ ಕೃತ್ಯ ಎಸಗುತ್ತಿದ್ದ' ಎಂದೂ ಹೇಳಿದ್ದಾರೆ.

ನಕಲಿ ದಾಖಲೆ ಸೃಷ್ಟಿ: 'ದ್ಯಾವರಹಳ್ಳಿ ಗ್ರಾಮದ ಕೆಲ ನಿವಾಸಿಗಳ ಜಮೀನನ್ನು ಕಬಳಿಸಲು ಸಂಚು ರೂಪಿಸಿದ್ದ ನಾರಾಯಣಸ್ವಾಮಿ, ನಕಲಿ ದಾಖಲೆ ಸೃಷ್ಟಿಸಿದ್ದ. ಅದನ್ನೇ ಅಸಲಿ ಎಂಬುದಾಗಿ ಬಿಂಬಿಸಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುತ್ತಿದ್ದ. ಸದರಿ ಜಮೀನಿನಲ್ಲಿ ವ್ಯವಸಾಯ ಮಾಡುವವರ ಮೇಲೂ ಹಲ್ಲೆ ಮಾಡಿ ಜೀವ ಬೆದರಿಕೆ ಹಾಕುತ್ತಿದ್ದ. ಇನ್‌ಸ್ಪೆಕ್ಟರ್ ಜೆ. ರಮೇಶ್ ನೇತೃತ್ವದ ತಂಡ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ' ಎಂದು ಡಿಸಿಪಿ ತಿಳಿಸಿದ್ದಾರೆ.

ಗಮನ ಸೆಳೆದ ಸೊರಬ ತಾಲ್ಲೂಕು ಆನವಟ್ಟಿಯ ರಿಷಬ್, ವಿಶಾಲ್

ಪುಟ್ಟ ಸಹೋದರರ ಸಸ್ಯಕಾಶಿ!

• ರವಿ.ಆರ್.ತಿಮ್ಮಾಪುರ

ಆನವಟ್ಟಿ (ಶಿವಮೊಗ್ಗ ಜಿಲ್ಲೆ): ಇಲ್ಲಿನ ಇಬ್ಬರು ಸಹೋದರರು ಯಾವುದೇ ಹಣ್ಣನ್ನು ತಿಂದ ಮೇಲೆ ಬೀಜವನ್ನು ಎಲ್ಲೆಂದರಲ್ಲಿ ಬಿಸಾಡದೆ ಅವುಗಳನ್ನು ಸಂಗ್ರಹಿಸಿ, ಸಸಿ ಮಾಡಿ ಸಂಬಂಧಿಕರು ಹಾಗೂ ಶಾಲೆಗಳಿಗೆ ನೀಡುತ್ತಿದ್ದಾರೆ.

ಸಮೀಪದ ಎಣ್ಣೆಕೊಪ್ಪ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವಿಕುಮಾರ್–ರೂಪಾ ದಂಪತಿಯ ಮಕ್ಕಳಾದ ರಿಷಬ್ ಹಾಗೂ ವಿಶಾಲ್ ಅವರು ಇಂತಹ ಕೆಲಸದಿಂದ ಮಾದರಿಯಾಗಿದ್ದಾರೆ. ಇವರು, ಆನವಟ್ಟಿಯ ಸ್ಯಾನ್ ಥೋಮ್ ಶಾಲೆಯಲ್ಲಿ ಕ್ರಮವಾಗಿ 7 ಮತ್ತು 2ನೇ ತರಗತಿಯಲ್ಲಿ ಓದುತ್ತಿದ್ದು, ತಮ್ಮ ಶಾಲೆಗೂ ತರಹೇವಾರಿ ಸಸಿಗಳನ್ನು ನೀಡಿದ್ದಾರೆ.

ಸಾರ್ವಜನಿಕರು ತಿಂದು ಬಿಸಾಕಿರುವ ಹಣ್ಣಿನ ಬೀಜಗಳನ್ನು ಈ ಸಹೋದರರು ಆಯ್ದು, ಒಣಗಿಸಿ, ಪ್ಯಾಕೆಟ್‌ಗಳಲ್ಲಿ ಗೊಬ್ಬರ ಮಿಶ್ರಿತ ಮಣ್ಣು ಹಾಕಿ, ಬೀಜ ಇಟ್ಟು, ನೀರುಣಿಸಿ ಸಸಿ ಬೆಳೆಸುತ್ತಾರೆ.



ರಿಷಬ್



ವಿಶಾಲ್

ಮಾವು, ಹಲಸು, ಪಪ್ಪಾಯ, ಹುಣಸೆ, ನೇರಳೆ ಸೇರಿ 70ಕ್ಕೂ ಹೆಚ್ಚು ಬಗೆಯ ಸಸಿಗಳನ್ನು ಬೆಳೆಸಿದ್ದು, ಈ ವರ್ಷ ಅವುಗಳನ್ನು ಬೆಲವಂತನಕೊಪ್ಪ, ಎಣ್ಣೆಕೊಪ್ಪ, ವೃತ್ತಿಕೊಪ್ಪದ ಸರ್ಕಾರಿ ಶಾಲೆಗಳಿಗೆ ನೀಡಿದ್ದಾರೆ.

ಮುಂದಿನ ವರ್ಷದ ಸಸಿ ತಯಾರಿಗೂ ಈಗಾಗಲೇ ಸಿದ್ಧತೆ ಮಾಡಿಕೊಂಡಿರುವ ಸಹೋದರರು ಸೇಬು, ಸೀತಾಫಲ, ಸಪೋಟ ಬೀಜಗಳನ್ನು ಪ್ಯಾಕೆಟ್‌ಗೆ ಹಾಕಿದ್ದಾರೆ. ಹಂತಹಂತವಾಗಿ 1,000 ಸಸಿಗಳನ್ನು ಬೆಳೆಸುವ ಗುರಿ ಹೊಂದಿದ್ದಾರೆ.

'ಪರಿಸರ ಸಮತೋಲನ ಕಾಯ್ದುಕೊಳ್ಳಲು, ಉಸಿರಾಡಲು ಉತ್ತಮ ಗಾಳಿ ಬೇಕು. ಅದಕ್ಕೆ ನಾವು ಗಿಡ–ಮರಗಳನ್ನು ಬೆಳೆಸಬೇಕು ಎಂದು ನಮ್ಮ ತಂದೆ ಹೇಳುತ್ತಿದ್ದರು. ಶಿಕ್ಷಕರೂ ಶಾಲೆಯಲ್ಲಿ ಪರಿಸರ ರಕ್ಷಣೆ ಕುರಿತು ಜಾಗೃತಿ ಮೂಡಿಸುತ್ತಿರುವುದು ಸಸಿ ಬೆಳೆಸಲು ಪ್ರೇರಣೆಯಾಯಿತು' ಎಂದು ವಿದ್ಯಾರ್ಥಿ ರಿಷಬ್ 'ಪ್ರಜಾವಾಣಿ'ಗೆ ತಿಳಿಸಿದರು.

'ಮಕ್ಕಳು ಸಿದ್ಧಪಡಿಸಿರುವ ಸಸಿಗಳನ್ನು ಸಂಬಂಧಿಗಳ ಮನೆಗೂ ಕೊಟ್ಟಿದ್ದೇವೆ. ಕೆರೆ ಏರಿಗಳ ಮೇಲೆ ಹುಣಸೆ ಸಸಿಗಳನ್ನು ತಾವೇ ನೆಡಬೇಕು ಎಂಬ ಯೋಜನೆ ರೂಪಿಸಿದ್ದಾರೆ. ಹಿತ್ತಲಲ್ಲಿ ಸಾಕಷ್ಟು ಸಸಿ ಬೆಳೆಸುತ್ತಿದ್ದಾರೆ. ನನಗೂ ಸಮಯ ಸಿಕ್ಕಾಗಲೆಲ್ಲ ಅವರಿಗೆ ಮಾರ್ಗದರ್ಶನ ಮಾಡುತ್ತೇನೆ. ಚಿಕ್ಕಂದಿನಲ್ಲೇ ಪರಿಸರ ಪ್ರೇಮ ರೂಢಿಸಿಕೊಂಡಿದ್ದನ್ನು ಕಂಡು ಹೆಮ್ಮೆ ಎನ್ನಿಸುತ್ತಿದೆ' ಎಂದು ಅವರ ತಂದೆ ರವಿಕುಮಾರ್ ಹೇಳಿದರು.

ಕಸ ವಿಲೇವಾರಿ ಕಾರ್ಯಾಗಾರ ಇಂದು

ಬೆಂಗಳೂರು: ಸರ್ಕ್ಯುಲಾರ್ ವೇಸ್ಟ್ ಸಲ್ಯೂಷನ್ಸ್ ಮತ್ತು ಎಸ್‌ಡಬ್ಲ್ಯುಎಂ-ರ್‌ಟಿ ಸಂಸ್ಥೆಯ ಸಹಯೋಗದಲ್ಲಿ ನಗರದ ಎಚ್.ಎಸ್.ಆರ್. ಲೇಔಟ್‌ನ ಸ್ವಚ್ಛಗೃಹ ಕಲಿಕಾ ಕೇಂದ್ರದಲ್ಲಿ ಶನಿವಾರ ಕಸದ ನಿರ್ವಹಣೆ ಮತ್ತು ಗೊಬ್ಬರ ತಯಾರಿಕಾ ಕಾರ್ಯಾಗಾರ ಆಯೋಜಿಸಲಾಗಿದೆ.

ವಾಸಸ್ಥಳದಲ್ಲಿ ಸಂಗ್ರಹವಾಗುವ ತ್ಯಾಜ್ಯದಿಂದ ಗೊಬ್ಬರ ತಯಾರಿಸುವ ಬಗ್ಗೆ ಹೇಳಿಕೊಡಲಾಗುತ್ತದೆ.

ನಾಗರಿಕರು ಕಾರ್ಯಾಗಾರದಲ್ಲಿ ಭಾಗವಹಿಸಿ, ಕಸ ವಿಲೇವಾರಿ, ಗೊಬ್ಬರ ತಯಾರಿಕಾ ವಿಧಾನವನ್ನು ಕಲಿತು, ತಮ್ಮ ಅಪಾರ್ಟ್‌ಮೆಂಟ್, ಬಡಾವಣೆಗಳಲ್ಲಿ ಅನುಷ್ಠಾನಗೊಳಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

'ಚಿಕ್ಕಪೇಟೆ ಶಾಲೆ ಹಿತ ಕಾಪಾಡಿ'

ಬೆಂಗಳೂರು: ಖಾಸಗಿ ಸಂಸ್ಥೆಗಳ ಹಿತ ಕಾಪಾಡಲು ಸರ್ಕಾರಿ ಶಾಲೆಗಳನ್ನೇ ಮುಚ್ಚಲು, ಶಾಲಾ ಕಟ್ಟಡಗಳನ್ನೇ ಮಾರಾಟ ಮಾಡಲು ಸರ್ಕಾರ ಮುಂದಾಗಿದೆ ಎಂದು ಎಐಡಿಎಸ್‌ಒ ಆಕ್ರೋಶ ವ್ಯಕ್ತಪಡಿಸಿದೆ.

ಚಿಕ್ಕಪೇಟೆ ಸರ್ಕಾರಿ ಶಾಲೆ ಸ್ವಾತಂತ್ರ್ಯ ಪೂರ್ವದಲ್ಲಿ ದಾನಿಗಳ ನೆರವಿನಿಂದ ಆರಂಭವಾಗಿತ್ತು. 4 ದಶಕಗಳ ಹಿಂದೆ ಶಾಲೆಯ ಜಾಗವನ್ನು ಖಾಸಗಿ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ. ಗುತ್ತಿಗೆ ಅವಧಿ ಮುಗಿದ ನಂತರ ಖಾಸಗಿ ಸಂಸ್ಥೆ ಕಟ್ಟಡವನ್ನು ಕ್ರಯಕ್ಕೆ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿದೆ. ಮನವಿಯನ್ನು ತಿರಸ್ಕರಿಸಬೇಕಿದ್ದ ಜಿಲ್ಲಾಧಿಕಾರಿ ಮಾರ್ಗದರ್ಶನ ಕೋರಿ ಸರ್ಕಾರಕ್ಕೆ ಪತ್ರ ಬರೆದಿರುವುದು ಖಂಡನೀಯ. ಇದು ಸರ್ಕಾರದ ಶಿಕ್ಷಣ ವಿರೋಧಿ, ವಿದ್ಯಾರ್ಥಿ ವಿರೋಧಿ ಕ್ರಮ ಎಂದು ಸಂಘಟನೆಯ ಕಾರ್ಯದರ್ಶಿ ಕಲ್ಯಾಣ್ ಕುಮಾರ್ ದೂರಿದ್ದಾರೆ.

ಸೇವೆ ಪಡೆಯುವವರ ಸಂಖ್ಯೆ ಇಳಿಕೆ • ತುರ್ತು ಚಿಕಿತ್ಸಾ ವಾಹನ ಸೇವೆ ಸ್ಥಗಿತ

ಮೂಲೆ ಸೇರುತ್ತಿವೆ ಬೈಕ್ ಆಂಬುಲೆನ್ಸ್

• ವರುಣ ಹೆಗಡೆ

ಬೆಂಗಳೂರು: ಅಪಘಾತದಲ್ಲಿ ಗಾಯಗೊಂಡವರಿಗೆ ತುರ್ತಾಗಿ ಸೇವೆ ಒದಗಿಸುವ ಉದ್ದೇಶದಿಂದ ನಗರದಲ್ಲಿ ಸಂಚಾರ ಪ್ರಾರಂಭಿಸಿದ್ದ ಬೈಕ್ ಆಂಬುಲೆನ್ಸ್‌ಗಳು ಐದು ವರ್ಷಗಳಿಗೇ ಸೇವೆಯನ್ನು ಸ್ಥಗಿತಗೊಳಿಸಿ, ಮೂಲೆ ಸೇರಲಾರಂಭಿಸಿವೆ.

2015ರಲ್ಲಿ ಪ್ರಾರಂಭವಾದ ಬೈಕ್ ಆಂಬುಲೆನ್ಸ್ ಸೇವೆಗೆ ನಗರದಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ನಗರದಲ್ಲಿ ಸಂಚರಿಸುತ್ತಿದ್ದ 19 ಬೈಕ್ ಆಂಬುಲೆನ್ಸ್‌ಗಳಲ್ಲಿ ಸದ್ಯ 13 ಬೈಕ್ ಆಂಬುಲೆನ್ಸ್‌ಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಸಿಬ್ಬಂದಿ ಸಮಸ್ಯೆ ಸೇರಿ ವಿವಿಧ ಕಾರಣಗಳಿಂದ ಇದರ ನಿರ್ವಹಣೆಯು ಆರೋಗ್ಯ ಇಲಾಖೆಗೆ ಸಮಸ್ಯೆಯಾಗಿ ಪರಿಣಮಿಸಿದೆ. ಆದ್ದರಿಂದ ಕೆಟ್ಟು ನಿಂತ ಆರು ಬೈಕ್ ಆಂಬುಲೆನ್ಸ್‌ಗಳ ರಿಪೇರಿ ಕಾರ್ಯ ನಡೆದಿಲ್ಲ.

ದೇಶದಲ್ಲಿಯೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಬೈಕ್ ಆಂಬುಲೆನ್ಸ್‌ಗಳನ್ನು ಪರಿಚಯಿಸಲಾಗಿತ್ತು. ರಸ್ತೆ ಅಪಘಾತದಲ್ಲಿ ಸಂಭವಿಸುತ್ತಿದ್ದ ಸಾವಿನ ಪ್ರಮಾಣವನ್ನು ಕಡಿಮೆ ಮಾಡುವುದು ಹಾಗೂ ಸಂಚಾರ ದಟ್ಟಣೆಯ ನಡುವೆ ಅಪಘಾತ ಸ್ಥಳಕ್ಕೆ ಶೀಘ್ರ ವೈದ್ಯಕೀಯ ಸೇವೆ ಒದಗಿಸುವುದು ಇದರ ಉದ್ದೇಶವಾಗಿತ್ತು. ರೋಗಿಯನ್ನು ಆಸ್ಪತ್ರೆಗೆ ಕರೆದೊಯ್ಯುವ ಅವಕಾಶ ಇಲ್ಲದಿರುವುದರಿಂದ ರೋಗಿಗಳು ಹಾಗೂ ಅವರ ಕಡೆಯವರು ಈ ಸೇವೆ ನಿರಾಕರಿಸಲಾರಂಭಿಸಿದ್ದಾರೆ.

ಸಂಖ್ಯೆ ಇಳಿಮುಖ: ಜಿವಿಕೆ ಇಎಂಆರ್‌ಐ ಸಂಸ್ಥೆ ಬೈಕ್ ಆಂಬುಲೆನ್ಸ್‌ಗಳನ್ನು ನಿರ್ವಹಣೆ ಮಾಡುತ್ತಿದೆ. ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ 2018ರಿಂದ 2022ರ ಜುಲೈ ಅಂತ್ಯದವರೆಗೆ 92,905 ಮಂದಿ ನಗರದಲ್ಲಿ ಈ ಸೇವೆ ಪಡೆದಿದ್ದಾರೆ. ಆದರೆ, ವರ್ಷದಿಂದ ವರ್ಷಕ್ಕೆ ಬೈಕ್ ಆಂಬುಲೆನ್ಸ್ ಸೇವೆ ಪಡೆಯುವವರ ಸಂಖ್ಯೆ ಇಳಿಮುಖ ಆಗುತ್ತಿದೆ.

'ರಸ್ತೆ ಅಪಘಾತ ಸಂಭವಿಸಿದಾಗ ವ್ಯಕ್ತಿ ಗಂಭೀರವಾಗಿ ಗಾಯಗೊಂಡಲ್ಲಿ ಆಂಬುಲೆನ್ಸ್‌ಗೆ ಮೊರೆ ಹೋಗುತ್ತಾರೆ. ಸಣ್ಣ ಗಾಯವಾದವರು ಬೈಕ್ ಆಂಬುಲೆನ್ಸ್ ಬಗ್ಗೆ ಮಾಹಿತಿ ಇಲ್ಲದಿರುವುದರಿಂದ ಹತ್ತಿರದ ಆಸ್ಪತ್ರೆಗೆ ತೆರಳಿ, ಚಿಕಿತ್ಸೆ ಪಡೆಯುತ್ತಿದ್ದಾರೆ. ಇದರಿಂದಾಗಿ ಬೈಕ್ ಆಂಬುಲೆನ್ಸ್ ಸೇವೆಗೆ ಹಿನ್ನಡೆಯಾಗಿದೆ. ಸಂಚಾರ ದಟ್ಟಣೆಯ ಪ್ರದೇಶದಲ್ಲಿ ತುರ್ತಾಗಿಯೇ ಸ್ಥಳ ತಲುಪುವುದು ಸವಾಲಾಗಿದೆ' ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

'ಕೆಲ ರಾಷ್ಟ್ರಗಳಲ್ಲಿ ಬೈಕ್ ಆಂಬುಲೆನ್ಸ್ ಸೇವೆ ಯಶಸ್ವಿ ಆಗಿದೆ. ಅಧಿಕ ಸಂಚಾರ ದಟ್ಟಣೆ ಇರುವ ಪ್ರದೇಶಗಳಲ್ಲಿ ಶೀಘ್ರ ಸೇವೆ ಒದಗಿಸಲು ಸಹಕಾರಿ ಎಂಬ ಕಾರಣಕ್ಕೆ ಈ ಸೇವೆ ಪರಿಚಯಿಸಲಾಯಿತು. ಆದರೆ, ನಿರೀಕ್ಷಿತ ಯಶಸ್ಸು ಸಿಕ್ಕಿಲ್ಲ. ಸಿಬ್ಬಂದಿ ರಜಾ ಇದ್ದಲ್ಲಿ ಸೇವೆಯಲ್ಲಿ ವ್ಯತ್ಯಯವಾಗುತ್ತದೆ' ಎಂದು ಹೇಳಿದರು.



ನಗರದಲ್ಲಿ ಸಂಚರಿಸುತ್ತಿರುವ ಬೈಕ್ ಆಂಬುಲೆನ್ಸ್ – ಪ್ರಜಾವಾಣಿ ಚಿತ್ರ

ಸೇವೆ ಪಡೆದವರ ವಿವರ

ವರ್ಷ	ಸೇವೆ ಪಡೆದವರು
2018	29,113
2019	28,887
2020	15,102
2021	12,898
2022(ಜುಲೈವರೆಗೆ)	6,905

ಬೈಕ್ ಆಂಬುಲೆನ್ಸ್ ನಿರ್ವಹಣೆ ಹಾಗೂ ಕಾರ್ಯವಿಧಾನದ ಬಗ್ಗೆ ದೂರುಗಳು ಬರುತ್ತಿವೆ. ಈ ಬಗ್ಗೆ ಸಿಬ್ಬಂದಿಯಿಂದ ಮಾಹಿತಿ ಪಡೆಯಲಾಗುವುದು.

ಡಿ. ರಂದೀಪ್, ಆರೋಗ್ಯ ಇಲಾಖೆ ಆಯುಕ್ತ

'ನರ್ಸಿಂಗ್ ಪದವೀಧರರ ನಿರಾಸಕ್ತಿ'

'ಗಾಯಗೊಂಡವರಿಗೆ ಬೈಕ್ ಆಂಬುಲೆನ್ಸ್ ಸವಾರರೇ ಶುಶ್ರೂಷೆ ಮಾಡಬೇಕಾಗುತ್ತದೆ. ಹೀಗಾಗಿ ನರ್ಸಿಂಗ್ ಕೋರ್ಸ್ ಓದಿದವರನ್ನು ಮಾತ್ರ ನೇಮಕ ಮಾಡಿಕೊಳ್ಳಬೇಕಾಗಿದೆ. ಆದರೆ, ನರ್ಸಿಂಗ್ ಪದವೀಧರರು ಬೈಕ್ ಆಂಬುಲೆನ್ಸ್ ಸೇವೆ ಒದಗಿಸಲು ಮುಂದೆ ಬರುತ್ತಿಲ್ಲ. ಆಸ್ಪತ್ರೆಗಳಲ್ಲಿಯೇ ಸೇವೆ ಸಲ್ಲಿಸಲು ಹೆಚ್ಚು ಆಸಕ್ತಿ ತೋರುತ್ತಾರೆ' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಬೈಕ್ ಆಂಬುಲೆನ್ಸ್ ಯೋಜನೆ ಹಿನ್ನಡೆ ಅನುಭವಿಸಲು ಸಿಬ್ಬಂದಿ ಸಮಸ್ಯೆ ಕೂಡ ಕಾರಣ. ಪ್ರತಿ ಬೈಕ್ ಆಂಬುಲೆನ್ಸ್‌ಗೆ ಒಬ್ಬ ಬೈಕ್ ಸವಾರ ಮಾತ್ರ ಇರುತ್ತಾರೆ. ಹೀಗಾಗಿ ಅವರು ರಜೆ ಪಡೆದಲ್ಲಿ ಆ ಬೈಕ್‌ನ ಸೇವೆ ಸ್ಥಗಿತಗೊಳಿಸಬೇಕಾಗುತ್ತದೆ' ಎಂದರು.

ಲಭ್ಯವಿರುವ ಸೇವೆಗಳು: ಗ್ಲುಕೊಮೀಟರ್, ಆಕ್ಸಿಜನ್ ಸಿಲಿಂಡರ್, ಹೃದಯಬಡಿತ ಹಾಗೂ ರಕ್ತದೊತ್ತಡ ಪರೀಕ್ಷಿಸುವ ಉಪಕರಣಗಳು, ಇನ್ನ್ಯುಲೇಟರ್ ಕಿಟ್, ಬ್ಯಾಂಡೇಜ್, ಜೀವರಕ್ಷಕ ಔಷಧ, ಉಪಕರಣಗಳು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೋಲಾರ ವಿಭಾಗ, ಕೋಲಾರ

ಸಂ: ಕರಾಸಾ/ಕೋವಿ/ಸಂಚಾರ/ವಾಣಿಜ್ಯ/590/2022–23 ದಿನಾಂಕ: 10.08.2022

ಸಂಧಾನ/ಮಾತುಕತೆ ಪ್ರಕಟಣೆ ಸಂ: 06/2022 (ವಾಣಿಜ್ಯ ಮಳಿಗೆಗಳು) (ಸಾ.ಸ್ಥಾ. ಆದೇಶ ಸಂಖ್ಯೆ 787/17 ರಂತೆ) ಹಾಗೂ ಹೋರ್ಡಿಂಗ್ಸ್ ಮತ್ತು ಗ್ಲೋಸೈನ್ ಪಲಕಗಳ (ಸಾ.ಸ್ಥಾ. ಆದೇಶ ಸಂಖ್ಯೆ 788/17 ರಂತೆ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಕೋಲಾರ ವಿಭಾಗದ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ವಾಣಿಜ್ಯ ಮಳಿಗೆಗಳಿಗೆ ಮತ್ತು ಹೋರ್ಡಿಂಗ್ಸ್ & ಗ್ಲೋಸೈನ್ ಪಲಕಗಳಿಗೆ ಸಂಧಾನ / ಮಾತುಕತೆ ಪ್ರಕಟಣೆ 06/2022 ಹೊರಡಿಸಿದ್ದು, ದಿ: **02.09.2022**ರಂದು **12:00** ಗಂಟೆಗೆ ಸಂಧಾನವನ್ನು ನಿಗದಿಪಡಿಸಲಾಗಿದೆ. ಆಸಕ್ತಿದಾರರು ಕಛೇರಿ ವೇಳೆಯಲ್ಲಿ ಸೂಚಿತ ಅರ್ಜಿ ಶುಲ್ಕ ಪಾವತಿಸಿ ದಿ: 01.09.2022ರ 12:00 ಗಂಟೆಯವರೆಗೆ ರಾಷ್ಟ್ರೀಕೃತ / ಶೆಡ್ಯೂಲ್ ಬ್ಯಾಂಕ್‌ನಿಂದ ನಿಗದಿತ ಅರ್ಜಿ ಶುಲ್ಕದ ಡಿಡಿ ಸಲ್ಲಿಸಿ ಅಥವಾ ಈ ಕಛೇರಿಯಲ್ಲಿ ನಗದು ಪಾವತಿಸಿ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೋಲಾರ ವಿಭಾಗದಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ಮೊಬೈಲ್ ಸಂಖ್ಯೆ: **7760990602** (ವಿಭಾಗೀಯ ಸಂಚಲನಾಧಿಕಾರಿಗಳು), **7760990620** (ಸಹಾಯಕ ಸಂಚಾರ ವ್ಯವಸ್ಥಾಪಕರು), **9448316268** (ವಿಷಯ ನಿರ್ವಾಹಕರು).

ಯಾವುದೇ ಕಾರಣ ನೀಡದೆ ಸಂಧಾನ/ಮಾತುಕತೆ ಪುರಸ್ಕರಿಸುವ ಹಾಗೂ ತಿರಸ್ಕರಿಸುವ, ಮುಂದೂಡುವ ಮತ್ತು ರದ್ದು ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ
ಕೋಲಾರ ವಿಭಾಗ

ವಾಸಾಸಂಇ/ವಾಪ್ರ/ಎಲ್‌ಸಿ/1853/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೆಲಮಂಗಲ ದೇವಿಹಳ್ಳಿ ಎಕ್ಸ್‌ಪ್ರೆಸ್‌ವೇ ಪ್ರೈವೇಟ್ ಲಿಮಿಟೆಡ್

ಟೋಲ್ ಪ್ಲಾಜಾ ಆಡಳಿತ ಕಟ್ಟಡ, ಕರೇಕಲ್ ಗ್ರಾಮ, ಕಸಬಾ ಹೋಬಳಿ, NH–75, ನೆಲಮಂಗಲ ತಾಲ್ಲೂಕು, ಬೆಂಗಳೂರು–562123.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ರಾ.ಹೆ. –75 (ಹಳೇ ಸಂಖ್ಯೆ48) ರ ನೆಲಮಂಗಲ–ದೇವಿಹಳ್ಳಿ ಸೆಕ್ಷನ್‌ನಲ್ಲಿ ಕಿಮೀ 28.200 ರಿಂದ 110.000 ವರೆಗಿನ ರಾಷ್ಟ್ರೀಯ ಹೆದ್ದಾರಿ ಬಳಕೆಯನ್ನು ಎನ್‌ಹೆಚ್‌ಎಐ ನ ಪತ್ರ ಸಂಖ್ಯೆ ಎನ್‌ಹೆಚ್‌ಎಐ/ಪಿಐಯು – ಹಾಸನ/25001/4/1/630 ದಿನಾಂಕ 18.08.2022ರ ಅನುಮೋದನೆಯ ಪ್ರಕಾರ ಪರಿಷ್ಕರಿಸಲ್ಪಟ್ಟಿದ್ದು, ಪರಿಷ್ಕೃತ ದರಗಳು 1ನೇ ಸೆಪ್ಟೆಂಬರ್ 2022 ರಿಂದ ಕೆಳಕಂಡ ಟೋಲ್ ಪ್ಲಾಜಾಗಳಲ್ಲಿ ಜಾರಿಯಾಗಲಿದೆ:

ದೊಡ್ಡಕರೇನಹಳ್ಳಿ ಟೋಲ್ ಪ್ಲಾಜಾ (ಕಿಮೀ.32.600) ಒಟ್ಟು ಉದ್ದ 40.131 ಕಿ.ಮೀ.ದೂರಕ್ಕಾಗಿ ರಾ.ಹೆ.75 (ಹಳೇ.ರಾ.ಹೆ.48) ಟೋಲ್ ಶುಲ್ಕದ ದರಗಳು ಮತ್ತು ಕಾರಬೈಲು ಟೋಲ್ ಪ್ಲಾಜಾ (ಕಿಮೀ.100.250) ಕ್ಕಾಗಿ ಒಟ್ಟು ಉದ್ದ 40.131 ಕಿ.ಮೀ.ದೂರಕ್ಕಾಗಿ ರಾ.ಹೆ. –75 (ಹಳೇ ಸಂಖ್ಯೆ48) ರ ಟೋಲ್ ಶುಲ್ಕದ ದರಗಳು ಈ ಕೆಳಗಿನಂತೆ ಅನ್ವಯವಾಗುತ್ತವೆ.

ವಾಹನದ ವಿಧ	ಒಂದು ಪ್ರಯಾಣದ ಶುಲ್ಕ (ರೂ.)	ಒಂದು ದಿನದಲ್ಲಿ ಅನೇಕ ಪ್ರಯಾಣಕ್ಕಾಗಿ (ರೂ.)	ತಿಂಗಳಲ್ಲಿ 60 ಸಿಂಗಲ್ ಪ್ರಯಾಣಗಳಿಗೆ ಮಾಸಿಕ ಪಾಸ್ (ರೂ.)
ಕಾರು/ವ್ಯಾನ್/ಜೀಪ್/ (ಎಲ್‌ಎಂ.ವಿ)	50.00	80.00	1570.00
ಲಘು ವಾಣಿಜ್ಯ ವಾಹನ (ಎಲ್‌ಸಿವಿ)	90.00	135.00	2750.00
ಟ್ರಕ್/ಬಸ್	185.00	275.00	5495.00
ಮಲ್ಟಿ ಆಕ್ಸಲ್ ವೆಹಿಕಲ್ (> 2ಆಕ್ಸಲ್), ಬೃಹತ್ ನಿರ್ಮಾಣ ಯಂತ್ರೋಪಕರಣ ಅಥವಾ ಅರ್ಥಮೂವಿಂಗ್ ಸಾಧನ	295.00	440.00	8835.00

1) ಸ್ಥಳೀಯ ಸಂಚಾರ (ಕಾರ್/ಜೀಪ್/ವ್ಯಾನ್)ಕ್ಕೆ ಮಾಸಿಕ ಪಾಸ್ ಶುಲ್ಕವು, ಪ್ಲಾಜಾದಿಂದ 10 ಕಿ.ಮೀ/10–20 ಕಿ.ಮೀ. ಸುತ್ತಳತೆಯಲ್ಲಿರುವ ವ್ಯಕ್ತಿಗಳಿಗೆ ರೂ. 150.00/ ರೂ. 300–00 ಇದ್ದು, ಸ್ಥಳೀಯ ಎಲ್ ಸಿವಿ/ ಟ್ರಕ್‌ಗಳಿಗಾಗಿ ರಿಯಾಯ್ತಿ ಶುಲ್ಕವು ಪ್ರತಿ ಪ್ರವೇಶಕ್ಕೆ ಕ್ರಮ ಬದ್ಧವಾಗಿ ರೂ. 15.00 / ರೂ. 25.00 ಇರುತ್ತದೆ. ಶಾಲಾ ವಿದ್ಯಾರ್ಥಿಗಳ ಶಾಲಾ ಬಸ್ ಗಳಿಗಾಗಿ ಮಾಸಿಕ ಶುಲ್ಕ ರೂ. 1,000–00.

2) ದಿನಾಂಕ 19.07.2019 ಮತ್ತು 29.11.2019 ರಂದು ಭಾರತ ಸರ್ಕಾರ ಹೊರಡಿಸಿರುವ ನಿರ್ದೇಶನದ ಸುತ್ತೋಲೆಯ ಪ್ರಕಾರ ದಿನಾಂಕ 15.12.2019 ರಿಂದ ಎಲ್ಲಾ ಎನ್ ಎಚ್ ಟೋಲ್ ಪ್ಲಾಜಾಗಳಲ್ಲಿ ಫಾಸ್ಟ್ಯಾಗ್ ಕಡ್ಡಾಯವಾಗಿದೆ ಮತ್ತು ದಿನಾಂಕ 15.05.2020 ರ ಭಾರತ ಸರ್ಕಾರದ ಗೆಜೆಟ್ ಅಧಿಸೂಚನೆ ಸಂಖ್ಯೆ G.S.R 298 ಅನುಸಾರವಾಗಿ ದಿನಾಂಕ 04.12.2020 ರ ಎನ್ ಎಚ್ ಎ ಐ ಪತ್ರ ಸಂಖ್ಯೆ NHAI/100% FASTag/2020 ಪ್ರಕಾರ ಫಾಸ್ಟ್ಯಾಗ್ ಇಲ್ಲದ ವಾಹನಗಳು ಮತ್ತು ಮಾನ್ಯವಿಲ್ಲದ ಅಥವಾ ಕಾರ್ಯರಹಿತ ಫಾಸ್ಟ್ಯಾಗ್ ಹೊಂದಿರುವ ವಾಹನಗಳು ಫಾಸ್ಟ್ಯಾಗ್ ಪಥದಲ್ಲಿ ಚಲಿಸಲು ಎರಡರಷ್ಟು ಟೋಲ್ ಶುಲ್ಕವನ್ನು ಪಾವತಿಸಬೇಕಾಗುತ್ತದೆ.

3) ಅನುಮತಿಸುವ ಲೋಡ್‌ಗಿಂತ ಹೆಚ್ಚು ಲೋಡ್ ಮಾಡಲಾದ ವಾಹನಗಳು, ಗರಿಷ್ಠ ಅನುಮತಿಸುವ GVW (ಒಟ್ಟು ವಾಹನದ ತೂಕ) ಗಿಂತ ಹೆಚ್ಚಿನ ಲೋಡ್‌ನ ಶೇಕಡಾವಾರು ಆಧಾರದ ಮೇಲೆ ಅನ್ವಯವಾಗುವ ಬಳಕೆದಾರ ಶುಲ್ಕದ 10 ಪಟ್ಟು ವರೆಗೆ ಪಾವತಿಸಲು ಜವಾಬ್ದಾರರಾಗಿರುತ್ತಾರೆ ಮತ್ತು ಅಂತಹ ಹೆಚ್ಚುವರಿ ಲೋಡ್ ಅನ್ನು ತಮ್ಮ ಸ್ವಂತ ಖರ್ಚು ಮತ್ತು ವೆಚ್ಚದಲ್ಲಿ ತೆಗೆದುಹಾಕಬೇಕೆಂದು MORTH ಪ್ರಕಟಿಸಿದ NH ಶುಲ್ಕ (ದರಗಳು ಮತ್ತು ಸಂಗ್ರಹಣೆಯ ನಿರ್ಣಯ) ತಿದ್ದುಪಡಿ ನಿಯಮಗಳು 2013, 2015 ಮತ್ತು 2018 ರ ಪ್ರಕಾರ ಹೆದ್ದಾರಿಯನ್ನು ಬಳಸಲು ಗೆಜೆಟ್ ಅಧಿಸೂಚನೆ ಸಂಖ್ಯೆಗಳು G.S.R.778(ಇ) dt.16.12.2013, G.S.R.220(ಇ) dt. 23.03.2015 & G.S.R.920(ಇ) dt. 25.09.2018, ಮತ್ತು NHAI ನೀತಿ ಸುತ್ತೋಲೆ ಸಂಖ್ಯೆ 11041/218/2007–Admn dt. 31.12.2015.

ಸಹಿ/- ಸಕ್ಷಮ ಹಸ್ತಾಕ್ಷರಿ
ನೆಲಮಂಗಲ ದೇವಿಹಳ್ಳಿ ಎಕ್ಸ್‌ಪ್ರೆಸ್‌ವೇ ಪ್ರೈವೇಟ್ ಲಿಮಿಟೆಡ್

ಕರ್ನಾಟಕ ಸರ್ಕಾರ
ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ

ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ.ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059 ಫೋನ್ : 080–28484515/080–28484518

ಸಂಖ್ಯೆ: ಡಿಪಿಎಸ್ 26 ಸಿಎಸ್‌ಟಿ (ಜಿ) 2022–23 ದಿನಾಂಕ: 17.08.2022

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರಿನಲ್ಲಿನ (ಬಿಬಿಎಂಪಿ ವ್ಯಾಪ್ತಿ) ಅರ್ಹ ಮುದ್ರಣ ಹಾಗೂ ಬೈಂಡಿಂಗ್ ಸಂಸ್ಥೆಗಳಿಂದ ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು ಇಲ್ಲಿಗೆ ಅವಶ್ಯಕವಿರುವ ಏಕ ವರ್ಣ ಮತ್ತು ನಾಲ್ಕು ವರ್ಣ ಮುದ್ರಣ ಹಾಗೂ ಬೈಂಡಿಂಗ್ ಕೆಲಸಗಳನ್ನು ಒಂದು ವರ್ಷದ ಅವಧಿಯವರೆಗೆ ದರಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಕೆ.ಟಿ.ಪಿ.ಪಿ ನಿಯಮಗಳಡಿ ಎರಡು ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ.35.00 ಲಕ್ಷಗಳಾಗಿದ್ದು ಇದರ ಒಟ್ಟು ಇಎಂಡಿ ಮೊತ್ತ ರೂ.1.75 ಲಕ್ಷಗಳು. ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03.09.2022. ವಿವರವಾದ ಟೆಂಡರ್ ದಸ್ತಾವೇಜನ್ನು website: https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ನಿರ್ದೇಶಕರು

ವಾ.ಸಾ.ಸಂ.ಇ/ವಾಪ್ರ/1851/ಆಕಾರ್/22–23

ಕೋವಿಡ್-19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಕಟಣೆ

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230
ನೋಂದಣಿ ಕಛೇರಿ: ಸಂಖ್ಯೆ. 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100 ದೂರವಾಣಿ : 080–41362000 ಫ್ಯಾಕ್ಸ್: 080–41362010
ವೆಬ್‌ಸೈಟ್ : www.timken.com/en-in ಇ–ಮೇಲ್: tilinvestor@timken.com

ಈ ಪ್ರಕಾರವಾದ 3 ಷೇರು ಸರ್ಟಿಫಿಕೇಟುಗಳು ಪ್ರತಿ ಷೇರಿಗೆ ರೂ.10/– ರಂತೆ ಕಂಪನಿಯ ಒಟ್ಟಾರೆ 1057 ಈಕ್ವಿಟಿ ಷೇರುಗಳನ್ನು ಹೊಂದಿರುವ ಸಂಖ್ಯೆಗಳು. 224978, 224979 ಹಾಗೂ 225980 ಮತ್ತು ಅಜೇಯ್ ಕುಮಾರ್ ಮಿಲ್ಹೋತ್ರ ಜೊತೆಯಲ್ಲಿ ರಾಮ್ ಕುಮಾರ್ ಮಿಲ್ಹೋತ್ರ, ಅಮಿತ್ ಕುಮಾರ್ ಮಿಲ್ಹೋತ್ರ ಜೊತೆಯಲ್ಲಿ ರಾಮ್ ಕುಮಾರ್ ಮಿಲ್ಹೋತ್ರ ಮತ್ತು ರಾಮ್ ಕುಮಾರ್ ಮಿಲ್ಹೋತ್ರ ಇವರ ಹೆಸರುಗಳಲ್ಲಿ ನೋಂದಾಯಿತವಾದ ಟಿಮ್‌ಕೆನ್ ಇಂಡಿಯಾ ನಿಯಮಿತದ ಡಿಸ್ಟಿಂಕ್ಟಿವ್ ಸಂಖ್ಯೆಗಳು. 68006732–7076, 68007077–7421 ಮತ್ತು 68112096–2462 ಗಳನ್ನು ಒಳಗೊಂಡ ಎಲ್ಲಾ ಷೇರು ಸರ್ಟಿಫಿಕೇಟುಗಳು ಕಾಣೆಯಾಗಿದ್ದು, ಮೇಲೆ ತಿಳಿಸಿರುವ ಎಲ್ಲಾ ಷೇರುದಾರರಿಂದ ಇದರ ಬದಲಾಗಿ ಷೇರು ಸರ್ಟಿಫಿಕೇಟುಗಳ ಪ್ರತಿಗಳನ್ನು ನೀಡಲು ಕಂಪನಿಯು ಅರ್ಜಿಗಳನ್ನು ಸ್ವೀಕರಿಸಿದೆ ಎಂದು ಈ ಮೂಲಕ ಪ್ರಕಟಿಸಲಾಗಿದೆ. ಸದರಿ ಪ್ರಕಟಣೆಯಲ್ಲಿ ತಿಳಿಸಿರುವಂತೆ ಮೂಲ ಷೇರು ಸರ್ಟಿಫಿಕೇಟುಗಳ ಕಣ್ಮರೆ ಬದಲಾಗಿ ಸರ್ಟಿಫಿಕೇಟುಗಳ ಪ್ರತಿಯನ್ನು ನೀಡಲು ಯಾವುದೇ ವ್ಯಕ್ತಿಗೆ (ಗಳಿಗೆ) ಆಕ್ಷೇಪಣೆಗಳು ಇದ್ದಲ್ಲಿ, ಈ ಪ್ರಕಟಣೆಯು ಪ್ರಕಟಗೊಂಡ 7 ದಿನದೊಳಗೆ ಮೇಲೆ ತಿಳಿಸಿರುವ ವಿಳಾಸಕ್ಕೆ ತನ್ನ/ತಮ್ಮ/ಅವರ ಆಕ್ಷೇಪಣೆಗಳನ್ನು ಕಂಪನಿಗೆ ಸಲ್ಲಿಸಬೇಕು ಎಂಬುದಾಗಿ ಇದರಲ್ಲಿ ಸೂಚಿಸಿರುವಂತೆ ನಿಮ್ಮನ್ನು/ತಮ್ಮನ್ನು ವಿನಂತಿಸಲಾಗಿದೆ. ತದನಂತರ ಕಂಪನಿಯು ಕಳೆದು ಹೋಗಿರುವ ಮೂಲ ಷೇರು ಸರ್ಟಿಫಿಕೇಟುಗಳಿಗೆ ಬದಲಾಗಿ ಸರ್ಟಿಫಿಕೇಟುಗಳ ಪ್ರತಿಯನ್ನು ನೀಡಲು ತೀರ್ಮಾನಿಸುತ್ತದೆ. ಸಾರ್ವಜನಿಕರು ಕಳೆದು ಹೋಗಿರುವ ಮೇಲಿನ ಷೇರು ಸರ್ಟಿಫಿಕೇಟುಗಳೊಂದಿಗೆ ಯಾವುದೇ ರೀತಿಯಲ್ಲೂ ಸಹ ವ್ಯವಹರಿಸಬಾರದೆಂದು ಎಚ್ಚರಿಕೆ ನೀಡಲಾಗುತ್ತಿದೆ.

ಟಿಮ್‌ಕೆನ್ ಇಂಡಿಯಾ ನಿಯಮಿತ ಪರವಾಗಿ
ಸಹಿ/– ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ–ಕಾಂಪ್ಲಯನ್ಸ್

ಸ್ಥಳ: ಬೆಂಗಳೂರು
ದಿನಾಂಕ: 21.04.2022

ಸೀತಾರಾಮ ಲಕ್ಷ್ಮಣ ದೇವಸ್ಥಾನ ಜೀರ್ಣೋದ್ಧಾರ

ಬೆಂಗಳೂರು: ಜೆ.ಪಿ. ನಗರದ ಜರಗನಹಳ್ಳಿಯ ಸೀತಾರಾಮ ಲಕ್ಷ್ಮಣ ಹನುಮಂತ ದೇವಸ್ಥಾನದ ಜೀರ್ಣೋದ್ಧಾರ ಹಾಗೂ ಪುನರ್ ಪ್ರತಿಷ್ಠಾಪನೆ, ನೂತನ ವಿಮಾನ ಗೋಪುರ, ಗರುಡ ಸ್ತಂಭ ಮಹಾಕುಂಭಾಭಿಷೇಕ ಮಹೋತ್ಸವ ಆ. 19 ರಿಂದ 21ರವರೆಗೆ ನಡೆಯಲಿದೆ.

ಶನಿವಾರ (ಆ.20) ವಾಸುದೇವ ಶುದ್ಧಿ, ಪುಣ್ಯಾಹವಾಚನ, ದ್ವಾರ ಆರಾ ಧನೆ, ಕಳಶ ಆರಾಧನೆ, ಆಂಜನೇಯಸ್ವಾಮಿ ಮೂಲಮಂತ್ರ ಹೋಮ, ಬೆಳಿಗ್ಗೆ 8ಕ್ಕೆ ಮಹಾಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ ಮಾಡಲಾಗುತ್ತದೆ.

ಭಾನುವಾರ (21) ಬೆಳಿಗ್ಗೆ 6.15ರಿಂದ 6.45ಕ್ಕೆ ಮಹಾ ಕುಂಭಾಭಿಷೇಕ, ಪಂಚಾಮೃತ ಅಭಿಷೇಕ, ಮಹಾಮಂಗಳಾರತಿ ನೆರವೇರಲಿದೆ.

ಬೆಳಿಗ್ಗೆ 11ಕ್ಕೆ ಜರಗನಹಳ್ಳಿ ಗ್ರಾಮದ ಮಹಿಳೆಯರಿಂದ ಸ್ವಾಮಿಗೆ ಬೆಲ್ಲದಾರತಿ, ಮಧ್ಯಾಹ್ನ 12.30ಕ್ಕೆ ತೀರ್ಥ ಪ್ರಸಾದ ವಿನಿಯೋಗ ಹಾಗೂ ಅನ್ನಸಂತರ್ಪಣೆ ಮಾಡಲಾಗುವುದು. ಸಂಜೆ 6ಕ್ಕೆ ಗ್ರಾಮದ ರಾಜ ಬೀದಿಗಳಲ್ಲಿ ಸೀತಾರಾಮ ಲಕ್ಷ್ಮಣ ಹನುಮಂತ ಮೂರ್ತಿಗಳನ್ನು ಹೂವಿನ ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.



ಸೀತಾರಾಮ ಲಕ್ಷ್ಮಣ ಹನುಮಂತ ದೇವರಿಗೆ ಹೂವಿನ ಅಲಂಕಾರ ಮಾಡಿರುವುದು

IN THE HIGH COURT OF KARNATAKA, DHARWAD BENCH

MFA No. 102374/2020 (MV)
Substituted service of Notice by way of Paper Publication
(DIVISION BENCH MATTER)

Appellant:
DIVISIONAL MANAGER,ORIENTAL INSURANCE CO. LTD., ENKAY COMPLEX, 2nd FLOOR KESHWAPUR, HUBLI, (POLICYNO.1454301/31/2016/2259 FROM 14-11-2015 TO 13-11-2016)REPTD.BY AUTHORIZED SIGNATORY R.O (BY SRI. S.S.JOSHI,ADV.)

Respondents:
M/S VIMAL RIG SERVICE PROPRIETOR SRI.V.K.GUNASHEKHAR AGE: 48 YEARS, OCC : BUSINESS.R/O: 83/11, 1ST MAIN ROAD, KALASIPALAYAM NEW EXTENSION BENGALURU-560002(OWNER OF LORRY BEARING REG.NO.KA-01/MD-5299)AND OTHERS.

To: Respondent No. 1
1)M/S VIMAL RIG SERVICE PROPRIETOR SRI.V.K.GUNASHEKHAR AGE: 48YEARS, OCC : BUSINESS.R/O: 83/11, 1ST MAINROAD,KALASIPALAYAM NEWEXTENSION BENGALURU-560002(OWNER OF LORRY BEARING REG.NO.KA-01/MD-5299)

Take Notice that the Appellant above named has preferred above mentioned Miscellaneous First Appeal before this Court being aggrieved by the Judgement /Award/Order passed on 7/3/2020 by THE SENIOR CIVIL JUDGE & MACT SHIGGAON & ITINERARY COURT AT SAVANUR in M.V.C Number 122/2017 (OLD M.V.C. NO.166/2017)and the Court required you to appear before this Hon'ble Court in person or through an advocate duly instructed to appear on 20/09/2022 at 10.30 AM, failing which the matter would be heard and decided in your absence.Given under my hand and the seal of this court on 08TH DAY OF AUGUST, 2022.

By Order of the Court
Sd/- (Neelappa Bover)
Assistant Registrar

ಹೃದಯ ಸ್ತಂಭನ ಚಿಕಿತ್ಸೆಗೆ 'ಸಿಪಿಆರ್' ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯ ಸ್ತಂಭನಕ್ಕೆ ಒಳಗಾದವರಿಗೆ ತುರ್ತಾಗಿ ಚಿಕಿತ್ಸೆ ಒದಗಿಸುವಿಕೆಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯು 'ಸಿಪಿಆರ್' (ಕಾರ್ಡಿಯೋ ಪಲ್ಮನರಿ ರೆಸಸಿಟೇಶನ್) ತರಬೇತಿ ಹಮ್ಮಿಕೊಂಡಿದೆ.

'ವ್ಯಕ್ತಿ ಪ್ರಜ್ಞೆ ತಪ್ಪಿ ಬಿದ್ದಾಗ ಭುಜವನ್ನು ತಟ್ಟಿ, ಉಸಿರಾಟ ಹಾಗೂ ಎದೆಯ ಬಡಿತವನ್ನು ಪರೀಕ್ಷಿಸಬೇಕು. ವ್ಯಕ್ತಿ ಯಾವುದೇ ರೀತಿಯ ಪ್ರತಿಕ್ರಿಯೆ ನೀಡದಿದ್ದಲ್ಲಿ 108ಕ್ಕೆ ಸಂಪರ್ಕಿಸಿ, 'ಸಿಪಿಆರ್' ನೀಡಬೇಕು. ಬಳಿಕ ಆಂಬುಲೆನ್ಸ್ ಮೂಲಕ ಹೃದಯ ಚಿಕಿತ್ಸೆಗೆ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಬೇಕು. ಸಿಪಿಆರ್ ತರಬೇತಿ ಬಗ್ಗೆ ಸಂಘ–ಸಂಸ್ಥೆಗಳು ನಗರದ ಮಾಗಡಿ ರಸ್ತೆಯಲ್ಲಿರುವ ಆರೋಗ್ಯ ಸೌಧವನ್ನು ಸಂಪರ್ಕಿಸಬಹುದು' ಎಂದು ಇಲಾಖೆ ಹೇಳಿದೆ.

'ನಿಂತಿರುವ ಹೃದಯ ಬಡಿತವನ್ನು ಪುನಃ ಪ್ರಾರಂಭವಾಗುವಂತೆ ಮಾಡುವ ಪ್ರಕ್ರಿಯೆಗೆ ಸಿಪಿಆರ್ ಎಂದು ಕರೆಯಲಾಗುತ್ತದೆ. ಹೃದಯ ಸ್ತಂಭನ ಆದಾಗ ಮೂರರಿಂದ ನಾಲ್ಕು ನಿಮಿಷಗಳಲ್ಲಿಯೇ ಹೃದಯವನ್ನು ಪುನಶ್ಚೇತನಗೊಳಿಸಬೇಕು. ಹೃದಯ ಬಡಿತ, ಉಸಿರಾಟ ಇದ್ದರೆ ಅದು ಹೃದಯ ಸ್ತಂಭನವಲ್ಲ. ಹೃದಯದ ಮಸಾಜ್‌ನಿಂದ ವ್ಯಕ್ತಿ ಎಚ್ಚರಗೊಂಡ ಬಳಿಕ ಸಿಪಿಆರ್ ಪ್ರಕ್ರಿಯೆ ಸ್ಥಗಿತಗೊಳಿಸಬೇಕು' ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದ್ದಾರೆ.

'ಸಿಪಿಆರ್ ಎನ್ನುವುದು ವೈದ್ಯರು ಮತ್ತು ಶುಶ್ರೂಷಕರಿಗೆ ಸೀಮಿತವಾಗಿಲ್ಲ. ಇದರ ಬಗ್ಗೆ ಜನಸಾಮಾನ್ಯರಿಗೂ ಮಾಹಿತಿ ಇರಬೇಕು' ಎಂದು ಹೇಳಿದ್ದಾರೆ.

ನಾಳೆ ಕನಕ ಭವನ ಉದ್ಘಾಟನೆ: ಸೋಮಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಯವರ ನಗರೋತ್ಥಾನ ಯೋಜನೆಯ ಅನುದಾನದಲ್ಲಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ನಿರ್ಮಿಸಿರುವ ಕನಕ ಭವನ ಮತ್ತು ಇತರ ಕಟ್ಟಡಗಳ ಉದ್ಘಾಟನೆ ಭಾನುವಾರ (ಆಗಸ್ಟ್ 21) ನಡೆಯಲಿದೆ ಎಂದು ಸ್ಥಳೀಯ ಶಾಸಕರೂ ಆಗಿರುವ ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ 1 ಎಕರೆ 14 ಗುಂಟೆ ವಿಸ್ತೀರ್ಣದಲ್ಲಿ ₹ 12 ಕೋಟಿ ವೆಚ್ಚದಲ್ಲಿ ಕನಕ ಭವನ ನಿರ್ಮಿಸಲಾಗಿದೆ ಎಂದರು.

ಹಿಂದುಳಿದ ವರ್ಗಗಳಿಗೆ ಸೇರಿದ 250 ಅಭ್ಯರ್ಥಿಗಳಿಗೆ ಈ ಕಟ್ಟಡದಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಆರಂಭಿಸಲಾಗುವುದು. ಅದಕ್ಕಾಗಿ ₹ 4 ಕೋಟಿ ವೆಚ್ಚದಲ್ಲಿ ವಸತಿನಿಲಯ ನಿರ್ಮಾಣಕ್ಕೆ ಆ.21ರಂದು ಭೂಮಿಪೂಜೆ ನೆರವೇರಿಸಲಾಗುವುದು' ಎಂದು ಅವರು ತಿಳಿಸಿದರು.

ಚಂದ್ರಾ ಬಡಾವಣೆಯಲ್ಲಿ ₹ 2.50 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಅಗ್ರಹಾರ ದಾಸರಹಳ್ಳಿಯಲ್ಲಿ ₹ 3 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಪಂತರಪಾಳ್ಯದಲ್ಲಿ ₹ 4 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ವಾರ್ಡ್ ಕಚೇರಿ ಉದ್ಘಾಟನೆಯೂ ಅದೇ ದಿನ ನಡೆಯಲಿದೆ.

ನಾಗರಬಾವಿ ವಾರ್ಡ್‌ನ ಚಂದ್ರ ಬಡಾವಣೆ ಎರಡನೇ ಹಂತದಲ್ಲಿ ಆಯೋಜಿಸುವ ಸಾರ್ವಜನಿಕ ಸಮಾರಂಭದಲ್ಲಿ ಉದ್ಘಾಟನೆ ಮತ್ತು ಭೂಮಿಪೂಜೆ ನಡೆಯಲಿವೆ ಎಂದು ವಿವರಿಸಿದರು.

ಕಾಗಿನೆಲೆ ಗುರುಪೀಠದ ನಿರಂಜನಾನಂದಪುರಿ ಹಾಗೂ ಹೊಸದುರ್ಗ ಪೀಠದ ಈಶ್ವರಾನಂದಪುರಿ ಶ್ರೀಗಳು ಸಾನ್ನಿಧ್ಯ ವಹಿಸಲಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಆರ್. ಅಶೋಕ, ಕೋಟ ಶ್ರೀನಿವಾಸ ಪೂಜಾರಿ, ಬೈರತಿ ಬಸವರಾಜ, ಮುನಿರತ್ನ, ಗೋಪಾಲಯ್ಯ, ಸಂಸದ ತೇಜಸ್ವಿ ಸೂರ್ಯ ಹಾಗೂ ಮಾಜಿ ಸಚಿವ ಎಚ್.ಎಂ.ರೇವಣ್ಣ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.



ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ನಯೋಸ/ಸಿಎಲ್‌ಯು–05/1193/2022–23 ದಿ: 19.08.2022

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–ಎ ರಡಿಯಲ್ಲಿ)

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ.ನಂ	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಸಿ. ಅಂಜನಪ್ಪ S/o ಚಿಕ್ಕಮುನಿಯಪ್ಪ	ಯಲಹಂಕ	ಜಾಲ	ಹುಣಸಮಾರನಹಳ್ಳಿ	198/4	2023.41 ಚ.ಮೀ (0–20ಗುಂಟೆ)	ವ್ಯವಸಾಯ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು ಲಭ್ಯವಾಗುತ್ತದೆ. ಈ ಜಾಗದಲ್ಲಿ ಬಹುಮಹಡಿಗಳ ವಾಣಿಜ್ಯ ಕಟ್ಟಡವನ್ನು ಕಟ್ಟುವುದರಿಂದ ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತದೆ ಹಾಗೂ ಜಮೀನಿನ ವಿನ್ಯಾಸ ಅಭಿವೃದ್ಧಿ ಪಡಿಸಿದ ಕಟ್ಟಡದಲ್ಲಿ ಬಡವರು ಮತ್ತು ಮಧ್ಯಮ ವರ್ಗದವರಿಗೆ ಕಡಿಮೆ ಬೆಲೆಯಲ್ಲಿ ಖರೀದಿಸಲು ಅನುಕೂಲವಾಗುತ್ತದೆ ಎಂಬ ತಿಳಿಸುತ್ತಾ, ಸದರಿ ಪ್ರದೇಶವನ್ನು "ವ್ಯವಸಾಯ ವಲಯ" ದಿಂದ "ವಾಣಿಜ್ಯ ಉಪಯೋಗಕ್ಕೆ" ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/78/2022-23 — ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.


ಸೆ.1 ರಿಂದ ತರಬೇತಿ

ಬೆಂಗಳೂರು: ಎನ್‌ಜಿಇಎಫ್ ಲೇಔಟ್‌ನ ಉನ್ನತಿ ಸೆಂಟರ್‌ನಿಂದ 18ರಿಂದ 25 ವರ್ಷದ ಒಳಗಿನ ನಿರುದ್ಯೋಗಿ ಯುವಕ ಹಾಗೂ ಯುವತಿಯರಿಗೆ ಸೆ.1ರಿಂದ ತರಬೇತಿ ಹಮ್ಮಿಕೊಳ್ಳಲಾಗಿದೆ.

ವಿದ್ಯಾರ್ಹತೆ ಅವಶ್ಯಕತೆಯಿಲ್ಲ. ತರಬೇತಿಗೆ ಕನಿಷ್ಠ ಶುಲ್ಕ ನಿಗದಿ ಮಾಡಲಾಗಿದೆ. ಮಾಹಿತಿಗೆ ಮೊ. 73496 47937 ಸಂಪರ್ಕಿಸಬಹುದು.

ನಿಧನ ವಾರ್ತೆ

ಪ್ರಸನ್ನ ಕುಮಾರ್



ಬೆಂಗಳೂರು: ಕನ್ನಡ ಚಳವಳಿಗಾರ, ಲೇಖಕ ಟಿ.ಪಿ. ಪ್ರಸನ್ನ ಕುಮಾರ್ ಅವರು ಶುಕ್ರವಾರ ನಿಧನರಾಗಿದ್ದಾರೆ.

ಅವರು 1960 ರ ದಶಕದಿಂದ ಕನ್ನಡ, ಕನ್ನಡಿಗ ಮತ್ತು ಕರ್ನಾಟಕದ ಹಿತರಕ್ಷಣೆಗಾಗಿ ನಡೆದ ಕನ್ನಡ ಪರ ಚಳವಳಿಗಳಲ್ಲಿ ಸಕ್ರಿಯರಾಗಿದ್ದರು. ಕನ್ನಡ ಪರ ಹೋರಾಟಗಾರರಾದ ವಾಟಾಳ್ ನಾಗರಾಜ್, ಜಿ.ನಾರಾಯಣ ಕುಮಾರ್ ಮತ್ತು ಪ್ರಭಾಕರ ರೆಡ್ಡಿ ಅವರ ಆತ್ಮೀಯ ಒಡನಾಡಿಗಳಾಗಿದ್ದರು.



ಸಮ್ಮೇಳನದಲ್ಲಿ ಐಸಿಎಐ ಅಧ್ಯಕ್ಷ ದೇಬಾಶಿಸ್ ಮಿತ್ರಾ ಅವರು ಬೆಂಗಳೂರು ಶಾಖೆ ಅಧ್ಯಕ್ಷ ಟಿ. ಶ್ರೀನಿವಾಸ್ ಮತ್ತು ದಕ್ಷಿಣ ಭಾರತದ ಪ್ರಾದೇಶಿಕ ಲೆಕ್ಕಪರಿಶೋಧಕರ ಪರಿಷತ್ ಅಧ್ಯಕ್ಷ ಚಿನಾ ಮಸ್ತಾನ್ ತಲಕಾಯಲ ಜೊತೆಗೆ ಚರ್ಚಿಸಿದರು

‘ತಂತ್ರಜ್ಞಾನ ಅಳವಡಿಸಿಕೊಳ್ಳಿ’

ಬೆಂಗಳೂರು: ‘ತಂತ್ರಜ್ಞಾನವು ಭವಿಷ್ಯದಲ್ಲಿ ಆರ್ಥಿಕತೆಯ ಶಕ್ತಿ ವಾಹಕವಾಗಿದೆ. ವೃತ್ತಿಯಲ್ಲಿ ಕೃತಕ ಬುದ್ಧಿಮತ್ತೆ ಸೇರಿ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಅನಿವಾರ್ಯ’ ಎಂದು ಭಾರತೀಯ ಲೆಕ್ಕಪರಿಶೋಧಕರ ಸಂಸ್ಥೆ (ಐಸಿಎಐ) ಅಧ್ಯಕ್ಷ ದೇಬಾಶಿಸ್ ಮಿತ್ರಾ ಸಲಹೆ ನೀಡಿದರು.

ಶುಕ್ರವಾರ ಇಲ್ಲಿ ಆರಂಭವಾದ ಲೆಕ್ಕ-ಪರಿಶೋಧಕರ 18ನೇ ರಾಜ್ಯಮಟ್ಟದ ಎರಡು ದಿನದ ಸಮ್ಮೇಳನ ‘ಜ್ಞಾನ ಸಂಗಮ’ದಲ್ಲಿ ಅವರು, ‘ತಂತ್ರಜ್ಞಾನ ವಿಷಯ ಲೆಕ್ಕಪರಿಶೋಧನಾ ಪಠ್ಯದಲ್ಲಿ ಇಲ್ಲದೇ ಇರಬಹುದು. ಆದರೆ, ಅದು ಬದುಕಿನ ಭಾಗ’ ಎಂದು ಹೇಳಿದರು.

‘ತಂತ್ರಜ್ಞಾನವನ್ನು ಡಿಜಿಟಲ್ ಪೂರ್ವ ಮತ್ತು ಡಿಜಿಟಲ್ ನಂತರದ ಅವಧಿ ಎಂದು ಗುರುತಿಸಬಹುದು. ಡಿಜಿಟಲ್ ನಂತರದ ಅವಧಿಯಲ್ಲಿ ಕೃತಕ ಬುದ್ಧಿಮತ್ತೆ ಮುಂಚೂಣಿಯಲ್ಲಿದೆ. ತಂತ್ರಜ್ಞಾನದ ಮೂಲಕ ನಡೆಯುವ ವಂಚನೆಗಳ ಪತ್ತೆ, ವೃತ್ತಿ ಬೆಳವಣಿಗೆಗೆ ತಂತ್ರಜ್ಞಾನದ ಅರಿವು ಲೆಕ್ಕಪರಿಶೋಧಕರಿಗೆ ಅಗತ್ಯವಾಗಿದೆ’ ಎಂದರು.

ದಕ್ಷಿಣ ಭಾರತದ ಪ್ರಾದೇಶಿಕ ಲೆಕ್ಕ-ಪರಿಶೋಧಕರ ಪರಿಷತ್ ಅಧ್ಯಕ್ಷ ಚಿನಾ ಮಸ್ತಾನ್ ತಲಕಾಯಲ ಮಾತನಾಡಿ, ‘1947ರ ನಂತರದಿಂದ ಇದುವರೆಗೆ ಲೆಕ್ಕಪರಿಶೋಧಕರು ಸಲ್ಲಿಸಿದ ಪ್ರಬಂಧಗಳು ಸೇರಿ ಎಲ್ಲವನ್ನೂ ಡಿಜಿಟಲೀಕರಣಗೊಳಿಸಲು ಉದ್ದೇಶಿಸಲಾಗಿದೆ. ಸುಮಾರು ಮೂರೂವರೆ ಕೋಟಿ ದಾಖಲೆಗಳು ಡಿಜಿಟಲೀಕರಣಗೊಳ್ಳಲಿವೆ. ಇದರಿಂದ ಹಿರಿಯ ಲೆಕ್ಕಪರಿಶೋಧಕರು ತಾವು ವಿದ್ಯಾರ್ಥಿಯಾಗಿದ್ದಾಗ ಸಲ್ಲಿಸಿದ ಪ್ರಬಂಧಗಳನ್ನು ಸಹ ವೀಕ್ಷಿಸಬಹುದಾಗಿದೆ’ ಎಂದರು.

ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆಯ ಬೆಂಗಳೂರು ಶಾಖೆ ಅಧ್ಯಕ್ಷ ಟಿ. ಶ್ರೀನಿವಾಸ್, ಪದಾಧಿಕಾರಿಗಳಾದ ಎ.ಬಿ. ಗೀತಾ, ಪ್ರಮೋದ್ ಹೆಗ್ಡೆ, ಎಸ್. ಪನ್ನುರಾಜ್, ಎಸ್. ದಿವ್ಯಾ ಇದ್ದರು.

₹225 ಕೋಟಿ ವೆಚ್ಚ; ಟೆಂಡರ್ ಬಿಡ್‌ಗೆ ಸೆಪ್ಟೆಂಬರ್ 9ರ ಗಡುವು

ಹೆಬ್ಬಾಳ ಮೇಲ್ಸೇತುವೆ: ಮತ್ತೆರಡು ಲೇನ್, ಅಂಡರ್‌ಪಾಸ್‌ಗೆ ಟೆಂಡರ್


ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಜಂಕ್ಷನ್‌ನಲ್ಲಿ ವಾಹನ ದಟ್ಟಣೆ ನಿವಾರಿಸುವ ಹಿನ್ನೆಲೆಯಲ್ಲಿ ಮೇಲ್ಸೇತುವೆಯಲ್ಲಿ ಮತ್ತೆರಡು ಲೇನ್ ಮಾಡಲು ಹಾಗೂ ಅಂಡರ್ ಪಾಸ್ ನಿರ್ಮಿಸಲು ₹225 ಕೋಟಿ ಮೊತ್ತದ ನವೀಕೃತ ಯೋಜನೆಗೆ ಬಿಡಿಎ ಟೆಂಡರ್ ಕರೆದಿದೆ.

ವಿಮಾನ ನಿಲ್ದಾಣದಿಂದ ನಗರದ ಕಡೆಗೆ ಮುಕ್ತವಾಗಿ ಸಂಚರಿಸಲು ಎರಡು ಲೇನ್ ಅನ್ನು ಹೆಬ್ಬಾಳ ಜಂಕ್ಷನ್‌ನಲ್ಲಿ ನಿರ್ಮಿಸಲಾಗುತ್ತದೆ. ಎರಡು ಲೂಪ್‌ಗಳನ್ನು ತೆಗೆಯಲಾಗುತ್ತದೆ ಎಂದು ಬಿಡಿಎ ಎಂಜಿನಿಯರ್ ಸದಸ್ಯ ಶಾಂತರಾಜಣ್ಣ ತಿಳಿಸಿದರು.

ತುಮಕೂರು ರಸ್ತೆಯಿಂದ ಕೆ.ಆರ್. ಪುರದ ಕಡೆಯ ಎರಡು ಬದಿ ಮುಕ್ತವಾಗಿ ಸಂಚರಿಸಲು ಅನುವಾಗುವಂತೆ ಅಂಡರ್‌ಪಾಸ್ ನಿರ್ಮಿಸಲಾಗುತ್ತ-ದೆ. ಇದಕ್ಕೆ ಭೂ ಸ್ವಾಧೀನದ ಅಗತ್ಯ ಇಲ್ಲ. ಮೇಲ್ಸೇತುವೆಯ ಕೆಳಭಾಗದಲ್ಲೇ ಮಾಡಬಹುದಾಗಿದೆ ಎಂದು ಹೇಳಿದರು.

‘ಈ ಯೋಜನೆಯನ್ನು ಮೊದಲೇ ಮಾಡಿದ್ದೆವು. ಬಿಎಂಆರ್‌ಸಿಎಲ್‌ನವರು ಅದಕ್ಕೆ ಸಮ್ಮತಿಸಲಿಲ್ಲ. ಹೀಗಾಗಿ ನಾವು ಯೋಜನೆಯನ್ನು ಬದಲಾಯಿಸಿ, ಹೊಸ ರೀತಿಯಲ್ಲಿ ಮಾಡುತ್ತಿದ್ದೇವೆ. ಇದಕ್ಕೆ ಬಿಎಂಆರ್‌ಸಿಎಲ್ ಸಮ್ಮತಿಸಿದೆ. ಮೇಲ್ಸೇತುವೆಯನ್ನು ವಿಸ್ತರಿಸಿ, ಎರಡು ಲೇನ್‌ಗಳನ್ನು ನಗರದಿಂದ ವಿಮಾನ ನಿಲ್ದಾಣದ ಕಡೆಗೆ ನಂತರದ ಹಂತದಲ್ಲಿ ನಿರ್ಮಿಸಲಾಗುತ್ತದೆ’ ಎಂದರು.



‘ವಿಮಾನ ನಿಲ್ದಾಣದಿಂದ ನಗರಕ್ಕೆ ಬರುವ ಕಡೆ ಸಾಕಷ್ಟು ದಟ್ಟಣೆ ಉಂಟಾಗುತ್ತಿದೆ. ಇದನ್ನು ಮೊದಲ ಹಂತದಲ್ಲೇ ಸುಗಮಗೊಳಿಸಲು ಎರಡು ಲೇನ್ ಹೆಚ್ಚುವರಿಯಾಗಿ ನಿರ್ಮಾಣ ಮಾಡಲಾಗುತ್ತದೆ. ಆಗ, ಈಗಿರುವ ಎರಡು ಲೇನ್‌ಗಳು ಒಂದು ಕಡೆಗೆ ಮಾತ್ರ ಮುಕ್ತವಾಗುತ್ತವೆ. ನಗರದಿಂದ ವಿಮಾನ ನಿಲ್ದಾಣಕ್ಕೆ ಮತ್ತೆರಡು ಲೇನ್‌ಗಳು ಮುಂದಿನ ಹಂತದಲ್ಲಿ ನಿರ್ಮಾಣವಾದರೆ, ಭವಿಷ್ಯದ ವರ್ಷಗಳಲ್ಲೂ ದಟ್ಟಣೆ ಉಂಟಾಗುವುದಿಲ್ಲ’ ಎಂದು ವಿವರ ನೀಡಿದರು.

‘ಬಿಎಂಆರ್‌ಸಿಎಲ್ ಜೊತೆಗೆ ಯೋಜನೆ ಬಗ್ಗೆ ಚರ್ಚಿಸಲಾಗುತ್ತಿದೆ. ದಟ್ಟಣೆಯನ್ನು ಪೂರ್ಣವಾಗಿ ನಿವಾರಿಸಲು ಅಗತ್ಯ ಕ್ರಮಗಳನ್ನು ಕಾಮಗಾರಿ ವೇಳೆ ತೆಗೆದುಕೊಳ್ಳಲಾಗುತ್ತದೆ. ಭೂಸ್ವಾಧೀನ ಕಡಿಮೆಗೊಳಿಸಲು ಬಯಸಿದ್ದು, ಅದರಂತೆ ಯೋಜನೆ ರೂಪಿಸಲಾಗಿದೆ’ ಎಂದು ಬಿಡಿಎ ಆಯುಕ್ತ ರಾಜೇಶ್ ಗೌಡ ತಿಳಿಸಿದರು.

ಮುಖ್ಯಾಂಶಗಳು

- ಭೂ ಸ್ವಾಧೀನ ಅಗತ್ಯ ಇಲ್ಲ.
- ಮೇಲ್ಸೇತುವೆ ಕೆಳಭಾಗದಲ್ಲೇ ಮಾಡಬಹುದು
- ವಿಮಾನನಿಲ್ದಾಣದಿಂದ ಬರುವ ಮಾರ್ಗ ದಟ್ಟಣೆ ತಪ್ಪಿಸಲು ಎರಡು ಲೇನ್

ಸ್ಮಾರ್ಟ್ ಟೌನ್‌ಶಿಪ್: ಮುಖ್ಯಮಂತ್ರಿ ಸಭೆ

ಬೆಂಗಳೂರು: ನಗರದ ಪ್ರತಿ ವಿಭಾಗದಲ್ಲೂ ಒಂದು ಪರಿಸರ ಸ್ನೇಹಿ ‘ಸ್ಮಾರ್ಟ್ ಇಂಟಿಗ್ರೇಟೆಡ್ ಟೌನ್‌ಶಿಪ್’ ಯೋಜನೆ ಕಾರ್ಯಗತಗೊಳಿಸಲು ನಗರ ಯೋಜನೆಯಲ್ಲಿ ಪರಿಣತಿಯುಳ್ಳ ವಿಶ್ವವಿದ್ಯಾಲಯಗಳ ಸಹಯೋಗ ಪಡೆಯಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಸೂಚನೆ ನೀಡಿದ್ದಾರೆ.

ಇಂಟಿಗ್ರೇಟೆಡ್ ಟೌನ್‌ಶಿಪ್ ಯೋಜನೆ ಪ್ರಗತಿ ಪರಿಶೀಲಿಸಿದ ಅವರು, ’ಸಿಂಗಪುರ ವಿ.ವಿ. ಮತ್ತಿತರ ಕೆಲ ವಿ.ವಿಗುಳಿಗೆ ಯೋಜನೆ ಪರಿಣತಿ ಇದ್ದು, ನೆರವು ಪಡೆಯಿರಿ‘ ಎಂದು ತಿಳಿಸಿದರು.

ಈ ಟೌನ್‌ಶಿಪ್‌ಗಳು ಪರಿಸರ ಸ್ನೇಹಿ ಮತ್ತು ಸ್ಮಾರ್ಟ್ ನಗರಗಳಾಗಿರಬೇಕು. ವಸತಿ, ಅಗತ್ಯ ಮೂಲಸೌಕರ್ಯಗಳು, ಶೈಕ್ಷಣಿಕ ಸೌಲಭ್ಯ, ಆರೋಗ್ಯ ಸೇವೆಗಳು, ವಾಣಿಜ್ಯ ಚಟುವಟಿಕೆಗಳು ಮತ್ತು ಸಮೀಪದಲ್ಲಿಯೇ ಕೈಗಾರಿಕೆಗಳೂ ಸ್ಥಾಪಿಸುವಂತಿರಬೇಕು. ಅತ್ಯುತ್ತಮ ಸಾರಿಗೆ ಸಂಪರ್ಕ ಹೊಂದಿರಬೇಕು ಎಂದರು.

ಟೌನ್‌ಶಿಪ್ ನಿರ್ಮಾಣಕ್ಕೆ ಭೂಮಿಯ ಲಭ್ಯತೆ ಆಧಾರದಲ್ಲಿ ವಿವಿಧ ಜಿಲ್ಲೆಗಳಿಂದ ಪ್ರಸ್ತಾವನೆ ಸ್ವೀಕರಿಸಲಾಗಿದೆ. ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಗೆ ವರದಿ ಸಿದ್ಧಪಡಿಸಲು ಅಧಿಕಾರಿಗಳಿಗೆ ತಿಳಿಸಿದರು.

ಕಾಸಾಗ್ರ್ಯಾಂಡ್ ಹೇಜೆನ್‌ಗೆ ಚಾಲನೆ

ಬೆಂಗಳೂರು: ‘ಕಾಸಾಗ್ರ್ಯಾಂಡ್’ ಕಂಪನಿ ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ಬಳಿ ‘ಕಾಸಾಗ್ರ್ಯಾಂಡ್ ಹೇಜೆನ್’ ಎನ್ನುವ ಹೊಸ ಯೋಜನೆಯನ್ನು ಆರಂಭಿಸಿದೆ.

9 ಎಕರೆ ಪ್ರದೇಶದಲ್ಲಿ, 1,2,3,4 ಬಿಎಚ್‌ಕೆಯ 622 ಫ್ಲ್ಯಾಟ್‌ಗಳ ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಿಸಲಾಗಿದೆ. ಪ್ರತಿ ಚದರ ಅಡಿಗೆ ₹ 5,299 ಬೆಲೆ ನಿಗದಿಪಡಿಸಲಾಗಿದೆ.

100ಕ್ಕೂ ಅಧಿಕ ಸೌಲಭ್ಯಗಳಿವೆ. ವಿಶೇಷವಾಗಿ ಮಕ್ಕಳನ್ನು ಗಮನದಲ್ಲಿ ಇಟ್ಟುಕೊಂಡು ಅಪಾರ್ಟ್‌ಮೆಂಟ್ ನಿರ್ಮಿಸಲಾಗಿದೆ. ಮಕ್ಕಳಿಗಾಗಿ ಪ್ಲೇ ವಾಕ್ ಫನ್ ಜೋನ್, ರಾಕ್ ಕ್ಲೈಂಬಿಗ್ ವಾಲ್, ಸೈನ್ಸ್ ಪಾರ್ಕ್ ಸೇರಿ 60ಕ್ಕೂ ಅಧಿಕ ಮನರಂಜನೆ ಆಟದ ಸೌಲಭ್ಯಗಳಿವೆ ಎಂದು ಪ್ರಕಟಣೆ ತಿಳಿಸಿದೆ.

ಬೇಸ್‌ಮೆಂಟ್ ಕಾರ್ ಪಾರ್ಕಿಂಗ್, ವಾಹನ ಮುಕ್ತ ಪೋಡಿಯಂ ಒಳಗೊಂಡಿದ್ದು, ಮಕ್ಕಳು, ಹಿರಿಯರಿಗೆ ಸುರಕ್ಷಿತವಾಗಿದೆ ಎಂದು ಹೇಳಿದೆ.

ಬೆಂಗಳೂರಿನ ರಿಯಲ್ ಎಸ್ಟೇಟ್ ಮಾರುಕಟ್ಟೆಯು ಬಂಡವಾಳ ಹೂಡಿಕೆಗೆ ಸೂಕ್ತವಾಗಿದೆ. ಕಾಸಾಗ್ರ್ಯಾಂಡ್ ಹೆಜನ್ ಯೋಜನೆಯು ಉತ್ತಮ ಬೆಲೆಗೆ ಐಷಾರಾಮಿ ಮತ್ತು ಆರಾಮದಾಯಕ ಜೀವನಶೈಲಿ ಕಟ್ಟಿಕೊಡಲಿದೆ ಎಂದು ಕಾಸಾಗ್ರ್ಯಾಂಡ್ ಬೆಂಗಳೂರು ವಲಯದ ನಿರ್ದೇಶಕ ಸಿ.ಜಿ. ಸತೀಶ್ ಹೇಳಿದ್ದಾರೆ.

‘ವಿಸ್ತಾರವಾಗದ ಕನ್ನಡದ ಓದುಗ ಪ್ರಪಂಚ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡದ ಓದುಗರ ಪ್ರಪಂಚ ವಿಸ್ತಾರವಾಗಿಲ್ಲ ಹಾಗೂ ಗಂಭೀರವೂ ಆಗಿಲ್ಲ’ ಎಂದು ನವದೆಹಲಿಯ ಜೆಎನ್‌ಯು ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ಪುರುಷೋತ್ತಮ ಬಿಳಿಮಲೆ ವಿಷಾದಿಸಿದರು.

ನಗರದ ಸಂಕಥನದಿಂದ ಕರ್ನಾಟಕ ಚಿತ್ರಕಲಾ ಪರಿಷತ್ ಆವರಣದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮ-ದಲ್ಲಿ ಎಚ್.ಆರ್.ಸುಜಾತಾ ಅವರ ‘ಮಣಿಬಾಲೆ’ ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

‘ಓದುಗರು ಮಾತ್ರವಲ್ಲ. ಕನ್ನಡ ಭಾಷೆ ಮಾತನಾಡುವವರ ಸಂಖ್ಯೆಯಲ್ಲೂ ಈಚೆಗೆ ಕಡಿಮೆ ಆಗುತ್ತಿದೆ. ಅದೇ ಹಿಂದಿ ಭಾಷೆ ಮಾತನಾಡುವವರ ಸಂಖ್ಯೆ ಶೇ 66ಕ್ಕೆ ಏರಿದೆ. ಕನ್ನಡದ ಬೆಳವಣಿಗೆ ಶೇ 3.75 ಮಾತ್ರ’ ಎಂದು ಆತಂಕ ವ್ಯಕ್ತಪಡಿಸಿದರು.

‘ರಾಜ್ಯದಲ್ಲಿ 30 ಸಾವಿರ ಕನ್ನಡ ಅಧ್ಯಾಪಕರಿದ್ದರೂ ಈಚಿನ ದಿನಗಳಲ್ಲಿ ಕನ್ನಡ ಕವನ ಸಂಗ್ರಹ ಪುಸ್ತಕಗಳ ಮಾರಾಟ ಮೂರು ನೂರು ದಾಟುತ್ತಿಲ್ಲ’ ಎಂದು ಹೇಳಿದರು.

ಮಹಾರಾಣಿ ಕಾಲೇಜಿನ ಕನ್ನಡ ವಿಭಾಗದ ಪ್ರಾಧ್ಯಾಪಕಿ ಎಂ.ಎಸ್. ಆಶಾದೇವಿ, ‘ಇತಿಹಾಸ ನೋಡುವ ದೃಷ್ಟಿಕೋನ ಬದಲಾದರೆ ಇತಿಹಾಸದ ವಿನ್ಯಾಸವೂ ಬದಲಾಗುತ್ತದೆ. ಅಡುಗೆ ಮನೆ ಲೋಕದಿಂದ ರಾಜಕಾರಣದ ಲೋಕಕ್ಕೆ ಕರೆತರುವ ಈ ಕೃತಿಯು ದಟ್ಟ ಸಾಂಸ್ಕೃತಿಕ ಲೋಕವನ್ನು ಕಟ್ಟಿಕೊಡುತ್ತದೆ. ಹೆಣ್ಣಿನ ಉತ್ಪಾದಕ ಶಕ್ತಿಯನ್ನು ಈ ಕೃತಿ ಹೊರಹಾಕುತ್ತದೆ’ ಎಂದರು.

ಪತ್ರಕರ್ತ ಜಿ.ಎನ್.ರಂಗನಾಥ ರಾವ್, ‘ಮಣಿಬಾಲೆ’ ಕೃತಿ ಗ್ರಾಮೀಣ ಸಂಸ್ಕೃತಿಯಲ್ಲಿ ವಿಶೇಷ ಪಯಣದ ಅನುಭವ ನೀಡುತ್ತದೆ ಎಂದರು.

ಲೇಖಕಿ ಎಚ್.ಆರ್.ಸುಜಾತಾ ಇದ್ದರು. ವಸುಂಧರಾ ಕದಲೂರು ನಿರೂಪಿಸಿದರು. ಎನ್.ಆರ್. ವಿಶುಕುಮಾರ್ ವಂದಿಸಿದರು. ಚಿಂತಾಮಣಿ ಜಿ.ಮುನಿರೆಡ್ಡಿ ತಂಡದವರಿಂದ ಜನಪದ ಗೀತಗಾಯನ ನಡೆಯಿತು.



ಸಮಾರಂಭದಲ್ಲಿ ಪತ್ರಕರ್ತ ಜಿ.ಎನ್ ರಂಗನಾಥರಾವ್ (ಎಡದಿಂದ ಎರಡನೆಯವರು) ಅವರು ಮಣಿಬಾಲೆ ಕೃತಿ ಬಿಡುಗಡೆ ಮಾಡಿ ಕೃತಿಯ ಲೇಖಕಿ ಎಚ್.ಆರ್. ಸುಜಾತಾ ಅವರಿಗೆ ಪ್ರತಿ ನೀಡಿದರು. ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ. ಪುರುಷೋತ್ತಮ ಬಿಳಿಮಲೆ, ಡಾ.ಎಂ.ಎಸ್. ಆಶಾದೇವಿ ಇದ್ದರು. ಪ್ರಜಾವಾಣಿ ಚಿತ್ರ

ಜಿಲ್ಲಾಮಟ್ಟದ ಚಿತ್ರಕಲಾ ಸ್ಪರ್ಧೆ 25ಕ್ಕೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವಅಂಗವಾಗಿಆರ್ಟ್‌ಸಿಟಿವತಿಯಿಂದ ಪ್ರಾಥಮಿಕ ಮತ್ತು ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಆ. 25ರಂದು ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆ ಏರ್ಪಡಿಸಿದೆ.

6–9 ವರ್ಷದ ಮಕ್ಕಳಿಗೆ ನನ್ನ ದೇಶ ಸುಂದರ, 10–13 ವರ್ಷದ ಮಕ್ಕಳಿಗೆ ‘ದೇಶಕ್ಕೆ ನನ್ನ ಸೇವೆ’ ಮತ್ತು 14–16 ವರ್ಷದ ಮಕ್ಕಳಿಗೆ ‘ಸಾಮರಸ್ಯ ಮತ್ತು ಭಾವೈಕ್ಯ’ ಎಂಬ ವಿಷಯ ಕುರಿತ ಸ್ಪರ್ಧೆಯನ್ನು ಲೋಕಮಾನ್ಯ ತಿಲಕ್ ಉದ್ಯಾನ (ಚಿಕ್ಕಲಾಲ್‌ಬಾಗ್) ತುಳಸಿ ತೋಟದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ 9972217133ಗೆ ಸಂಪರ್ಕಿಸಿ.

ಸಂಕ್ಷಿಪ್ತ ಸುದ್ದಿ

ಬೆಸ್ಕಾಂ: ವಿದ್ಯುತ್ ಅದಾಲತ್ ಇಂದು

ಬೆಂಗಳೂರು: ಗ್ರಾಮೀಣ ಭಾಗದ ಗ್ರಾಹಕರ ವಿದ್ಯುತ್ ಸಂಬಂಧಿತ ಸಮಸ್ಯೆಗಳ ಶೀಘ್ರ ಪರಿಹಾರಕ್ಕಾಗಿ ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳ 47 ತಾಲ್ಲೂಕುಗಳ 88 ಹಳ್ಳಿಗಳಲ್ಲಿ ಇದೇ 20ರಂದು ಮೂರನೇ ವಿದ್ಯುತ್ ಅದಾಲತ್ ನಡೆಯಲಿದೆ.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಅವರು ದಾವಣಗೆರೆಯ ಕುಕ್ಕುವಾಡ-ದಲ್ಲಿ ಮತ್ತು ಬೆಸ್ಕಾಂ ನಿರ್ದೇಶಕ (ತಾಂತ್ರಿಕ) ಡಿ.ನಾಗಾರ್ಜುನ ಅವರು ಮೊಳಕಾಲ್ಮುರು ತಾಲ್ಲೂಕಿನ ಕಣಕು-ಪ್ಪೆಯಲ್ಲಿ ನಡೆಯಲಿರುವ ವಿದ್ಯುತ್ ಅದಾಲತ್‌ನಲ್ಲಿ ಭಾಗವಹಿಸಲಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ನಿರ್ವಹಣೆ ಹಿನ್ನೆಲೆಯಲ್ಲಿ ನಗರದ ವಿವಿಧೆಡೆ ಶನಿವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ರಿಚ್ಮಂಡ್ ರಸ್ತೆ, ಸ್ಲಿವ್ವರ್ ಲೇಕ್ ಸಮುಚ್ಚಯ, ಟ್ರಿನಿಟಿ ಸರ್ಕಲ್, ಎಂ.ಜಿ. ರಸ್ತೆ, ವಿಜಯ ಬ್ಯಾಂಕ್, ಬ್ರಿಗೇಡ್ ರೋಡ್, ಐಟಿಸಿ, ಕೆಎಸ್‌ಆರ್‌ಪಿ, ರೆಸಿಡೆನ್ಸಿ ರಸ್ತೆ, ಸೇಂಟ್ ಮಾರ್ಕ್ ರಸ್ತೆ, ಲ್ಯಾವೆಲ್ಲೆ ರಸ್ತೆ, ವಿಠ್ಠಲ ಮಲ್ಯ ರಸ್ತೆ, ಮ್ಯಾಗ್ರಥ್ ರಸ್ತೆ, ಗರುಡಾ ಮಾಲ್, ಅಶೋಕ ನಗರ, ಮ್ಯೂಸಿಯಂ ರಸ್ತೆ.

23ಕ್ಕೆ ವಿವಿಧ ಮಾದರಿ ವಾಹನಗಳ ಹರಾಜು

ಬೆಂಗಳೂರು: ಹುಳಿಮಾವು ಠಾಣೆ ಪೊಲೀಸರು ಜಪ್ತಿ ಮಾಡಿರುವ 30 ವಿವಿಧ ವಾಹನಗಳ ಬಹಿರಂಗ ಹರಾಜು ಆಗಸ್ಟ್ 23ರಂದು ಬೆಳಿಗ್ಗೆ 11.30ಕ್ಕೆ ನಡೆಯಲಿದೆ.

ಆಸಕ್ತರು ಹರಾಜಿನಲ್ಲಿ ಭಾಗವಹಿಸಬಹುದು. ಮಾಹಿತಿಗೆ 9480801622 /08022943470 ಗೆ ಸಂಪರ್ಕಿಸಿ.



ಬಾಳೆಹೊನ್ನೂರಿನ ರಂಭಾಪುರಿ ಪೀಠಕ್ಕೆ ಸಿದ್ದರಾಮಯ್ಯ ಭೇಟಿ ನೀಡಿ ಸ್ವಾಮೀಜಿಯ ಆಶೀರ್ವಾದ ಪಡೆದರು

ಸಿದ್ದರಾಮಯ್ಯ ಪಶ್ಚಾತ್ತಾಪ ವ್ಯಕ್ತಪಡಿಸಿದ್ದಾರೆ: ರಂಭಾಪುರಿಶ್ರೀ

ಮಂಗಳೂರು/ಬಾಳೆಹೊನ್ನೂರು: 'ಧರ್ಮ ಒಡೆಯುವ ಪ್ರಯತ್ನ ಮಾಡಿರಲಿಲ್ಲ. ಕೆಲವರು ನನ್ನ ದಾರಿ ತಪ್ಪಿಸಿದ್ದರು. ಅದರಿಂದಾಗಿ ನನಗೆ ಖಂಡಿತವಾಗಿಯೂ ಪಶ್ಚಾತ್ತಾಪವಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು' ಎಂದು ರಂಭಾಪುರಿ ಪೀಠದ ಪ್ರಸನ್ನ ವೀರ ಸೋಮೇಶ್ವರ ಸ್ವಾಮೀಜಿ ತಿಳಿಸಿದರು.

ಸಿದ್ದರಾಮಯ್ಯ ಅವರು ಶುಕ್ರವಾರ ರಂಭಾಪುರಿ ಪೀಠಕ್ಕೆ ಭೇಟಿ ನೀಡಿ, ಪ್ರಸನ್ನ ವೀರಸೋಮೇಶ್ವರ ಸ್ವಾಮೀಜಿ ಅವರ ಆಶೀರ್ವಾದ ಪಡೆದರು. ನಂತರ ಸುದ್ದಿಗಾರರೊಂದಿಗೆ ಸ್ವಾಮೀಜಿ ಮಾತನಾಡಿದರು.

'ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ವೀರಶೈವ ಧರ್ಮದಿಂದ ಲಿಂಗಾಯತ ಧರ್ಮ ಒಡೆಯುವುದಕ್ಕೆ ಕುಮ್ಮಕ್ಕು ನೀಡಿದ ಆರೋಪ ಅವರ ಮೇಲಿತ್ತು. ಈ ಬಗ್ಗೆ ಅವರ ಮನಸ್ಸಿನಲ್ಲಿದ್ದ ದುಗುಡವನ್ನು ಪ್ರಾಂಜಲ ಮನಸ್ಸಿನಿಂದ ಬಿಚ್ಚಿಟ್ಟಿದ್ದಾರೆ. ಧರ್ಮದ ವಿಚಾರದಲ್ಲಿ ಯಾವತ್ತೂ ಆವೇಶ ಮಾಡುವುದಿಲ್ಲ. ರಾಜ್ಯದ ಅಭಿವೃದ್ಧಿ, ಜನರ ಕಲ್ಯಾಣವನ್ನು ಗುರಿಯಾಗಿಟ್ಟುಕೊಂಡು ಕೆಲಸ ಮಾಡುತ್ತೇನೆ ಎಂದಿದ್ದಾರೆ' ಎಂದು ರಂಭಾಪುರಿ ಶ್ರೀ ತಿಳಿಸಿದರು.

'ವೀರಶೈವ ಧರ್ಮದ ಇತಿಹಾಸ, ಪರಂಪರೆ, ಪಂಚ ಪೀಠಗಳ ಪ್ರಾಚೀನ ಇತಿಹಾಸ, ಬಸವಾದಿ ಶಿವಶರಣರ ಚಿಂತನೆಗಳನ್ನು ಸಿದ್ದರಾಮಯ್ಯ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಇದನ್ನು ಕೇಳಿ ಅವರು ಹರ್ಷ ಚಿತ್ತರಾದರು' ಎಂದರು. ಸಣ್ಣ ರುದ್ರಾಕ್ಷಿ ಹೊಂದಿರುವ ಹಾರವನ್ನು ಸಿದ್ದರಾಮಯ್ಯ ಅವರ ಕೊರಳಿಗೆ ಹಾಕಿ, 'ಇದನ್ನು ಕಾಶಿಯಿಂದ ತಂದಿದ್ದು ಚುನಾವಣೆವರೆಗೂ ಹಾಕಿಕೊಳ್ಳಿ' ಎಂದು ಸಲಹೆ ನೀಡಿದರು.

ಮಳೆ ಹಾನಿ ಪ್ರದೇಶ ವೀಕ್ಷಣೆಗಾಗಿ ವಿಪಕ್ಷ ನಾಯಕ ಸಿದ್ದರಾಮಯ್ಯ ಭೇಟಿ

ಕಪ್ಪುಬಟ್ಟೆ ಪ್ರದರ್ಶನ; ಪ್ರತಿರೋಧ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಮಳೆ ಹಾನಿ ವೀಕ್ಷಣೆಗಾಗಿ ಜಿಲ್ಲೆಗೆ ಬಂದಿದ್ದ ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ವಾಹನದಲ್ಲಿ ಸಾಗುವಾಗ ಕೊಪ್ಪ ತಾಲ್ಲೂಕಿನ ಮಕ್ಕಿ ಕೊಪ್ಪ, ಶೃಂಗೇರಿ ತಾಲ್ಲೂಕಿನ ಮೆಣಸೆಯಲ್ಲಿ ಬಿಜೆಪಿಯವರು ಕಪ್ಪು ಬಟ್ಟೆ, ಸಾವರ್ಕರ್ ಚಿತ್ರ, ಬಿಜೆಪಿ ಬಾವುಟ ಪ್ರದರ್ಶಿಸಿದರು. ಬಿಜೆಪಿಯವರ ನಡೆಗೆ ಮೆಣಸೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿರೋಧ ವ್ಯಕ್ತಪಡಿಸಿದರು.

ಮಕ್ಕಿಕೊಪ್ಪದ ವೃತ್ತದಲ್ಲಿ ವಾಹನ ಸಾಗುವಾಗ ಬಿಜೆಪಿಯವರು ಪ್ರತಿಭಟನೆಗೆ ಮುಂದಾದರು. ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಿದರು. ಪೊಲೀಸರು ಪ್ರತಿಭಟನಕಾರರನ್ನು ಚದುರಿಸಿದರು.

ಮೆಣಸೆಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಬಳಿ ಸಿದ್ದರಾಮಯ್ಯ ಅವರ ವಾಹನ ತೆರಳುವಾಗ ಬಿಜೆಪಿಯ ಕೆಲವರು ಕಪ್ಪು ಬಟ್ಟೆ ಪ್ರದರ್ಶಿಸಿದರು. ಕಾಂಗ್ರೆಸ್‌ನವರು ಪ್ರತಿರೋಧ ವ್ಯಕ್ತಪಡಿಸಿದರು. ಎರಡೂ ಗುಂಪುಗಳ ನಡುವೆ ವಾಗ್ವಾದ ನಡೆಯಿತು. ಪೊಲೀಸರು ಎರಡೂ ಗುಂಪಿನವರನ್ನು ಚದುರಿಸಿದರು.

ಸಿದ್ದರಾಮಯ್ಯ ಅವರು ಶೃಂಗೇರಿ ಸಮೀಪದ ನೇರಳೆಕೂಡಿಗೆಯಲ್ಲಿ ಮಳೆ ಹಾನಿ ಪ್ರದೇಶ, ಗುಡ್ಡೆ ತೋಟದಲ್ಲಿ ಭೂಕುಸಿತ ಪ್ರದೇಶ, ಕೊಗ್ರೆ ಭಾಗದಲ್ಲಿ ಸೇತುವೆ ಹಾನಿ ಜಾಗ ವೀಕ್ಷಿಸಿದರು.



ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಮೆಣಸೆಯಲ್ಲಿ ಪ್ರತಿಭಟನೆಯಲ್ಲಿ ತೊಡಗಿದ್ದ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ಚದುರಿಸಿದರು

'ಸರ್ಕಾರದ ಪ್ರಾಯೋಜಿತ ಪ್ರತಿಭಟನೆ'

'ಮಡಿಕೇರಿಯಲ್ಲಿ ಆ.18ರಂದು ಮೊಟ್ಟೆ ಎಸೆದದ್ದು, ಕಪ್ಪು ಬಾವುಟ ಪ್ರದರ್ಶಿಸಿದ್ದು ಎಲ್ಲವೂ ಸರ್ಕಾರದ ಪ್ರಾಯೋಜಿತ ಪ್ರತಿಭಟನೆ. ಅಲ್ಲಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾನೂನು–ಸುವ್ಯವಸ್ಥೆ ಕಾಪಾಡಲು ವಿಫಲರಾಗಿದ್ದಾರೆ. ಇದನ್ನು ಖಂಡಿಸಿ ಇದೇ 26ರಂದು ಕೊಡಗಿನ ಎಸ್ಪಿ ಕಚೇರಿಗೆ ಮುತ್ತಿಗೆ ಹಾಕಲು ನಿರ್ಧರಿಸಿದ್ದೇವೆ' ಎಂದು ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಎಸ್ಪಿ ಅವರು ದುರುದ್ದೇಶದಿಂದ ಆರ್‌ಎಸ್‌ಎಸ್, ಬಜರಂಗ ದಳ, ಸಂಘ ಪರಿವಾರದ ಜತೆ ಶಾಮೀಲಾಗಿ ಪ್ರತಿಭಟನೆ ಮಾಡಲು ಬಿಟ್ಟಿದ್ದಾರೆ' ಎಂದು ಆರೋಪಿಸಿದರು.

'18 ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. 5.23 ಲಕ್ಷ ಹೆಕ್ಟೇರ್ ಬೆಳೆ ಹಾನಿ ಸಂಭವಿಸಿದೆ. ಮಳೆ ಹಾನಿ ಪ್ರದೇಶ ವೀಕ್ಷಿಸಿ ನಷ್ಟದ ಕುರಿತು ವಿಧಾನಸಭೆಯಲ್ಲಿ ಚರ್ಚಿಸಿ, ಸರ್ಕಾರದ ಗಮನ ಸೆಳೆಯುತ್ತೇನೆ' ಎಂದು ತಿಳಿಸಿದರು.

'ಗಾಂಧೀಜಿಯನ್ನೇ ಹೊಡೆದು ಹಾಕಿದವರು ನನ್ನನ್ನು ಬಿಡ್ತಾರಾ?'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ಗಾಂಧೀಜಿ ಅವರನ್ನೇ ಹೊಡೆದು ಹಾಕಿದವರು ನನ್ನನ್ನು ಬಿಡ್ತಾರಾ? ನಾನು ಸತ್ಯವನ್ನು ಹೇಳುತ್ತೇನೆ. ಹೀಗಾಗಿ, ಬಿಜೆಪಿ, ಆರ್‌ಎಸ್‌ಎಸ್‌ನವರಿಗೆ ನನ್ನ ಮೇಲೆ ಕೋಪ, ನನ್ನನ್ನು ಕಂಡರೆ ಆಗಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

ಮಳೆ ಹಾನಿ ವೀಕ್ಷಣೆಗೆ ಜಿಲ್ಲೆಗೆ ಬಂದಿದ್ದ ಅವರು ತಾಲ್ಲೂಕಿನ ಬಾಸಾಪುರದಲ್ಲಿ ಶಾಸಕ ಟಿ.ಡಿ. ರಾಜೇಗೌಡ ಅವರ ಮನೆ ಆವರಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

'ಗಾಂಧೀಜಿ ಅವರನ್ನು ಕೊಂದಿದ್ದು ನಾಥೂರಾಮ್ ಗೋಡ್ಸೆ. ಆತನ ಭಾವಚಿತ್ರಕ್ಕೆ ಪೂಜೆ ಸಲ್ಲಿಸುತ್ತಾರೆ ಎಂಬುದು ಬೇಸರದ ಸಂಗತಿ' ಎಂದರು.

'ವಿ.ಡಿ.ಸಾವರ್ಕರ್ ಜೈಲಿಗೆ ಹೋಗಿದ್ದು ನಿಜ. ಅವರು ಕ್ಷಮಾಪಣೆ ಪತ್ರ ಬರೆದುಕೊಟ್ಟು ಜೈಲಿನಿಂದ ಬಿಡುಗಡೆಯಾಗಿದ್ದರು. ಬಿಜೆಪಿಯವರು ಅವರನ್ನು ವೀರ ಸಾವರ್ಕರ್ ಎಂದು ಹೇಳುತ್ತಾರೆ. ಸಾವರ್ಕರ್ ಬಗ್ಗೆ ನನಗೆ ಕೋಪ ಇಲ್ಲ. ಅವರು ನಡೆದುಕೊಂಡಿದ್ದ ರೀತಿ ಸರಿ ಇಲ್ಲ ಎಂದು ಹೇಳಿದ್ದೇನೆ ಅಷ್ಟೆ' ಎಂದು ಸಮಜಾಯಿಷಿ ನೀಡಿದರು.

'ಸ್ವಾತಂತ್ರ್ಯದ ಅಮೃತ ಮಹೋತ್ಸವ ನಿಮಿತ್ತ ಬಿಜೆಪಿಯವರು 'ಹರ್ ಘರ್ ತಿರಂಗಾ' ಅಭಿಯಾನ ಮಾಡಿದ್ದಾರೆ. ಈ ರಾಷ್ಟ್ರಧ್ವಜವು ನಮ್ಮ ದೇಶಕ್ಕೆ ಯೋಗ್ಯವಲ್ಲ ಎಂದು ಸಾವರ್ಕರ್, ಗೋಳವಲ್ಕರ್ ಹೇಳಿದ್ದರು. ಬಿಜೆಪಿಯವರು 'ಈಗ ಹರ್ ಘರ್ ತಿರಂಗಾ' ಎಂದು ನಾಟಕವಾಡುತ್ತಿದ್ದಾರೆ' ಎಂದು ಲೇವಡಿ ಮಾಡಿದರು.

'ಸಿದ್ದರಾಮಯ್ಯಗೆ ಭದ್ರತೆ ಹೆಚ್ಚಿಸಿ'

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಭದ್ರತೆ ಹೆಚ್ಚಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ನಿರ್ದೇಶನ ನೀಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿ, 'ಸಿದ್ದರಾಮಯ್ಯ ಅವರಿಗೆ ಜೀವ ಬೆದರಿಕೆ ಇದೆ ಎಂಬ ಹೇಳಿಕೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಪೊಲೀಸ್ ಮಹಾನಿರ್ದೇಶಕರನ್ನು ಕರೆಸಿಕೊಂಡು ಚರ್ಚಿಸಿದ್ದು, ವಿರೋಧ ಪಕ್ಷದ ನಾಯಕರ ಭದ್ರತೆಯನ್ನು ತಕ್ಷಣವೇ ಹೆಚ್ಚಿಸುವಂತೆ ನಿರ್ದೇಶನ ನೀಡಿದ್ದೇನೆ' ಎಂದರು.

> ಹೇಳಿಕೆಗಳನ್ನು ಕೊಡುವ ಸಿದ್ದರಾಮಯ್ಯನವರಿಗೆ ಪ್ರತಿಭಟನೆಯನ್ನು ಸಹಿಸಿಕೊಳ್ಳುವ ಶಕ್ತಿಯೂ ಇರಬೇಕು. ಬೇಕಾಬಿಟ್ಟಿ ಹೇಳಿಕೆ ನೀಡಿ ಜೀರ್ಣಿಸಿಕೊಳ್ಳುತ್ತೇನೆ ಎಂಬ ಕಾಲ ಹೊರಟು ಹೋಗಿದೆ
>
> **ವಿ.ಸುನೀಲ್ ಕುಮಾರ್,** ಕನ್ನಡ ಮತ್ತು ಸಂಸ್ಕೃತಿ ಸಚಿವ

> ಆ. 26ರಂದು ಪ್ರತಿಭಟನೆಗೆ ಕರೆ ನೀಡಿರುವುದನ್ನು ಗಮನಿಸಿದರೆ ಸಿದ್ದರಾಮಯ್ಯ ಕಡೆಯವರೇ ಉದ್ದೇಶಪೂರ್ವಕವಾಗಿ ಕೋಳಿ ಮೊಟ್ಟೆ ಎಸೆದಿರಬಹುದು. ಯಾರಿಗೆ ಗೊತ್ತು?
>
> **ಮುನಿರತ್ನ,** ತೋಟಗಾರಿಕೆ ಸಚಿವ

> ಸಿದ್ದರಾಮಯ್ಯ ಕಾರಿಗೆ ಮೊಟ್ಟೆ ಎಸೆದಿರುವುದನ್ನು ಒಪ್ಪುವುದಿಲ್ಲ. ಇಂಥ ಚಟುವಟಿಕೆಗಳಿಗೆ ಬಿಜೆಪಿ ಎಂದಿಗೂ ಪ್ರೋತ್ಸಾಹ ನೀಡುವುದಿಲ್ಲ
>
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

> ಕೊಡಗು ಜಿಲ್ಲಾ ಪ್ರವಾಸ ಕೈಗೊಂಡಿದ್ದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಕಾರಿಗೆ ಮೊಟ್ಟೆ ಹೊಡೆದ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕು
>
> **ಆರ್. ಧ್ರುವನಾರಾಯಣ,** ಕೆಪಿಸಿಸಿ ಕಾರ್ಯಾಧ್ಯಕ್ಷ

> ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಕೋಳಿಮೊಟ್ಟೆ ಎಸೆದಿರುವುದು ತಪ್ಪು
>
> **ಪ್ರಮೋದ್ ಮುತಾಲಿಕ್,** ಶ್ರೀರಾಮ ಸೇನೆಯ ಮುಖ್ಯಸ್ಥ

> ತಂದೆಗೆ ಹಿಂದೂ ಸಂಘಟನೆಗಳಿಂದ ಜೀವ ಬೆದರಿಕೆಯಿದೆ. ಮೊಟ್ಟೆ ಎಸೆತ ಘಟನೆಯಿಂದ ಆತಂಕ ಹೆಚ್ಚಾಗಿದೆ.
>
> **ಯತೀಂದ್ರ ಸಿದ್ದರಾಮಯ್ಯ,** ಶಾಸಕ

> ಕಳೆದ ವಿಧಾನಸಭಾ ಚುನಾವಣೆಯ ವೇಳೆ ಹಿಂದೂ ಕಾರ್ಯಕರ್ತರ ಹತ್ಯೆಗೆ ಪಿಎಫ್‌ಐ ಉಗ್ರರನ್ನು ಛೂ ಬಿಟ್ಟು ಇಡೀ ವ್ಯವಸ್ಥೆಯನ್ನೇ ಪ್ರಕ್ಷುಬ್ಧಗೊಳಿಸಿದ್ದ ಸಿದ್ದರಾಮಯ್ಯ, ಈಗ ರಾಜ್ಯದಲ್ಲಿ ಶಾಂತಿ ಕೆಡಿಸಲು ಮತ್ತೆ ಅದೇ ಹಾದಿ ಹಿಡಿದ್ದಾರೆ
>
> **ಬಿಜೆಪಿ ಟ್ವೀಟ್**

ಮೊಟ್ಟೆ ಎಸೆತ: 9 ಮಂದಿ ಬಂಧನ

ಯಾರ ಒತ್ತಡಕ್ಕೂ ಮಣಿಯದೆ ತನಿಖೆ: ಕೊಡಗು ಎಸ್‌ಪಿ ಎಂ.ಎ.ಅಯ್ಯಪ್ಪ

ಪ್ರಜಾವಾಣಿ ವಾರ್ತೆ

ಮಡಿಕೇರಿ: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ಕೋಳಿ ಮೊಟ್ಟೆ ಎಸೆದ ಪ್ರಕರಣಕ್ಕೆ ಸಂಬಂಧಿಸಿ ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, 9 ಮಂದಿಯನ್ನು ಬಂಧಿಸಲಾಗಿದೆ. ಎಲ್ಲರಿಗೂ ಜಾಮೀನು ದೊರೆತಿದೆ. ಮಡಿಕೇರಿ ಠಾಣೆಯಲ್ಲಿ 10 ಮಂದಿ ವಿರುದ್ಧ ಪ್ರಕರಣ ದಾಖಲಾಗಿದ್ದು, ಅವರಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ಘಟನೆಯನ್ನು ಖಂಡಿಸಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, 'ಯಾರ ಒತ್ತಡಕ್ಕೂ ತಲೆ ಬಾಗದೆ ನಿಷ್ಪಕ್ಷಪಾತವಾಗಿ ತನಿಖೆ ನಡೆಸಲಾಗುವುದು' ಎಂದಿದ್ದಾರೆ.

ಶುಕ್ರವಾರ ತಮ್ಮ ಕಚೇರಿಗೆ ಮುತ್ತಿಗೆ ಹಾಕಿದ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಘಟನೆಯನ್ನು ಒಪ್ಪಲು ಸಾಧ್ಯವಿಲ್ಲ. ನಾನೂ ಖಂಡಿಸುವೆ. ಈಗಾಗಲೇ ಕುಶಾಲನಗರದಲ್ಲಿ ಮೊಟ್ಟೆ ಎಸೆದವರನ್ನು ದೂರು ದಾಖಲಾಗುವ ಮುಂಚೆಯೇ ಬಂಧಿಸಲಾಗಿದೆ. ಮಾಜಿ ಮುಖ್ಯಮಂತ್ರಿಗೆ ನೀಡಬೇಕಾದ ಎಲ್ಲ ಭದ್ರತೆಯನ್ನೂ ಕಲ್ಪಿಸಲಾಗಿತ್ತು. ಇನ್ನು ಮುಂದೆ ಇಂತಹ ಘಟನೆ ನಡೆಯದಂತೆ ಎಚ್ಚರ ವಹಿಸಲಾಗುವುದು' ಎಂದರು.

ಇದಕ್ಕೂ ಮುಂಚೆ ಇಲ್ಲಿನ ವಿಜಯ ವಿನಾಯಕ ದೇಗುಲದಿಂದ ಮೆರವಣಿಗೆಯಲ್ಲಿ ಹೊರಟ ಕಾಂಗ್ರೆಸ್ ಕಾರ್ಯಕರ್ತರು ಎಸ್ಪಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು. 'ಪೊಲೀಸರು ಬಿಜೆಪಿಯ ಕೈಗೊಂಬೆಗಳಾಗಿದ್ದಾರೆ' ಎಂದು ಘೋಷಣೆಗಳನ್ನು ಕೂಗಿದರು.

'ಆರೋಪಿಗಳ ವಿರುದ್ಧ ಐಪಿಸಿ ಸೆಕ್ಷನ್ 307 ಅಡಿ ಪ್ರಕರಣ ದಾಖಲಿಸಬೇಕು. ಇಲ್ಲಿನ ಶಾಸಕರ ಒತ್ತಡಕ್ಕೆ ಮಣಿದು, ಸುಲಭವಾಗಿ ಜಾಮೀನು ಸಿಗುವಂತಹ ಪ್ರಕರಣ ದಾಖಲಿಸಲಾಗಿದೆ' ಎಂದು ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಎ.ಎಸ್.ಪೊನ್ನಣ್ಣ ಆರೋಪಿಸಿದರು.

'ಸಿದ್ದರಾಮಯ್ಯ ಹೊಡೆಯಲು ಕತ್ತಿ ತೆಗೆದುಕೊಂಡು ಬಂದಿದ್ದರು. ಅದಕ್ಕೆ ನಾನೇ ಸಾಕ್ಷಿ. ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿ' ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆಗ್ರಹಿಸಿದರು.

'ಬಿಜೆಪಿಗೆ ಸಂಬಂಧ ಇಲ್ಲ'

ಮಡಿಕೇರಿ: 'ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ಕೋಳಿ ಮೊಟ್ಟೆ ಎಸೆದ ಪ್ರಕರಣಕ್ಕೂ ಬಿಜೆಪಿಗೂ ಸಂಬಂಧ ಇಲ್ಲ' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ರಾಬಿನ್ ದೇವಯ್ಯ ಹಾಗೂ ಯುವ ಮೋರ್ಚಾದ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಜೆ.ದರ್ಶನ್ ಜೋಯಪ್ಪ ಪ್ರತ್ಯೇಕ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಸಿದ್ದರಾಮಯ್ಯ ಅವರ ಹಿಂದೂ ವಿರೋಧಿ ಧೋರಣೆ ವಿರುದ್ಧ ಕಪ್ಪುಬಾವುಟ ಪ್ರದರ್ಶಿಸಲು ಮಾತ್ರವೇ ಪಕ್ಷದ ಕೆಲ ಕಾರ್ಯಕರ್ತರು ಸೇರಿದ್ದರು. ಆದರೆ, ಕಿಡಿಗೇಡಿಯೊಬ್ಬರು ಕೋಳಿ ಮೊಟ್ಟೆ ಎಸೆದಿದ್ದಾರೆ. ಅದನ್ನು ಬಹುಶಃ ಕಾಂಗ್ರೆಸ್‌ನವರೇ ಮಾಡಿಸಿರಬಹುದು' ಎಂದು ರಾಬಿನ್ ದೇವಯ್ಯ ಹೇಳಿದ್ದಾರೆ.

ಮುಖ್ಯಾಂಶಗಳು

- ಮಡಿಕೇರಿ ಠಾಣೆಯಲ್ಲಿ 10 ಮಂದಿ ವಿರುದ್ಧ ಪ್ರಕರಣ
- ಈ ಆರೋಪಿಗಳಿಗಾಗಿ ಹುಡುಕಾಟ

ಗುಪ್ತಚರ ಇಲಾಖೆ ವೈಫಲ್ಯ: ಕಾಂಗ್ರೆಸ್ ಆರೋಪ

ಬೆಂಗಳೂರು: ನೆರೆ ಸಂತ್ರಸ್ತರ ಅಹವಾಲು ಆಲಿಸಲು ಮಡಿಕೇರಿಗೆ ತೆರಳಿದ್ದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಮೇಲೆ ನಡೆದಿರುವ ದಾಳಿ ಸರ್ಕಾರಿ ಪ್ರಾಯೋಜಿತವಾದುದು ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಆರೋಪಿಸಿದೆ.

ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದಿರುವ ಘಟನೆ ಕುರಿತು ಕೆಪಿಸಿಸಿಯ ಅಧಿಕೃತ ಟ್ವಿಟರ್ ಖಾತೆಯಲ್ಲಿ ಶುಕ್ರವಾರ ಸರಣಿ ಟ್ವೀಟ್ ಮಾಡಿದ್ದು, 'ವಿರೋಧ ಪಕ್ಷದ ನಾಯಕರ ಕಾರಿನ ಮೇಲೆ ಎರಡೆರಡು ಬಾರಿ ಮೊಟ್ಟೆ ಎಸೆಯಲು ಪೊಲೀಸರು ಅವಕಾಶ ಕೊಡುತ್ತಾರೆ ಎಂದಾದರೆ ಇದು ಸರ್ಕಾರಿ ಪ್ರಾಯೋಜಿತ ದಾಳಿಯಲ್ಲವೆ' ಎಂದು ಪ್ರಶ್ನಿಸಿದೆ.

ವಿರೋಧ ಪಕ್ಷದ ನಾಯಕರಿಗೆ ರಕ್ಷಣೆ ಇಲ್ಲ ಎಂದಾದರೆ ಸಾಮಾನ್ಯ ಜನರ ರಕ್ಷಣೆ ಈ ಸರ್ಕಾರದಿಂದ ಸಾಧ್ಯವೆ? ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಹುದ್ದೆಯಲ್ಲಿ ಮುಂದುವರಿಯಲು ಅರ್ಹರೆ? ಎಂದು ಕೇಳಿದೆ.

'ಗುಪ್ತಚರ ಇಲಾಖೆಯ ವೈಫಲ್ಯ ಎದ್ದು ಕಾಣುತ್ತಿದೆ. ಸರ್ಕಾರವು ಹೈಕಮಾಂಡ್ ಮೆಚ್ಚಿಸಲು ಉತ್ತರ ಪ್ರದೇಶ ಮಾದರಿಯ ಗೂಂಡಾ ಸಂಸ್ಕೃತಿಯನ್ನು ಇಲ್ಲಿಯೂ ಪರಿಚಯಿಸುತ್ತಿದೆ' ಎಂದು ವಾಗ್ದಾಳಿ ನಡೆಸಿದೆ.

> ನಿಮ್ಮ (ಬಿಜೆಪಿ) ಕಾರ್ಯಕರ್ತರನ್ನು ನಿಯಂತ್ರಣದಲ್ಲಿಟ್ಟುಕೊಳ್ಳಿ. ಇಲ್ಲವಾದರೆ ಸಚಿವರಿಗೆ ಕಪ್ಪುಬಾವುಟ ಪ್ರದರ್ಶನ, ಗೋಬ್ಯಾಕ್ ಅಭಿಯಾನ ಮಾಡುವುದು ಕಾಂಗ್ರೆಸ್‌ಗೆ ಅನಿವಾರ್ಯವಾಗಲಿದೆ
>
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಮಾಲೀಕರ ಮೇಲೆ ಮಾರಕಾಸ್ತ್ರದಿಂದ ಹಲ್ಲೆ • ಹತ್ತು ಆರೋಪಿಗಳನ್ನು ಬಂಧಿಸಿದ ಪೊಲೀಸರು

ಸಾಕಾಣಿಕೆ ಕೇಂದ್ರಕ್ಕೆ ನುಗ್ಗಿ 80 ಹಂದಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಣಸಮಾರನಹಳ್ಳಿ ಬಳಿಯ ಸಾಕಾಣಿಕೆ ಕೇಂದ್ರವೊಂದಕ್ಕೆ ನುಗ್ಗಿ ಮಾಲೀಕರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ, 80 ಹಂದಿಗಳನ್ನು ಕದ್ದೊಯ್ದಿದ್ದ ಹತ್ತು ಆರೋಪಿಗಳನ್ನು ಚಿಕ್ಕಜಾಲ ಪೊಲೀಸರು ಬಂಧಿಸಿದ್ದಾರೆ.

'ರಾಯಚೂರು ಜಿಲ್ಲೆಯ ಸಿಂಧನೂರಿನ ಶಂಕರ್ (22), ಪರಶುರಾಮ್ (25), ಮಾನ್ವಿಯ ಬಸವರಾಜು (29), ಅಂಬಾಮಠದ ಅಂಬಣ್ಣ (21), ಗದಗ ಲಕ್ಷ್ಮೇಶ್ವರದ ಅಶೋಕ (21), ಬೆಳಗಾವಿ ಜಿಲ್ಲೆಯ ಅಡಿವೆಪ್ಪ (22), ಫಕ್ಕಿರಪ್ಪ ಚಿಪ್ಪಲಕಟ್ಟಿ (31), ಶಂಕರ್ (27), ಯಲಹಂಕದ ಮಂಜುನಾಥ್ (33) ಹಾಗೂ ಹಾಸನದ ಕಿರಣ್ (28) ಬಂಧಿತರು. ಇವರಿಂದ ₹ 20 ಲಕ್ಷ ಮೌಲ್ಯದ 80 ಹಂದಿಗಳು ಹಾಗೂ ₹ 28 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದು ಈಶಾನ್ಯ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ತಿಳಿಸಿದರು.

'ಹಂದಿಗಳ ಕಳ್ಳತನ ಸಂಬಂಧ ಸಾಕಾಣಿಕೆ ಕೇಂದ್ರದ ಎಚ್.ಆರ್. ಸಂದೀಪ್ ದೂರು ನೀಡಿದ್ದರು. ತನಿಖೆ ನಡೆಸಿದ ಪೊಲೀಸರ ವಿಶೇಷ ತಂಡ, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ' ಎಂದೂ ಹೇಳಿದರು.

ವ್ಯವಸ್ಥಿತ ಸಂಚು: 'ಅಕ್ರಮವಾಗಿ ಹಣ ಸಂಪಾದಿಸಬೇಕು ಎಂದುಕೊಂಡಿದ್ದ ಆರೋಪಿಗಳು, ಹಂದಿಗಳನ್ನು ಕಳ್ಳತನ ಮಾಡಲು ವ್ಯವಸ್ಥಿತ ಸಂಚು ರೂಪಿಸಿದ್ದರು. ಹಂದಿ ಸಾಕಾಣಿಕೆ ಕೇಂದ್ರದ ಬಳಿ ಸುತ್ತಾಡಿ, ಯಾರೆಲ್ಲ ಕೇಂದ್ರದಲ್ಲಿ ಇರುತ್ತಾರೆಂದು ತಿಳಿದುಕೊಂಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಜುಲೈ 16ರಂದು ತಡರಾತ್ರಿ ಮಾರಕಾಸ್ತ್ರ ಸಮೇತ ಕೇಂದ್ರಕ್ಕೆ ನುಗ್ಗಿದ್ದ ಆರೋಪಿಗಳು, ಹಂದಿಗಳನ್ನು ಕದ್ದು ಎರಡು ಬೊಲೆರೊ ವಾಹನಗಳಲ್ಲಿ ತುಂಬಿದ್ದರು. ಶಬ್ದ ಕೇಳಿ ಎಚ್ಚರಗೊಂಡಿದ್ದ ದೂರುದಾರ ಸಂದೀಪ್ ಹಾಗೂ ಅವರ ತಂದೆ ರಾಮಕೃಷ್ಣಪ್ಪ, ಆರೋಪಿಗಳನ್ನು ತಡೆಯಲು ಮುಂದಾಗಿದ್ದರು. ಅವರಿಬ್ಬರ ಮೇಲೆಯೇ ಆರೋಪಿಗಳು ರಾಡ್ ಹಾಗೂ ಮಚ್ಚಿನಿಂದ ಹೊಡೆದು ಹಂದಿಗಳ ಸಮೇತ ಪರಾರಿಯಾಗಿದ್ದರು' ಎಂದೂ ಹೇಳಿವೆ.

ಹಾಸನದಲ್ಲಿ ಹಂದಿ ಮಾರಿದ್ದ ಆರೋಪಿಗಳು: 'ಕದ್ದ ಹಂದಿಗಳನ್ನು ಹಾಸನದ ಚನ್ನರಾಯನಪಟ್ಟಣಕ್ಕೆ ತೆಗೆದುಕೊಂಡು ಹೋಗಿದ್ದ ಆರೋಪಿಗಳು, ಕಿರಣ್ ಎಂಬಾತನಿಗೆ ಮಾರಿದ್ದರು. ಅದರಿಂದ ಬಂದ ಹಣವನ್ನು ಎಲ್ಲರೂ ಹಂಚಿಕೊಂಡು ತಮ್ಮೂರಿಗೆ ಹೋಗಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿ ಶಂಕರ್ ಸೇರಿ ಐವರು ಗಂಗಾವತಿ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲೂ ಸುಲಿಗೆ ಮಾಡಿದ್ದರು. ಈ ಪ್ರಕರಣದಲ್ಲಿ ಸಿಕ್ಕಿಬಿದ್ದು, ನ್ಯಾಯಾಂಗ ಬಂಧನದಲ್ಲಿದ್ದರು. ಇವರ ತಂಡದ ಸದಸ್ಯನೊಬ್ಬನನ್ನು ಪತ್ತೆ ಮಾಡಿದಾಗ, ಎಲ್ಲರ ಹೆಸರು ಗೊತ್ತಾಯಿತು. ಶಂಕರ್ ಹಾಗೂ ಇತರರನ್ನು ಬಾಡಿ ವಾರೆಂಟ್ ಮೂಲಕ ಕಸ್ಟಡಿಗೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡರು' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ರೋಹಿಣಿ ಸಿಂಧೂರಿ ವಿರುದ್ಧದ ಆರೋಪ

1200 ಪುಟಗಳ ದಾಖಲೆ ಸಲ್ಲಿಸಿದ ಶಾಸಕ ಮಹೇಶ್

ಮೈಸೂರು: ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ 1,200 ಪುಟಗಳ ದಾಖಲೆಗಳನ್ನು ಶಾಸಕ ಸಾ.ರಾ.ಮಹೇಶ್ ಅವರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ವಸತಿ ಇಲಾಖೆ ಕಾರ್ಯದರ್ಶಿ ಡಾ.ಜೆ. ರವಿಶಂಕರ್ ಅವರಿಗೆ ಸಲ್ಲಿಸಿದರು.

ಆರೋಪಗಳ ಕುರಿತು ಪ್ರಾಥಮಿಕ ತನಿಖೆಯನ್ನು ನಡೆಸಲಿದ್ದು, ಮಾಹಿತಿ, ಹೇಳಿಕೆ, ದಾಖಲೆಗಳನ್ನು ನೀಡಬೇಕೆಂದು ಆ.10ರಂದು ಕಾರ್ಯದರ್ಶಿ ನೋಟಿಸ್ ನೀಡಿದ್ದರು. ಮೈಸೂರು-ಚಾಮರಾಜನಗರ ಎರಡೂ ಜಿಲ್ಲೆಗಳ ಜಿಲ್ಲಾಧಿಕಾರಿ, ಆರೋಗ್ಯಾಧಿಕಾರಿಗಳಿಂದ ಕಾರ್ಯದರ್ಶಿ ಮಾಹಿತಿ ಸಂಗ್ರಹಿಸಿದರು.

ನಂತರ ಸುದ್ದಿಗಾರರೊಂದಿಗೆ ಸಾ.ರಾ.ಮಹೇಶ್ ಮಾತನಾಡಿ, 'ರೋಹಿಣಿ ಸಿಂಧೂರಿ ಜಿಲ್ಲಾಧಿಕಾರಿಯಾಗಿದ್ದಾಗ ಕರ್ತವ್ಯ ಲೋಪ ಎಸಗಿದ್ದಾರೆ. ಭ್ರಷ್ಟಾಚಾರ ನಡೆಸಿದ್ದಾರೆ. ಚಾಮರಾಜನಗರದ ಆಮ್ಲಜ ನಕದ ದುರಂತಕ್ಕೂ ಕಾರಣವಾಗಿದ್ದಾರೆ' ಎಂದರು.

'ನಿಯಮ ಉಲ್ಲಂಘಿಸಿ ಜಿಲ್ಲಾಧಿಕಾರಿ ನಿವಾಸವನ್ನು ₹16.35 ಲಕ್ಷ ವೆಚ್ಚದಲ್ಲಿ ನವೀಕರಣ ಮಾಡಿಸಿದ್ದಾರೆ. ನಿರ್ಮಿತಿ ಕೇಂದ್ರದ ಹಣವನ್ನು ದುರುಪಯೋಗ ಮಾಡಿದ್ದಾರೆ. ನಿವಾಸವು ಪಾರಂಪರಿಕ ಕಟ್ಟಡವಾಗಿದ್ದರೂ ಆವರಣದಲ್ಲಿ ₹ 50 ಲಕ್ಷ ವೆಚ್ಚದಲ್ಲಿ ಈಜುಕೊಳ, ಜಿಮ್ ನಿರ್ಮಿಸಿದ್ದಾರೆ. ಸ್ಥಳೀಯ ಸಂಸ್ಥೆಗಳನ್ನು ನಿರ್ಲಕ್ಷಿಸಿ ಪರಿಸರ ಸ್ನೇಹಿ ಬ್ಯಾಗ್ ವಿತರಣೆಗಾಗಿ ₹ 9 ಬದಲು ₹ 52ಗೆ ಖರೀದಿಸಲು ಅನುಮೋದನೆ ನೀಡಿದ್ದರು' ಎಂದು ದೂರಿದರು.

'ಮೈಸೂರಿನಿಂದ ಚಾಮರಾಜ ನಗರಕ್ಕೆ ಪೂರೈಕೆಯಾಗಬೇಕಿದ್ದ ಆಮ್ಲಜನಕ ಸಿಲಿಂಡರ್‌ಗಳನ್ನು ಅವರು ತಡೆಹಿಡಿದಿದ್ದರಿಂದಲೇ ದುರಂತ ಸಂಭವಿಸಿತು' ಎಂದರು.

ಮಹಾತ್ಮ ಗಾಂಧಿ ಭಾವಚಿತ್ರಕ್ಕೆ ಹಾನಿ: ರಾಹುಲ್ ಕಚೇರಿ ಸಿಬ್ಬಂದಿ ಬಂಧನ

ವಯನಾಡ್ (ಪಿಟಿಐ): ಮಹಾತ್ಮ ಗಾಂಧಿ ಭಾವಚಿತ್ರಕ್ಕೆ ಹಾನಿ ಎಸಗಿದ ಪ್ರಕರಣಕ್ಕೆ ಸಂಬಂಧಿಸಿ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರ ವಯನಾಡ್ ಕಚೇರಿಯ ಇಬ್ಬರು ಸಿಬ್ಬಂದಿ ಸೇರಿದಂತೆ ನಾಲ್ವರನ್ನು ಬಂಧಿಸಲಾಗಿದೆ.

2 ತಿಂಗಳ ಹಿಂದೆ ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾ (ಎಸ್‌ಎಫ್‌ಐ) ಕಾರ್ಯಕರ್ತರು ನಡೆಸಿದ್ದ ಹಿಂಸಾತ್ಮಕ ಪ್ರತಿಭಟನೆ ವೇಳೆ ಮಹಾತ್ಮ ಗಾಂಧಿ ಭಾವಚಿತ್ರಕ್ಕೆ ಹಾನಿ ಎಸಗಲಾಗಿತ್ತು.

'ಜೂನ್ 24ರಂದು ಎಸ್‌ಎಫ್‌ಐ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದು, ರಾಹುಲ್ ಗಾಂಧಿ ಅವರ ಕಚೇರಿಗೆ ಹಾನಿ ಮಾಡಿದ್ದರು. ಆ ಸಂದರ್ಭದಲ್ಲಿ, ರಾಹುಲ್ ಗಾಂಧಿ ಅವರ ಕಚೇರಿಯಲ್ಲಿದ್ದ ಮಹಾತ್ಮ ಗಾಂಧಿ ಭಾವಚಿತ್ರಕ್ಕೂ ಹಾನಿ ಮಾಡಲಾಗಿತ್ತು' ಎಂದು ಕಾಂಗ್ರೆಸ್ ಆರೋಪಿಸಿತ್ತು.

ಬೆನ್ಜ್ ಕಾರು– ಲಾರಿ ನಡುವೆ ಅಪಘಾತ

ಬೆಂಗಳೂರು: ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯ ಹೆಬ್ಬಾಳ ಮೇಲ್ಸೇತುವೆ ಬಳಿ ಅಪಘಾತ ಸಂಭವಿಸಿದ್ದು, ಬೆನ್ಜ್ ಕಾರು ಚಾಲಕ ಹಾಗೂ ಪ್ರಯಾಣಿಕರು ಗಾಯಗೊಂಡಿದ್ದಾರೆ.

'ಟ್ರಾವೆಲ್ಸ್ ಏಜೆನ್ಸಿಗೆ ಸೇರಿದ್ದ ಬೆನ್ಜ್ ಕಾರಿನಲ್ಲಿ ವಿಮಾನ ನಿಲ್ದಾಣದಿಂದ ಎಚ್‌ಎಸ್‌ಆರ್ ಲೇಔಟ್‌ಗೆ ಪ್ರಯಾಣಿಕರು ಹೊರಟಿದ್ದರು. ಶುಕ್ರವಾರ ನಸುಕಿನ 4.30 ಗಂಟೆ ಸುಮಾರಿಗೆ ಬೆನ್ಜ್ ಕಾರು, ಎದುರಿಗೆ ಹೊರಟಿದ್ದ ಲಾರಿಗೆ ಡಿಕ್ಕಿ ಹೊಡೆದಿತ್ತು. ಇದರಿಂದಾಗಿ ಕಾರು ಜಖಂಗೊಂಡಿತ್ತು' ಎಂದು ಆರ್‌.ಟಿ.ನಗರ ಸಂಚಾರ ಪೊಲೀಸರು ಹೇಳಿದರು.

'ಕಾರಿನ ಚಾಲಕ ಹಾಗೂ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಕಾರು ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣವೆಂದು ಗೊತ್ತಾಗಿದ್ದು, ತನಿಖೆ ಮುಂದುವರಿದಿದೆ' ಎಂದು ತಿಳಿಸಿದರು.

ಜಾಮೀನು ಬಳಿಕ ಕಾರ್ಯಕ್ರಮಕ್ಕೆ ನಿರ್ಬಂಧ

‘ಕಾರ್ಯಕ್ರಮಕ್ಕೆ ಅನುಮತಿ ಕೋರಿ ಸಂಘಟಕರು ಅರ್ಜಿ ಸಲ್ಲಿಸಿರಲಿಲ್ಲ. ಪೊಲೀಸರೂ ಯಾವುದೇ ನೋಟಿಸ್ ನೀಡಿರಲಿಲ್ಲ. ಅವರೇ ಏಕಾಏಕಿ ಕಾರ್ಯಕ್ರಮ ರದ್ದುಪಡಿಸಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ

ಮುನವ್ವರ್ ಫಾರೂಕಿ ಕಾರ್ಯಕ್ರಮ ದಿಢೀರ್ ರದ್ದು

ಬೆಂಗಳೂರು: ನಗರದಲ್ಲಿ ಶುಕ್ರವಾರ (ಅಗಸ್ಟ್ 19) ನಿಗದಿಪಡಿಸಿದ್ದ ಮುನವ್ವರ್ ಫಾರೂಕಿ ಅವರ ಸ್ಟ್ಯಾಂಡ್ ಅಪ್ ಕಾಮಿಡಿ ಕಾರ್ಯಕ್ರಮವನ್ನು ಅನುಮತಿ ಸಿಗದ ಕಾರಣ ದಿಢೀರ್ ರದ್ದು ಮಾಡಲಾಗಿದೆ.

‘ಜೆ.ಪಿ. ನಗರದ ಎಂ.ಎನ್.ಆರ್ ಕನ್‌ವೆನ್ಶನ್ ಸಭಾಭವನದಲ್ಲಿ ಕಾರ್ಯಕ್ರಮ ಇರುವುದಾಗಿ ಜಾಹೀರಾತು ನೀಡಲಾಗಿತ್ತು. ಜಾಲತಾಣದ ಮೂಲಕ ಟಿಕೆಟ್ ಮಾರಾಟವೂ ನಡೆದಿತ್ತು.



ಕಾರ್ಯಕ್ರಮಕ್ಕೆ ಹೋಗಲು ಹಲವರು ಸಿದ್ಧರಾಗಿದ್ದರು. ಆದರೆ, ಕಾರ್ಯಕ್ರಮ ವನ್ನು ರದ್ದುಪಡಿಸಿರುವುದಾಗಿ ಸಂಘಟಕರು ಘೋಷಿಸಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಧ್ಯಪ್ರದೇಶದ ಇಂದೋರ್‌ನಲ್ಲಿ ಕಳೆದ ವರ್ಷ ಮುನ್ರೋ ಕೆಫೆಯಲ್ಲಿ ಕಾರ್ಯಕ್ರಮ ನಡೆಸಿಕೊಟ್ಟಿದ್ದ ಮುನವ್ವರ್, ಧರ್ಮ, ದೇವತೆಗಳು ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದರು. ಈ ಸಂಬಂಧ ಅವರನ್ನು ಬಂಧಿಸಲಾಗಿತ್ತು. 37 ದಿನ ಜೈಲಿನಲ್ಲಿದ್ದು, ಜಾಮೀನಿನ ಮೇಲೆ ಹೊರಬಂದಿದ್ದರು. ಇದಾದ ನಂತರ, ಹಲವೆಡೆ ಅವರ ಕಾರ್ಯಕ್ರಮಗಳಿಗೆ ನಿರ್ಬಂಧ ಹೇರಲಾಗಿತ್ತು’ ಎಂದು ತಿಳಿಸಿವೆ.

‘2021ರ ನ. 28ರಂದು ಅಶೋಕನಗರ ಬಳಿಯ ‘ಗುಡ್ ಶೆಫರ್ಡ್’ ಸಭಾಂಗಣದಲ್ಲಿ ‘ಡೊಂಗ್ರಿ ಟು ನೋವೇರ್’ ಹೆಸರಿನಲ್ಲಿ ಮುನವ್ವರ್ ಕಾರ್ಯಕ್ರಮ ನಿಗದಿಪಡಿಸಲಾಗಿತ್ತು. ‘ಕಾರ್ಯಕ್ರಮದಿಂದ ಶಾಂತಿ ಸುವ್ಯವಸ್ಥೆಗೆ ಧಕ್ಕೆ ಆಗುತ್ತದೆ’ ಎಂಬುದಾಗಿ ಪೊಲೀಸರು ನೋಟಿಸ್ ನೀಡಿದ್ದರಿಂದ ಈ ಕಾರ್ಯಕ್ರಮವನ್ನೂ ರದ್ದುಪಡಿಸಲಾಗಿತ್ತು’ ಎಂದೂ ಮೂಲಗಳು ಹೇಳಿವೆ.

ಭೂಸಾರಿಗೆ ನಿರ್ದೇಶನಾಲಯದಿಂದ ಅಧ್ಯಯನ

ಪೇ ಪಾರ್ಕಿಂಗ್: ಡಲ್ಟ್ ಸಮೀಕ್ಷೆ

● ನವೀನ್ ಮಿನೇಜಸ್

ಬೆಂಗಳೂರು: ನಗರದಲ್ಲಿ ವಾಹನ ನಿಲುಗಡೆಗೆ ಸಾಧ್ಯವಿರುವ ಜಾಗಗಳ ಬಗ್ಗೆ ನಗರ ಭೂಸಾರಿಗೆ ನಿರ್ದೇಶನಾಲಯ (ಡಲ್ಟ್) 1,089 ಕಿಲೋ ಮೀಟರ್ ಸಮೀಕ್ಷೆ ಮಾಡಿದೆ. ವಾಣಿಜ್ಯ ಪ್ರದೇಶಗಳಲ್ಲಿ ಪೇ–ಪಾರ್ಕಿಂಗ್ ವ್ಯವಸ್ಥೆ ವಿಸ್ತರಿಸಲು ಕಾರ್ಯಸಾಧ್ಯತೆಯನ್ನು ಡಲ್ಟ್ ಅಧ್ಯಯನ ಮಾಡುತ್ತಿದೆ.

ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ ರೀತಿಯ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ ಇತರ ಪ್ರದೇಶ ಗಳಿಗೂ ವಿಸ್ತರಣೆಯಾಗುವ ಸಾಧ್ಯತೆ ಇದೆ.

ಪಾರ್ಕಿಂಗ್ ನೀತಿ ಅನುಷ್ಠಾನದ ಬಗ್ಗೆ ನಗರಾಭಿವೃದ್ಧಿ ಇಲಾಖೆ ಪರಿಶೀಲನೆ ನಡೆಸಿತು. ಬಿಬಿಎಂಪಿ, ನಮ್ಮ ಮೆಟ್ರೊ, ಬೆಂಗಳೂರು ಸಂಚಾರ ಪೊಲೀಸ್ ಮತ್ತು ಡಲ್ಟ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಪಾವತಿಸಿ ವಾಹನ ನಿಲುಗಡೆ ತಾಣ ನಿರ್ಮಾಣಕ್ಕೆ ಜಾಗ ಗುರುತಿಸುವ ಜವಾಬ್ದಾರಿ ಡಲ್ಟ್‌ಗೆ ವಹಿಸಿದ್ದರೆ, ಖಾಸಗಿ ಏಜೆನ್ಸಿಗಳ ಮೂಲಕ ಯೋಜನೆ ಅನುಷ್ಠಾನಗೊಳಿಸುವ ಹೊಣೆಯನ್ನು ಬಿಬಿಎಂಪಿಗೆ ವಹಿಸಲಾಗಿದೆ.

ಐದು ವಲಯಗಳಲ್ಲಿ ನಿಲುಗಡೆ ತಾಣ ನಿರ್ಮಿಸಲು ಸೂಕ್ತ ಎನಿಸಿರುವ ರಸ್ತೆಗಳನ್ನು ಗುರುತಿಸುವ ಕಾರ್ಯವನ್ನು ಡಲ್ಟ್ ಪೂರ್ಣಗೊಳಿಸಿದೆ.

ಪ್ರಜಾವಾಣಿ ವಿಶೇಷ

‘ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳಲ್ಲಿ ಸದ್ಯ ಸಮೀಕ್ಷೆ ನಡೆಯುತ್ತಿದೆ. ಕಾರುಗಳು, ದ್ವಿಚಕ್ರ ವಾಹನಗಳು, ಸೈಕಲ್‌ಗಳು ಮತ್ತು ಆಟೋರಿಕ್ಷಾಗಳಿಗೆ ಪ್ರತ್ಯೇಕ ಜಾಗ ಕಾಯ್ದಿರಿಸುವ ವಿವರವೂ ವರದಿಯಲ್ಲಿ ಇರಲಿದೆ’ ಡಲ್ಟ್ ಆಯುಕ್ತೆ ವಿ.ಮಂಜುಳಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ವಾಣಿಜ್ಯ ಪ್ರದೇಶದ ರಸ್ತೆಗಳಲ್ಲಿ ಮಾತ್ರ ಈ ವ್ಯವಸ್ಥೆ ಪರಿಚಯಿಸಲಾಗುವುದು. ಪ್ರತಿ ವಲಯದಲ್ಲೂ ಸಂಚಾರ ಪೊಲೀಸರು, ಬಿಬಿಎಂಪಿ ಎಂಜಿನಿಯರ್‌ಗಳು ಮತ್ತು ಡಲ್ಟ್ ಅಧಿಕಾರಿಗಳನ್ನು ಒಳಗೊಂಡ ಕಾರ್ಯಪಡೆ ರಚಿಸಲಾಗಿದೆ. ಸ್ಥಳ ಪರಿಶೀಲನೆ ನಡೆಸಿಯೇ ಸ್ಥಳ ಗುರುತಿಸುವಿಕೆ ಅಂತಿಮಗೊಳಿಸಲಾಗಿದೆ. ಪರಿಕಲ್ಪನೆ ಮತ್ತು ವಿನ್ಯಾಸ ಒಳಗೊಂಡು ವಿವರವಾದ ಯೋಜನಾ ವರದಿ ಸಿದ್ಧಪಡಿಸುವ ಕಾರ್ಯ ಮುಂದುವರಿದಿದೆ’ ಎಂದರು.

‘ವಸತಿ ಪ್ರದೇಶದಲ್ಲಿ ಮನೆಯ ಮುಂದೆ ವಾಹನ ನಿಲ್ಲಿಸಲು ಪರವಾನಗಿ ಪಡೆದುಕೊಳ್ಳಬೇಕು ಎಂಬ ಪ್ರಸ್ತಾವ ಪಾರ್ಕಿಂಗ್ ನೀತಿಯಲ್ಲಿದೆ. ಆದರೆ, ಅದನ್ನು ತಕ್ಷಣವೇ ಪರಿಚಯಿಸಿದರೆ ಹಿನ್ನಡೆ ಆಗಬಹುದೆಂಬ ಕಾರಣಕ್ಕೆ ಸದ್ಯಕ್ಕೆ ವಾಣಿಜ್ಯ ಪ್ರದೇಶಗಳಲ್ಲಿ ಈ ನೀತಿ ಅನುಷ್ಠಾನಗೊಳಿಸಲಾಗುತ್ತಿದೆ’ ಎಂದು ಹಿರಿಯ ಅಧಿಕಾರಿಯೊಬ್ಬರು ಖಚಿತ ಪಡಿಸಿದರು.

‘ವರದಿ ಬಳಿಕ ಟೆಂಡರ್’



ತುಷಾರ್ ಗಿರಿನಾಥ್

‘ವಲಯ ಆಯುಕ್ತರ ಜತೆ ಸಮಾಲೋಚನೆ ನಡೆಸಿಯೇ ಡಲ್ಟ್ ವರದಿ ಸಿದ್ಧಪಡಿಸುತ್ತಿದೆ. ವರದಿ ಬಂದ ಬಳಿಕ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗುವುದು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಪಾರ್ಕಿಂಗ್ ವ್ಯವಸ್ಥೆಯನ್ನು ಸುಗಮಗೊಳಿಸಿದರೆ ಸರ್ಕಾರಕ್ಕೆ ಹೆಚ್ಚುವರಿ ವರಮಾನ ಬರಲಿದೆ. ಆದರೆ, ಈ ರೀತಿಯ ಯೋಜನೆ ಅನುಷ್ಠಾನ ಸವಾಲಿನ ಕೆಲಸ. ಪೇ–ಪಾರ್ಕಿಂಗ್ ವ್ಯವಸ್ಥೆಗೆ 85 ರಸ್ತೆಗಳನ್ನು ಬಿಬಿಎಂಪಿ ಗುರುತಿಸಿತ್ತು. ಆದರೆ, ಸ್ಥಳೀಯವಾಗಿ ವಿರೋಧ ವ್ಯಕ್ತವಾಗಿದ್ದರಿಂದ ಸಾಧ್ಯವಾಗಿಲ್ಲ’ ಎಂದು ಹೇಳಿದರು.



ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದಿರುವುದನ್ನು ಖಂಡಿಸಿ ಕಾಂಗ್ರೆಸ್ ಪಕ್ಷದ ವತಿಯಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ರಾಥೋಡ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ರಾಮಲಿಂಗಾ ರೆಡ್ಡಿ, ಮುಖಂಡ ವಿ.ಎಸ್. ಉಗ್ರಪ್ಪ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಸದಸ್ಯ ನಜೀರ್ ಅಹ್ಮದ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಮೊಟ್ಟೆ ಎಸೆತ: ನ್ಯಾಯಾಂಗ ತನಿಖೆಗೆ ಕಾಂಗ್ರೆಸ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಕಾರಿನ ಮೇಲೆ ದಾಳಿಮಾಡಿ, ಮೊಟ್ಟೆ ಎಸೆದಿರುವ ಘಟನೆಯ ಕುರಿತು ನ್ಯಾಯಾಂಗ ತನಿಖೆಗೆ ಆದೇಶಿಸುವಂತೆ ಕಾಂಗ್ರೆಸ್ ಆಗ್ರಹಿಸಿದೆ.

ಮೊಟ್ಟೆ ಎಸೆದ ಘಟನೆ ವಿರೋಧಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು, ‘ಘಟನೆಯ ಹಿಂದೆ ಪ್ರಬಲ ಕೈವಾಡವಿದೆ. ತಕ್ಷಣವೇ ಈ ಕುರಿತು ನ್ಯಾಯಾಂಗ ತನಿಖೆಗೆ ಆದೇಶಿಸಬೇಕು. ತಪ್ಪಿದರೆ ಪ್ರತಿ ಜಿಲ್ಲೆಯಲ್ಲೂ ಹೋರಾಟ ಆರಂಭಿಸಲಾಗುವುದು’ ಎಂದರು.

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ‘ಸಿದ್ದರಾಮಯ್ಯ ಅವರ ಮೇಲಿನ ದಾಳಿಯ ಹಿಂದೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಕೈವಾಡವಿದೆ. ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆರ್‌ಎಸ್‌ಎಸ್‌ನ ಕೈಗೊಂಬೆ. ಮೇಲಿನವರು ಕುಣಿಸಿದಂತೆ ಕುಣಿಯುತ್ತಾರೆ. ಮೋದಿ, ಶಾ ಆಣತಿಯಂತೆ ದಾಳಿ ನಡೆದಿದೆ’ ಎಂದು ವಾಗ್ದಾಳಿ ನಡೆಸಿದರು.

ಶಾಸಕ ಕೆ.ಆರ್. ರಮೇಶ್ ಕುಮಾರ್ ಮಾತನಾಡಿ, ‘ಆರ್‌ಎಸ್‌ಎಸ್ ಮತ್ತು ಬಿಜೆಪಿಯವರು ಗೋಡ್ಸೆ ಅಭಿಮಾನಿಗಳು. ಅವರು ಎಂದಿಗೂ ನೇರವಾಗಿ ಹೋರಾಟ ಮಾಡಲಾರರು. ಮಹಾತ್ಮ ಗಾಂಧಿಯವರನ್ನು ಗೋಡ್ಸೆ ಹೇಗೆ ಕೊಂದಿದ್ದ ಎಂಬುದನ್ನು ನೋಡಿಲ್ಲವೆ. ಸಿದ್ದರಾಮಯ್ಯ ಅವರು ಆರ್‌ಎಸ್‌ಎಸ್ ವಿರುದ್ಧ ಮಾತನಾಡುತ್ತಾರೆ ಎಂಬ ಕಾರಣಕ್ಕಾಗಿಯೇ ಈ ದಾಳಿ ನಡೆದಿದೆ’ ಎಂದರು.

‘ಇಂತಹ ಘಟನೆಗಳು ಅನಾಹುತಕ್ಕೆ ಎಡೆಮಾಡುತ್ತವೆ. ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ತಕ್ಷಣವೇ ನ್ಯಾಯಾಂಗ ತನಿಖೆಗೆ ಆದೇಶಿಸದಿದ್ದರೆ ರಾಜ್ಯದಾದ್ಯಂತ ಹೋರಾಟ ಆರಂಭಿಸುತ್ತೇವೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಹೇಳಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ಶಾಸಕರಾದ ಕೃಷ್ಣ ಬೈರೇಗೌಡ, ರಿಜ್ವಾನ್ ಅರ್ಷದ್, ಮುಖಂಡ ವಿ.ಎಸ್. ಉಗ್ರಪ್ಪ ಸೇರಿ ಹಲವರು ಪ್ರತಿಭಟನಾ ಸಭೆಯಲ್ಲಿ ಮಾತನಾಡಿದರು.

‘ಕಸದ ತೊಟ್ಟಿ ಮೇಲಿಡಲೂ ಯೋಗ್ಯವಲ್ಲ’

‘ವಿ.ಡಿ. ಸಾವರ್ಕರ್ ಒಬ್ಬ ಸ್ವಾತಂತ್ರ್ಯ ಹೋರಾಟಗಾರನೇ ಅಲ್ಲ. ಬ್ರಿಟೀಷರ ಕ್ಷಮೆಯಾಚಿಸಿ, ಅವರಿಂದ ಪಿಂಚಣಿ ಪಡೆದ ಸಾವರ್ಕರ್ ಮತ್ತು ದೇಶದ ಮೊದಲ ಭಯೋತ್ಪಾದಕ ನಾಥೂರಾಮ ಗೋಡ್ಸೆಯ ಭಾವಚಿತ್ರಗಳು ಕಸದ ತೊಟ್ಟಿ ಮೇಲೆ ಹಾಕುವುದಕ್ಕೂ ಯೋಗ್ಯವಲ್ಲ’ ಎಂದು ಬಿ.ಕೆ. ಹರಿಪ್ರಸಾದ್ ಹೇಳಿದರು.

‘ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ ಎಂಬ ಕಾರಣಕ್ಕೆ ಸಿದ್ದರಾಮಯ್ಯ ಮೇಲೆ ದಾಳಿ ನಡೆದಿದೆ. ನಾವು ಖಾಕಿ ಚೆಡ್ಡಿಗಳಿಗೆ ಹೆದರುವುದಿಲ್ಲ. ಸಾವರ್ಕರ್, ಗೋಡ್ಸೆ ವಿರುದ್ಧ ನಮ್ಮ ಮಾತು ಮುಂದುವರಿಯುತ್ತದೆ’ ಎಂದರು.

‘ನೇಮಕಾತಿ: ಶೇ 40 ವಸೂಲಿ’

‘ಸಾರಿಗೆ ಇಲಾಖೆಯ ಮೋಟಾರು ವಾಹನ ನಿರೀಕ್ಷಕರ ನೇಮಕಾತಿಯಲ್ಲೂ ಶೇ 40 ವಸೂಲಿ ನಡೆದಿರುವುದು ನಿಶ್ಚಿತ’ ಎಂದು ರಾಜ್ಯ ಸರ್ಕಾರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

‘ಅನರ್ಹರಿಗೆ ಅರ್ಹತೆ?’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯ ಶುಕ್ರವಾರದ ಸಂಚಿಕೆಯಲ್ಲಿ ಪ್ರಕಟವಾಗಿದ್ದ ವಿಶೇಷ ವರದಿಯ ತುಣುಕನ್ನು ತನ್ನ ಅಧಿಕೃತ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿರುವ ಕೆಪಿಸಿಸಿ, ‘ಶೇ 40 ಸರ್ಕಾರದ ಹುದ್ದೆ ಮಾರಾಟದ ಪರ್ವ ಮುಂದುವರಿದಿದೆ’ ಎಂದು ಹೇಳಿದೆ.

‘ಪಿಎಸ್‌ಐ ಅಕ್ರಮದಂತೆ ಸಾರಿಗೆ ಇಲಾಖೆಯ ಬ್ರೇಕ್ ಇನ್‌ಸ್ಪೆಕ್ಟರ್‌ಗಳ ಆಯ್ಕೆಯಲ್ಲೂ ಅಕ್ರಮ ನಡೆದಿರುವುದು ಬೆಳಕಿಗೆ ಬಂದಿದೆ. ಭ್ರಷ್ಟಾಚಾರದ ಕೂಪವಾಗಿರುವ ಕೆಪಿಎಸ್‌ಸಿಯೇ ಅನರ್ಹರೆಂದು ಗುರುತಿಸಿದ್ದ ಅಭ್ಯರ್ಥಿಗಳನ್ನು ಅರ್ಹರೆಂದು ಮುದ್ರೆ ಒತ್ತಿದ್ದೇಕೆ’ ಎಂದು ಪ್ರಶ್ನಿಸಿದೆ.

ಯುಯುಸಿಎಂಎಸ್ ಜಾರಿಗೆ ವಿಳಂಬ ಕುಲಸಚಿವರ ವಜಾ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (ಯುಯುಸಿಎಂಎಸ್) ಜಾರಿಗೆ ವಿಳಂಬ ಮಾಡುವ ಕುಲಸಚಿವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಇಲ್ಲವೇ, ಕರ್ತವ್ಯದಿಂದಲೇ ಬಿಡುಗಡೆ ಮಾಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್ ಅಶ್ವತ್ಥ ನಾರಾಯಣ ಎಚ್ಚರಿಸಿದರು.

ವಿಕಾಸಸೌಧದಲ್ಲಿ ಶುಕ್ರವಾರ ನಡೆದ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಕಡಿಮೆ ಸಿಬ್ಬಂದಿ, ಕಡಿಮೆ ಖರ್ಚು ವೆಚ್ಚದಲ್ಲಿ ವಿಶ್ವವಿದ್ಯಾಲಯಗಳನ್ನು ನಿರ್ವಹಿಸಲು ಇದು ಪರಿಣಾಮಕಾರಿ ವ್ಯವಸ್ಥೆ. ಇಂತಹ ವ್ಯವಸ್ಥೆ ಅನುಷ್ಠಾನಕ್ಕೆ ನಿರ್ಲಕ್ಷ್ಯ ತೋರುವ ಕುಲಸಚಿವರ ಕುರಿತು ಕುಲಪತಿಗಳೇ ವರದಿ ನೀಡಬೇಕು ಎಂದು ಸೂಚಿಸಿದರು.

ಕೆಲವು ವಿಶ್ವವಿದ್ಯಾಲಯಗಳಲ್ಲಿ ಸೆಮಿಸ್ಟರ್ ಪರೀಕ್ಷೆಗಳು ಮುಗಿದು ಫಲಿತಾಂಶ ಬಂದಿವೆ. ಬಹುತೇಕ ವಿವಿಗಳು ಪರೀಕ್ಷೆ ನಡೆಸಿದರೂ ಮೌಲ್ಯಮಾಪನ ಮಾಡಿಲ್ಲ, ಫಲಿತಾಂಶ ಕೂಡ ಪ್ರಕಟವಾಗಿಲ್ಲ. ಕೆಲವು ವಿವಿಗಳಲ್ಲಿ ವಿದ್ಯಾರ್ಥಿಗಳ ಪ್ರವೇಶವನ್ನು ತಂತ್ರಾಂಶದಲ್ಲಿ ನಮೂದಿಸಿಲ್ಲ. ಈ ಲೋಪವನ್ನು ಇದೇ ತಿಂಗಳ ಒಳಗೆ ಸಂಪೂರ್ಣವಾಗಿ ಸರಿಪಡಿಸಿಕೊಳ್ಳಬೇಕು. ಯುಯುಸಿಎಂಎಸ್ ಜಾರಿಯಲ್ಲಿನ ತೊಡಕು ತಿಳಿದುಕೊಳ್ಳಲು ನಿತ್ಯವೂ ವಿಡಿಯೊ ಸಂವಾದದ ಮೂಲಕ ಗಮನಕ್ಕೆ ತರಬಹುದು ಎಂದು ತಾಕೀತು ಮಾಡಿದರು.

ನವೋದ್ಯಮ ಸ್ಪರ್ಧೆ: ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಮ್ಮ ಬೆಂಗಳೂರು ಪ್ರತಿಷ್ಠಾನ, ಪರ್ಯಾವರಣ ಗತಿ ವಿಧಿ ಸಂಸ್ಥೆಗಳ ಸಹಯೋಗದಲ್ಲಿ ಎರಡು ದಿನ ನಡೆಯಲಿರುವ ‘ಇಕೋ ಯೂತ್’ ನವೋದ್ಯಮ ಸ್ಪರ್ಧೆ ಮತ್ತು ಶೃಂಗಸಭೆ ಉದ್ಘಾಟಿಸಿ ಮಾತನಾಡಿದ ಅವರು, ಮುಂದುವರಿದ ದೇಶಗಳಲ್ಲಿ ಸಂಸ್ಥೆ ಚಾಲಿತ ಅರ್ಥ ವ್ಯವಸ್ಥೆ ಇದೆ. ಆದರೆ, ನಮ್ಮಲ್ಲಿ ಕೈಗಾರಿಕೆ ಚಾಲಿತ ಅರ್ಥ ವ್ಯವಸ್ಥೆಯಿದೆ. ದೇಶ ಸಮಗ್ರವಾಗಿ ಅಭಿವೃದ್ಧಿಗೊಳ್ಳಲು ಸಂಸ್ಥೆ ಚಾಲಿತ ಅರ್ಥ ವ್ಯವಸ್ಥೆ ಅಗತ್ಯ. ಹೊಸ ಶಿಕ್ಷಣ ನೀತಿ ಇಂತಹ ವಿಷಯಗಳಲ್ಲಿ ಮಹತ್ವದ ಪಾತ್ರ ನಿರ್ವಹಿಸಲಿದೆ ಎಂದರು.

ಸಿ-ಕ್ಯಾಂಪ್‌ಗೆ ಜಮೀನು: ಭರವಸೆ

ಬೆಂಗಳೂರು: ಜೈವಿಕ ವಿಜ್ಞಾನ ಕ್ಷೇತ್ರದ ಪ್ರತಿಷ್ಠಿತ ಸಂಶೋಧನಾ ಸಂಸ್ಥೆ ಸಿ-ಕ್ಯಾಂಪ್‌ಗೆ (ಸೆಂಟರ್ ಫಾರ್ ಸೆಲ್ಯುಲರ್ ಅಂಡ್ ಮಾಲಿಕ್ಯುಲರ್ ಪ್ಲಾಟ್ ಫಾರಂಸ್) ಅಗತ್ಯವಿರುವ ಜಮೀನು ಒದಗಿಸಲು ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಭರವಸೆ ನೀಡಿದರು.

ಸಿ-ಕ್ಯಾಂಪ್ ಸಿಇಒ ತಸ್ಲಿಮಾ ಅವರ ನೇತೃತ್ವದ ನಿಯೋಗದ ಶುಕ್ರವಾರ ನೀಡಿದ ಮನವಿ ಸ್ವೀಕರಿಸಿ ಅವರು ಮಾತನಾಡಿದರು.

ಸಿ-ಕ್ಯಾಂಪ್ ಸಂಸ್ಥೆ ಪ್ರಸ್ತುತ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಅದಕ್ಕೆ ಹೊಂದಿಕೊಂಡಂತೆ ಅಗತ್ಯ ಜಮೀನು ಕಲ್ಪಿಸಲು ಪ್ರಯತ್ನಿಸಲಾಗುವುದು ಎಂದರು.

ಪತಿ ಅಪಹರಣ: ಪತ್ನಿ ಬಂಧನ, ಸ್ನೇಹಿತ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೀಣ್ಯ ಠಾಣೆ ವ್ಯಾಪ್ತಿಯ ನಿವಾಸಿ ನವೀನ್ ಎಂಬುವರ ಅಪಹರಣ ಪ್ರಕರಣ ಸಂಬಂಧ, ಅವರ ಪತ್ನಿ ಅನುಪಲ್ಲವಿ ಸೇರಿದಂತೆ ಆರು ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಪ್ರಕರಣದ ಪ್ರಮುಖ ಆರೋಪಿ ಎನ್ನಲಾದ ಅನುಪಲ್ಲವಿ ಸ್ನೇಹಿತ ಹೇಮಂತ್, ಪೊಲೀಸರ ವಿಚಾರಣೆಗೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ಬಾಗಲಗುಂಟೆ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದೆ.

‘ಕ್ಯಾಬ್ ಚಾಲಕ ನವೀನ್ ಅವರನ್ನು ಅಪಹರಣ ಮಾಡಿ, ತಮಿಳುನಾಡಿಗೆ ಕರೆದೊಯ್ದು ಅಕ್ರಮ ಬಂಧನದಲ್ಲಿರಿಸಲಾಗಿತ್ತು. ನವೀನ್ ನಾಪತ್ತೆ ಬಗ್ಗೆ ತಂಗಿ ವರಲಕ್ಷ್ಮಿ ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೀಣ್ಯ ಪೊಲೀಸರು ಹೇಳಿದರು.

₹ 2 ಲಕ್ಷಕ್ಕೆ ಸುಪಾರಿ: ‘ಅನುಪಲ್ಲವಿ ಹಾಗೂ ಹೇಮಂತ್, ಹಲವು ವರ್ಷಗಳ ಸ್ನೇಹಿತರು. ಇಬ್ಬರ ನಡುವೆ ಸಲುಗೆ ಇತ್ತು. ಈ ಸಂಗತಿ ಗೊತ್ತಾಗುತ್ತಿದ್ದಂತೆ ನವೀನ್, ಪತ್ನಿ ಅನುಪಲ್ಲವಿ ಅವರಿಗೆ ಎಚ್ಚರಿಕೆ ನೀಡಿದ್ದರು. ಇದರಿಂದ ಸಿಟ್ಟಾದ ಪತ್ನಿ, ಪತಿಯನ್ನು ಅಪಹರಣ ಮಾಡಿಸಲು ಮುಂದಾಗಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಅಪರಾಧ ಹಿನ್ನೆಲೆಯುಳ್ಳ ನಾಗರಾಜು, ಹರೀಶ್ ಹಾಗೂ ಮುಗಿಲನ್ ಎಂಬುವರನ್ನು ಸಂಪರ್ಕಿಸಿದ್ದ ಅನುಪಲ್ಲವಿ, ಪತಿಯನ್ನು ಅಪಹರಿಸಲು ₹ 2 ಲಕ್ಷ ಸುಪಾರಿ ನೀಡಿದ್ದರು. ಪ್ರವಾಸಕ್ಕೆ ಹೋಗುವ ಸೋಗಿನಲ್ಲಿ ಆರೋಪಿಗಳು, ನವೀನ್ ಅವರನ್ನು ಅಪಹರಿಸಿದ್ದರು. ಅವರನ್ನು ಕೊಲೆ ಮಾಡಿರುವುದಾಗಿ ಸುಳ್ಳು ಸುದ್ದಿ ಹಬ್ಬಿಸಿದ್ದರು. ಆದರೆ, ನವೀನ್ ತಮಿಳುನಾಡಿನಲ್ಲಿ ಪತ್ತೆಯಾಗಿದ್ದಾರೆ’ ಎಂದು ಹೇಳಿವೆ.

ಸಂಭಾಷಣೆ ನೀಡಿದ ಸುಳಿವು: ‘ಪ್ರಕರಣ ದಾಖಲಾಗುತ್ತಿದ್ದಂತೆ ಅನುಪಲ್ಲವಿ ಮೊಬೈಲ್ ಸಂಭಾಷಣೆ ವಿವರ ಪರಿಶೀಲಿಸಲಾಗಿತ್ತು. ಉದ್ಯಮಿಯಾದ ಸ್ನೇಹಿತ ಹೇಮಂತ್‌ಗೆ ಹಲವು ಬಾರಿ ಕರೆ ಮಾಡಿದ್ದು ಗೊತ್ತಾಗಿತ್ತು. ಆತನನ್ನು ವಿಚಾರಣೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿತ್ತು. ಅಷ್ಟರಲ್ಲೇ ಆತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅನುಪಲ್ಲವಿ ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಚಿತ್ರಾವಳಿ



ನಗರದ ಚಿತ್ರಕಲಾ ಪರಿಷತ್‌ನಲ್ಲಿ ಶುಕ್ರವಾರದಿಂದ ಆರಂಭವಾಗಿರುವ ಕರಕುಶಲ ಮೇಳದದಲ್ಲಿ ನಟಿ ವೈಷ್ಣವಿ ಅವರು ಕಲಾಕೃತಿಗಳನ್ನು ವೀಕ್ಷಿಸಿದರು



ನಾಗಸಂದ್ರದಲ್ಲಿರುವ ವಿಡಿಯ ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜಿನಲ್ಲಿ ನಡೆದ ‘ಪ್ರತಿಭಾ ದಿನಾಚರಣೆಯ ಕಲಾಂಜಲಿ–2022 ಕಾರ್ಯಕ್ರಮ’ವನ್ನು ನಟ, ನಿರ್ದೇಶಕ ರಘುರಾಮ ಉದ್ಘಾಟಿಸಿದರು. ಪ್ರಾಂಶುಪಾಲ ಗುರುರಾಜ್ ದಾವಣಗೆರೆ, ಕಾರ್ಯದರ್ಶಿ ರಾಜಾರಾಮ್ ಇದ್ದರು.



ಬನ್ನೇರುಘಟ್ಟ ರಸ್ತೆಯಲ್ಲಿ ಡ್ರೆಸ್ ಸರ್ಕಲ್ ಶಾಪಿಂಗ್ ಮಾಲ್ ಅನ್ನು ನಟಿ ಶ್ರೀನಿಧಿ ಶೆಟ್ಟಿ ಉದ್ಘಾಟಿಸಿದರು. ಮಾಲ್‌ನ ವ್ಯವಸ್ಥಾಪಕ ನಿರ್ದೇಶಕ ಗೋಪಾಲ ರೆಡ್ಡಿ ಮತ್ತು ಕುಟುಂಬದವರು ಇದ್ದರು. –ಪ್ರಜಾವಾಣಿ ಚಿತ್ರ

ಜನವಾದಿ ಮಹಿಳಾ ಸಂಘಟನೆಯಿಂದ ಪ್ರತಿಭಟನೆ

ಅತ್ಯಾಚಾರಿಗಳ ಬಿಡುಗಡೆ ಖಂಡನೀಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಲ್ಕಿಸ್ ಬಾನು ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದ 11 ಮಂದಿ ಅಪರಾಧಿಗಳನ್ನು ಗುಜರಾತ್ ಸರ್ಕಾರ ಬಿಡುಗಡೆಗೊಳಿಸಿರುವುದನ್ನು ಖಂಡಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಸದಸ್ಯರು ಬಸವನಗುಡಿಯಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕೆ.ಎಸ್. ವಿಮಲಾ ಮಾತನಾಡಿ, ‘ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವದಂದು, ದೇಶದ ಪ್ರಗತಿಗೆ ಮಹಿಳೆಯರ ಕುರಿತು ಗೌರವದ ಭಾವನೆ ಅತ್ಯಗತ್ಯ. ಅವರ ಘನತೆಗೆ ಚ್ಯುತಿ ಬಾರದಂತೆ ನಡೆದುಕೊಳ್ಳುವ ಪ್ರತಿಜ್ಞೆ ಮಾಡೋಣ ಎಂದು ಕರೆ ನೀಡಿದ ಸಂದರ್ಭದಲ್ಲೇ ಅವರ ತವರು ರಾಜ್ಯದಲ್ಲಿ ಅತ್ಯಾಚಾರಿಗಳಿಗೆ ರಕ್ಷಣೆ ನೀಡುತ್ತಿರುವುದು ದುರಂತವೇ ಸರಿ’ ಎಂದು ಬೇಸರ ವ್ಯಕ್ತಪಡಿಸಿದರು.

‘2018ರಲ್ಲಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಕೈಗೊಂಡ ತೀರ್ಮಾನದ ಪ್ರಕಾರ ಮರಣ ದಂಡನೆ, ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಕೈದಿಗಳು ಸನ್ನಡತೆಯ ಆಧಾರದ ಮೇಲೆ ಬಿಡುಗಡೆಗೆ ಅರ್ಹರಲ್ಲ ಎಂದು ಆದೇಶ ನೀಡಲಾಗಿತ್ತು. ಆದರೆ ಗುಜರಾತ್ ಸರ್ಕಾರ ಇದೆಲ್ಲವನ್ನು ಧಿಕ್ಕರಿಸಿ ಬಿಡುಗಡೆ ಮಾಡಿರುವುದು ಮಹಿಳಾ ಸಮುದಾಯಕ್ಕೆ ಮಾಡಿದ ಅಪಮಾನ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಬಿಡುಗಡೆ ಮಾಡಿದ ಎಲ್ಲಾ ಅಪರಾಧಿಗಳನ್ನು ಮತ್ತೆ ಜೈಲಿಗೆ ಕಳಿಸಿ, ಉಗ್ರ ಶಿಕ್ಷೆ ವಿಧಿಸಲು ಸುಪ್ರೀಂ ಕೋರ್ಟ್ ಮುಂದಾಗಬೇಕು’ ಎಂದು ಒತ್ತಾಯಿಸಿದರು.

‘ರಾಜಸ್ಥಾನದ ಶಾಲೆಯಲ್ಲಿ ಕುಡಿಯುವ ನೀರಿನ ಮಡಕೆ ಮುಟ್ಟಿದ ಪರಿಶಿಷ್ಟ ಜಾತಿಯ ಬಾಲಕನನ್ನು ಥಳಿಸಿ ಹತ್ಯೆ ಮಾಡಿರುವ ಘಟನೆ ಖಂಡನೀಯ. ಕೂಡಲೇ ಆರೋಪಿಗೆ ಉಗ್ರ ಶಿಕ್ಷೆ ನೀಡಬೇಕು’ ಎಂದು ಸಮುದಾಯ ಕರ್ನಾಟಕ ಸಾಂಸ್ಕೃತಿಕ ಸಂಘಟನೆಯ ಟಿ.ಸುರೇಂದ್ರ ರಾವ್ ಆಗ್ರಹಿಸಿದರು.

ದಕ್ಷಿಣ ಜಿಲ್ಲಾ ಸಮಿತಿಯ ಅಧ್ಯಕ್ಷೆ ಬಸಮ್ಮ ಮತ್ತು ಕಾರ್ಯದರ್ಶಿ ಪಾರ್ವತಿ, ಸುನಂದಾ, ಶ್ರೀಮತಿ ಕೆ. ಇದ್ದರು.



ಬಿಲ್ಕಿಸ್ ಬಾನು ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದ 11 ಅಪರಾಧಿಗಳನ್ನು ಗುಜರಾತ್ ಸರ್ಕಾರ ಬಿಡುಗಡೆಗೊಳಿಸಿರುವುದನ್ನು ಖಂಡಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಸದಸ್ಯರು ಬಸವನಗುಡಿಯಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು

ವೃದ್ಧೆ ಹತ್ಯೆ: ನೇಪಾಳ ತಂಡದ ಕೃತ್ಯ

ಬೆಂಗಳೂರು: ಎಚ್‌ಎಸ್‌ಆರ್ ಲೇಔಟ್ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ನಡೆದಿದ್ದ ವೃದ್ಧೆ ಜಯಶ್ರೀ (80) ಅವರ ಹತ್ಯೆ ಪ್ರಕರಣ ಭೇದಿಸಿರುವ ಪೊಲೀಸರು, ನೇಪಾಳದ ಆರು ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ.

‘ನೇಪಾಳದ ಖಡಕ್ ಸಿಂಗ್, ಮುಖೇಶ್ ಖಡ್ಕಾ, ಕಮಲ್ ದಾಮಿ, ಕೇಶವ್ ಬೂದಾ, ಶಿವು ಕಟಾಯತ್ ಹಾಗೂ ಗಜೇಂದ್ರ ಬಂಧಿತರು. ಇವರಿಂದ ₹ 20 ಸಾವಿರ ನಗದು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಬಹುಮಹಡಿ ಕಟ್ಟಡ ಹೊಂದಿದ್ದ ವೃದ್ಧೆಯ ಮನೆಗೆ ಆಗಸ್ಟ್ 12ರಂದು ರಾತ್ರಿ ನುಗ್ಗಿದ್ದ ಆರೋಪಿಗಳು, ಜಯಶ್ರೀ ಅವರನ್ನು ಉಸಿರುಗಟ್ಟಿಸಿ ಕೊಂದಿದ್ದರು. ಮನೆಯಲ್ಲಿದ್ದ ಚಿನ್ನಾಭರಣ ದೋಚಿಕೊಂಡು ಪರಾರಿಯಾಗಿದ್ದರು’ ಎಂದು ತಿಳಿಸಿದರು.

ಭದ್ರತಾ ಕೆಲಸ ಮಾಡುತ್ತಲೇ ಸಂಚು: ‘ನೇಪಾಳದಿಂದ ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದ ಖಡಕ್ ಸಿಂಗ್, ಎಚ್‌ಎಸ್‌ಆರ್ ಲೇಔಟ್‌ನ 13ನೇ ಅಡ್ಡರಸ್ತೆಯಲ್ಲಿ ಕಟ್ಟಡದಲ್ಲಿ ಭದ್ರತಾ ಕೆಲಸಕ್ಕೆ ಸೇರಿದ್ದರು. ವೃದ್ಧೆ ಜಯಶ್ರೀ ಅವರನ್ನು ಗಮನಿಸಿದ್ದ ಆರೋಪಿ, ಅವರನ್ನು ಪರಿಚಯ ಮಾಡಿಕೊಂಡು ಆಗಾಗ ಮಾತನಾಡಿಸುತ್ತಿದ್ದ. ವೃದ್ಧೆ ಬಳಿ ಚಿನ್ನಾಭರಣ ಹಾಗೂ ಹಣ ಇರುವುದನ್ನು ತಿಳಿದು ಕೊಂಡಿದ್ದ. ಅದನ್ನೆಲ್ಲ ದೋಚಲು ಸಂಚು ರೂಪಿಸಿದ್ದ’ ಎಂದು ಪೊಲೀಸರು ಹೇಳಿದರು.

ನೇಪಾಳ ಗಡಿಯಲ್ಲಿ ಬಂಧನ: ‘ತ್ವರಿತವಾಗಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿತ್ತು. ಮೂವರು ಆರೋಪಿಗಳು ನಗರದಲ್ಲೇ ಸಿಕ್ಕಿ ಬಿದ್ದರು. ಉಳಿದ ಮೂವರನ್ನು ನೇಪಾಳ ಗಡಿಯಲ್ಲಿ ಬಂಧಿಸಿ ನಗರಕ್ಕೆ ಕರೆತರಲಾಗಿದೆ. ಹಣ ಮತ್ತು ಚಿನ್ನಾಭರಣಕ್ಕಾಗಿ ಕೃತ್ಯ ಎಸಗಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ’ ಎಂದೂ ಪೊಲೀಸರು ತಿಳಿಸಿದರು.

‘ಪ್ರಶಸ್ತಿ, ನಗದು ಬಹುಮಾನ ಹೆಚ್ಚಳಕ್ಕೆ ಪ್ರಸ್ತಾವನೆ’

ಬೆಂಗಳೂರು: ‘ನಾಡಿನಲ್ಲಿ 2,500ಕ್ಕೂ ಅಧಿಕ ಕಲಾವಿದರು ಸಕ್ರಿಯರಾಗಿದ್ದಾರೆ. ಆದ್ದರಿಂದ ವಾರ್ಷಿಕ ಪ್ರಶಸ್ತಿಗಳ ಸಂಖ್ಯೆ ಹಾಗೂ ನಗದು ಬಹುಮಾನ ಹೆಚ್ಚಳ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ’ ಎಂದು ಕರ್ನಾಟಕ ಲಲಿತ ಕಲಾ ಅಕಾಡೆಮಿ ಅಧ್ಯಕ್ಷ ಡಿ. ಮಹೇಂದ್ರ ತಿಳಿಸಿದರು.

ಅಕಾಡೆಮಿಯು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಸಮಾ ರಂಭದಲ್ಲಿ ಕಲಾವಿದ ರಾದ ಸುಭಾಶ್ ಚಂದ್ರ ಕೆಂಬಾವಿ, ಸ್ಮಿತಾ ಕಾರಿಯಪ್ಪ, ಅನಿರುದ್ಧ ಜೋಶಿ ಮತ್ತು ಬಿ. ದೇವರಾಜ್ ಅವರು ‘2021ನೇ ಸಾಲಿನ ಗೌರವ ಪ್ರಶಸ್ತಿ’ ಸ್ವೀಕರಿಸಿದರು.

ಆರ್. ರಾಜ ಮತ್ತು ಜಯಕುಮಾರ್ ಜಿ. ಅವರು ಗೈರಾಗಿದ್ದರು. ಈ ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಒಳಗೊಂಡಿದೆ.

‘ಪ್ರತಿವರ್ಷ ಮೂವರು ಕಲಾವಿದರಿಗೆ ವಾರ್ಷಿಕ ಗೌರವ ಪ್ರಶಸ್ತಿ ನೀಡಲಾಗುತ್ತಿತ್ತು. ಆದರೆ, ಈ ಸಾಲಿನಲ್ಲಿ 50ನೇ ವಾರ್ಷಿಕ ಕಲಾ ಪ್ರದರ್ಶನದ ಸುವರ್ಣ ಸಂದರ್ಭದ ನೆನಪಿಗಾಗಿ ಈ ಸಂಖ್ಯೆಯನ್ನು ಆರಕ್ಕೆ ಹೆಚ್ಚಿಸಲಾಗಿದೆ. ಕೋವಿಡ್ ನಡುವೆಯೂ ಅಕಾಡೆಮಿ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಿದೆ. ಅನ್ಯ ಮೂಲಗಳಿಂದಲೂ ಹಣ ಸಂಗ್ರಹಿಸಿ, ಕರ್ನಾಟಕ ಪ್ರಿಂಟ್ ಬೈನಾಲೆಯಂತಹ ಕಾರ್ಯಕ್ರಮಗಳನ್ನು ನಡೆಸಲಾಗಿದೆ’ ಎಂದು ಡಿ. ಮಹೇಂದ್ರ ಹೇಳಿದರು.

15 ಕಲಾವಿದರಿಗೆ ಬಹುಮಾನ

ನವೀನ್ ಕುಮಾರ್ ಬಿ., ಜಿ.ಎಸ್.ಬಿ. ಅಗ್ನಿಹೋತ್ರಿ, ರಮೇಶ ಪರಸಪ್ಪ ಗಾರವಾಡ, ಕೆ.ವಿ. ಕಾಳೆ, ರಾಮಕೃಷ್ಣ ನಾಯಕ್, ಶಿವಯೋಗಿ ಅಣ್ಣಾನವರ್, ವಿಶ್ವನಾಥ ಎಚ್.ಎಂ, ಮಡಿವಾಳಪ್ಪ ಎಸ್. ಲಂಗೋಟಿ, ಸುನಿಲ್ ಮಿಶ್ರ ಹಾಗೂ ಸಂಗೀತಾ ಕೆ. ಅವರು ತಲಾ ₹ 25 ಸಾವಿರ ನಗದು ಒಳಗೊಂಡ ವಾರ್ಷಿಕ ‘ಕಲಾಪ್ರದರ್ಶನದ ಬಹುಮಾನ’ ಸ್ವೀಕರಿಸಿದರು.

ವಿಶಾಲ ಕೆ., ಲಕ್ಷ್ಮಣ ಕಬಾಡಿ, ಪವನ್ ಕುಮಾರ್ ಆರ್., ನರಸಿಂಹ ಮೂರ್ತಿ ಹಾಗೂ ಅಂಬರಾಯ ಚಿನ್ಮಳ್ಳಿ ಅವರು ಮೆಚ್ಚುಗೆ ಬಹುಮಾನ ಪಡೆದರು.

ಅನಿತಾ ಸುರೇಂದ್ರಕುಮಾರ್‌ಗೆ ಪ್ರಶಸ್ತಿ

ಬೆಂಗಳೂರು: ಪಂಡಿತರತ್ನ ಎ.ಶಾಂತಿರಾಜಶಾಸ್ತ್ರಿ ಟ್ರಸ್ಟ್ ವತಿಯಿಂದ ನೀಡುವ ‘ಆದರ್ಶ ಜೈನ ಮಹಿಳಾ ರತ್ನ’ ಪ್ರಶಸ್ತಿಗೆ ಧರ್ಮಸ್ಥಳದ ಅನಿತಾ ಸುರೇಂದ್ರ ಕುಮಾರ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹25,000 ನಗದು ಪ್ರಶಸ್ತಿ ಪತ್ರ ಒಳಗೊಂಡಿರಲಿದೆ. ಪ್ರಶಸ್ತಿಯನ್ನು ಆಕ್ಟೋಬರ್‌ನಲ್ಲಿ ಪ್ರದಾನ ಮಾಡಲಾಗುವುದು. ಎಂ.ಜೆ. ಇಂದ್ರಕುಮಾರ್, ಎ.ಸಿ. ವಿದ್ಯಾಧರ್, ಪಿ.ವೈ. ರಾಜೇಂದ್ರಕುಮಾರ್, ಪದ್ಮರಾಜ ದಂಡಾವತಿ ಹಾಗೂ ಜಿ.ಪಿ. ನಾಗೇಂದ್ರ ಪ್ರಸಾದ್ ಅವರನ್ನೊಳಗೊಂಡ ಸಮಿತಿಯು ಅನಿತಾ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿತು ಎಂದು ಪ್ರಕಟಣೆ ತಿಳಿಸಿದೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಆಗಾಗ ಸಾಬೂನಿಂದ ಕೈ ತೊಳೆಯುತ್ತಿರಿ

ನಿಧನ ವಾರ್ತೆ

ಉದಯ ಧರ್ಮಸ್ಥಳ



ಮಂಗಳೂರು: ಸಾಹಿತಿ ಉದಯ ಧರ್ಮಸ್ಥಳ (64) ಅವರು ಅಲ್ಪಕಾಲದ ಅನಾರೋಗ್ಯದಿಂದಾಗಿ ಶುಕ್ರವಾರ ರಾತ್ರಿ ಬೆಂಗಳೂರಿನಲ್ಲಿ ನಿಧನರಾದರು.

ಧರ್ಮಸ್ಥಳದವರಾದ ಅವರು ಬೆಂಗಳೂರಿನ ಮಾರತ್‌ಹಳ್ಳಿಯಲ್ಲಿ ನೆಲೆಸಿದ್ದರು. ‘ಸನಾತನ ಸಾರಥಿ’ ಪತ್ರಿಕೆಯ ಸಂಪಾದಕರಾಗಿದ್ದ ಅವರು ಧಾರ್ಮಿಕ ವಿಚಾರಗಳಿಗೆ ಸಂಬಂಧಿಸಿದ ಸಾಹಿತ್ಯ ಕೃಷಿಯಲ್ಲೂ ತೊಡಗಿಸಿಕೊಂಡಿದ್ದರು.

ತುಳು ಸಾಹಿತ್ಯ ಅಕಾಡೆಮಿ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. ತುಳುವನ್ನು ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರ್ಪಡೆ ಮಾಡುವುದಕ್ಕೆ ಸಂಬಂಧಿಸಿದ ಹೋರಾಟದಲ್ಲೂ ಸಕ್ರಿಯರಾಗಿದ್ದರು.

ಅವರಿಗೆ ಪತ್ನಿ ಹಾಗೂ ಇಬ್ಬರು ಗಂಡು ಮಕ್ಕಳು ಇದ್ದಾರೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಪದವಿ ಕಾಲೇಜುಗಳ ಮುಸ್ಲಿಂ ವಿದ್ಯಾರ್ಥಿನಿಯರು

ಹಿಜಾಬ್: ಟಿ.ಸಿ ಪಡೆದ ಶೇ 16 ವಿದ್ಯಾರ್ಥಿನಿಯರು

● ಹರ್ಷ

ಮಂಗಳೂರು: ಹಿಜಾಬ್ ಧರಿಸಿ ತರಗತಿಗೆ ಹಾಜರಾಗುವಂತಿಲ್ಲ ಎಂದು ಮಂಗಳೂರು ವಿಶ್ವವಿದ್ಯಾಲಯ ಕಳೆದ ಮೇ ತಿಂಗಳಿನಲ್ಲಿ ಸೂಚಿಸಿದ ಮೇಲೆ ವಿ.ವಿ ಸಂಯೋಜಿತ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳ ಶೇ 16ರಷ್ಟು ಮುಸ್ಲಿಂ ವಿದ್ಯಾರ್ಥಿನಿಯರು ಟಿ.ಸಿ (ವರ್ಗಾವಣೆ ಪ್ರಮಾಣಪತ್ರ) ಪಡೆದು, ಕಾಲೇಜಿನಿಂದ ಹೊರಗೆ ಉಳಿದಿದ್ದಾರೆ.


ಮಾಹಿತಿ ಹಕ್ಕಿನ ಅಡಿಯಲ್ಲಿ ಈ ವಿಷಯ ಬಹಿರಂಗಗೊಂಡಿದೆ. 2020–21, 2021–22ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರವೇಶ ಪಡೆದಿದ್ದ ಒಟ್ಟು 900 ಮುಸ್ಲಿಂ ವಿದ್ಯಾರ್ಥಿನಿಯರಲ್ಲಿ 145ವಿದ್ಯಾರ್ಥಿನಿಯರು ತಮ್ಮ ಟಿಸಿ ಪಡೆದಿದ್ದಾರೆ. ವಿವಿ ವ್ಯಾಪ್ತಿಯಲ್ಲಿ ಬರುವ ಕೊಡಗಿನ ಸರ್ಕಾರಿ, ಅನುದಾನಿತ 10 ಕಾಲೇಜುಗಳಲ್ಲಿ ಓದುತ್ತಿರುವ 113 ಮುಸ್ಲಿಂ ವಿದ್ಯಾರ್ಥಿನಿಯರು ಇದೇ ಕಾಲೇಜುಗಳಲ್ಲಿ ಶಿಕ್ಷಣ ಮುಂದುವರಿಸಿದ್ದಾರೆ.

ಶಿಕ್ಷಣ ಅರ್ಧಕ್ಕೆ ಮೊಟಕುಗೊಳಿಸಿದವರಲ್ಲಿ ಸರ್ಕಾರಿ ಕಾಲೇಜಿನವರು ಶೇ 34ರಷ್ಟಿದ್ದರೆ, ಅನುದಾನಿತ ಕಾಲೇಜಿನ ಶೇ 8ರಷ್ಟು ಮುಸ್ಲಿಂ ವಿದ್ಯಾರ್ಥಿನಿಯರು ಇದ್ದಾರೆ. ಮಂಗಳೂರಿನ ಡಾ.ಪಿ. ದಯಾನಂದ ಪೈ-ಪಿ ಸತೀಶ ಪೈ ಸರ್ಕಾರಿ ಕಾಲೇಜಿನಲ್ಲಿ 51 ಮುಸ್ಲಿಂ ವಿದ್ಯಾರ್ಥಿನಿಯರಲ್ಲಿ 35 ವಿದ್ಯಾರ್ಥಿಗಳು ಟಿಸಿ ಪಡೆದುಕೊಂಡು ಹೋಗಿದ್ದಾರೆ.

ಹಳೇಅಂಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 20 ವಿದ್ಯಾರ್ಥಿನಿಯರು ಎರಡು, ನಾಲ್ಕು ಮತ್ತು ಆರನೇ ಸೆಮಿಸ್ಟರ್‌ನಲ್ಲಿರುವಾಗಲೇ ಕಾಲೇಜಿಗೆ ಬರುವುದನ್ನು ಬಿಟ್ಟಿದ್ದಾರೆ. ‘ವಿದ್ಯಾರ್ಥಿನಿಯರಿಗೆ ಕಾಲೇಜಿಗೆ ಹಾಜರಾಗುವಂತೆ ತಿಳಿಸಲಾಗಿತ್ತು. ಆದರೆ, ಅವರು ಅದನ್ನು ನಿರ್ಲಕ್ಷಿಸಿದ್ದಾರೆ ಮತ್ತು ಟಿಸಿಯನ್ನು ಸಹ ಪಡೆದಿಲ್ಲ’ ಎಂದು ಪ್ರಾಂಶುಪಾಲ ಶ್ರೀಧರ್ ತಿಳಿಸಿದ್ದಾರೆ.

ಉಡುಪಿ ಜಿಲ್ಲೆ ಅಜ್ಜರಕಾಡಿನ ಸರ್ಕಾರಿ ಕಾಲೇಜಿನಲ್ಲಿ 9 ಮುಸ್ಲಿಂ ವಿದ್ಯಾರ್ಥಿನಿಯರು ಟಿಸಿ ಪಡೆದಿದ್ದಾರೆ.

ಮಂಗಳೂರು ವಿ.ವಿ ಕುಲಪತಿ ಪಿ.ಎಸ್.ಯಡಪಡಿತ್ತಾಯ ಪ್ರತಿಕ್ರಿಯಿಸಿ, ‘ಮುಸ್ಲಿಂ ವಿದ್ಯಾರ್ಥಿನಿಯರು ಸಂಯೋಜಿತ ಕಾಲೇಜುಗಳಿಗೆ ಪ್ರವೇಶ ಪಡೆಯಲು ಸಹಾಯ ಮಾಡುವಂತೆ ವಿನಂತಿಸಿದ್ದರು. ಈ ಸಮಸ್ಯೆ ಪರಿಹರಿಸಲು ಸಾಧ್ಯವಾಗದ ಕಾರಣ ಕರ್ನಾಟಕ ರಾಜ್ಯ ಮುಕ್ತ ವಿ.ವಿ ಯನ್ನು ಸಂಪರ್ಕಿಸಲು ಅವರಿಗೆ ತಿಳಿಸಿದ್ದೆ. ಧರ್ಮಕ್ಕಿಂತ ಶಿಕ್ಷಣ ಮುಖ್ಯ ಎಂಬುದನ್ನು ಕೂಡ ಹೇಳಿದ್ದೇನೆ’ ಎಂದರು.



❦ ಸುಭಾಷಿತ ❦
ಅಜ್ಞಾನಕ್ಕಿಂತ ಅತಿ ಹೆಚ್ಚು ಅಪಾಯಕಾರಿಯಾದುದು ದುರಹಂಕಾರ.
–ಆಲ್ಬರ್ಟ್ ಐನ್‌ಸ್ಟೀನ್

ಶಿಕ್ಷಕನಿಂದ ಏಟು: ದಲಿತ ಬಾಲಕ ಸಾವು ಲಜ್ಜೆಯಿಂದ ತಲೆತಗ್ಗಿಸಬೇಕಾದ ಸಂಗತಿ

ಕುಡಿಯುವ ನೀರಿನ ಮಡಕೆ ಮುಟ್ಟಿದ ಕಾರಣಕ್ಕಾಗಿ ಖಾಸಗಿ ಶಾಲಾ ಶಿಕ್ಷಕನಿಂದ ಪೆಟ್ಟು ತಿಂದು, ಪರಿಶಿಷ್ಟ ಜಾತಿಯ 9 ವರ್ಷದ ಬಾಲಕ ಮೃತಪಟ್ಟಿರುವ ಘಟನೆ ರಾಜಸ್ಥಾನದಲ್ಲಿ ನಡೆದಿದೆ. ಸ್ವಾತಂತ್ರ್ಯದ 'ಅಮೃತ ಮಹೋತ್ಸವ' ಆಚರಣೆಯ ಆಸುಪಾಸಿನಲ್ಲಿ ನಡೆದಿರುವ ಈ ಘಟನೆ ಸಮಾಜದಲ್ಲಿ ಮಡುಗಟ್ಟಿರುವ ಜಾತೀಯತೆ ಹಾಗೂ ಅದರ ಪರಿಣಾಮವಾದ ಕ್ರೌರ್ಯದ ಅಭಿವ್ಯಕ್ತಿಯ ಮತ್ತೊಂದು ಉದಾಹರಣೆ. ಸಾವಿಗೆ ಕಾರಣವಾಗಿರುವ ಶಿಕ್ಷಕನ ಮೇಲೆ ಕೊಲೆಗೆ ಯತ್ನ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ನತದೃಷ್ಟ ವಿದ್ಯಾರ್ಥಿಯ ಕುಟುಂಬಕ್ಕೆ ರಾಜಸ್ಥಾನ ಸರ್ಕಾರವು ₹ 5 ಲಕ್ಷ ಪರಿಹಾರ ಪ್ರಕಟಿಸಿದ್ದು, ಬಾಲಕನ ಕುಟುಂಬಕ್ಕೆ ನ್ಯಾಯ ಒದಗಿಸುವುದಾಗಿ ಹೇಳಿದೆ. ಇವೆಲ್ಲವೂ ದುರಂತವೊಂದು ಸಂಭವಿಸಿದಾಗ ನಡೆಯಬೇಕಾದ ಕಾನೂನಾತ್ಮಕ ಪ್ರಕ್ರಿಯೆಗಳು. ದಲಿತರು ದೌರ್ಜನ್ಯಕ್ಕೊಳಗಾದ ಘಟನೆ ಸುದ್ದಿಯಾದಾಗಲೆಲ್ಲ ಇಂಥ ಕಾನೂನು ಕ್ರಮಗಳು ಜರುಗುತ್ತವೆ. ಆದರೆ, ಇದರಿಂದಾಗಿ ದಲಿತರ ಮೇಲಿನ ದೌರ್ಜನ್ಯದ ಪ್ರಕರಣಗಳೇನೂ ಕಡಿಮೆಯಾಗಿಲ್ಲ. ದಲಿತರ ಸಾವುನೋವಿನ ಘಟನೆಗಳು ದೇಶದ ಒಂದಲ್ಲ ಒಂದು ಭಾಗದಲ್ಲಿ ನಿರಂತರವಾಗಿ ನಡೆಯುತ್ತಲೇ ಇವೆ. ದಲಿತ ಸಮುದಾಯದವರ ಆತ್ಮಗೌರವವನ್ನು ಹುಸಿಸುವ ಹಾಗೂ ಅವರನ್ನು ಕೀಳಾಗಿ ನಡೆಸಿಕೊಳ್ಳುವ ಘಟನೆಗಳು ನಡೆಯದ ಒಂದು ದಿನವೂ ಇಲ್ಲ ಎನ್ನುವಂತಾಗಿದೆ. ಇಂಥ ಘಟನೆಗಳಲ್ಲಿ ಕೆಲವಷ್ಟೇ ಮಾಧ್ಯಮಗಳಲ್ಲಿ ಪ್ರಕಟಗೊಳ್ಳುತ್ತವೆ, ಉಳಿದವು ಸದ್ದಿಲ್ಲದೆ ತೆರೆಮರೆಗೆ ಸರಿಯುತ್ತವೆ. ವರದಿಯಾದ ಘಟನೆಗಳು ಕೂಡ ತಾರ್ಕಿಕ ಅಂತ್ಯವನ್ನು ಮುಟ್ಟುವುದು ಅಪರೂಪ. ಹೊಸ ಘಟನೆ ವರದಿಯಾದ ನಂತರ, ಹಳೆಯ ಘಟನೆ ವಿಸ್ಮೃತಿಗೆ ಸಲ್ಲುವುದು ಸಾಮಾನ್ಯ ಎನ್ನುವಂತಾಗಿದೆ.



ಜಾತಿಯ ಶೋಷಣೆಗಳಿಗೆ ಸರ್ಕಾರಗಳು ಪರಿಹಾರ ಕಂಡುಕೊಳ್ಳದೇ ಹೋದರೆ 'ಜಾತ್ಯತೀತ ಭಾರತ'ದ ಹೆಗ್ಗಳಿಕೆ ಮಾತುಗಳಿಗಷ್ಟೇ ಸೀಮಿತವಾಗಲಿದೆ

ಸಮಾಜದಲ್ಲಿ ಬೇರುಬಿಟ್ಟಿರುವ ಜಾತೀಯತೆಯಿಂದಾಗಿ ದಲಿತರು ಅನುಭವಿಸುತ್ತಿರುವ ಸಂಕಷ್ಟಗಳ ನೋವು ಸುಲಭ ವ್ಯಾಖ್ಯಾನಕ್ಕೆ ನಿಲುಕುವಂತಹದ್ದಲ್ಲ. ಅದು ಯಾವುದೇ ದೇಶ ಅಥವಾ ಸಮಾಜಕ್ಕೆ ಗೌರವ ತರುವಂತಹದ್ದೂ ಅಲ್ಲ. ಎಲ್ಲ ವರ್ಗದವರಿಗೂ ಸಮಾನ ಹಕ್ಕುಗಳು ಮತ್ತು ಅವಕಾಶಗಳನ್ನು ಕಲ್ಪಿಸುವ ಸಂಕಲ್ಪದೊಂದಿಗೆ ಗಳಿಸಿದ ಸ್ವಾತಂತ್ರ್ಯಕ್ಕೆ ಎಪ್ಪತ್ತೈದು ವರ್ಷಗಳು ತುಂಬಿದ ನಂತರವೂ ಸಾಮಾಜಿಕ ಅಸಮಾನತೆ ಜೀವಂತವಾಗಿರುವುದು ಹಾಗೂ ನಾಗರಿಕ ಸಮಾಜ ತಲೆತಗ್ಗಿಸಬೇಕಾದ ಘಟನೆಗಳು ಪುನರಾವರ್ತನೆಗೊಳ್ಳುತ್ತಿರುವುದು ಕಳವಳ ಹುಟ್ಟಿಸುವಂತಹದ್ದು. ದಲಿತ ಎನ್ನುವ ಕಾರಣಕ್ಕಾಗಿ ಅಧಿಕಾರಿಗಳು ತಮ್ಮನ್ನು ನಿರ್ಲಕ್ಷಿಸುತ್ತಿದ್ದಾರೆ ಎಂದು ಇತ್ತೀಚೆಗೆ ಆರೋಪಿಸಿದ್ದ ಉತ್ತರ ಪ್ರದೇಶದ ಸಚಿವ ದಿನೇಶ್ ಖಟಿಕ್, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದರು. ಕೆಲವು ಗ್ರಾಮ ಪಂಚಾಯಿತಿಗಳ ದಲಿತ ಅಧ್ಯಕ್ಷರಿಗೆ ರಾಷ್ಟ್ರಧ್ವಜ ಹಾರಿಸುವ ಅವಕಾಶ ನಿರಾಕರಿಸಿದ ಹಾಗೂ ಕುರ್ಚಿಯ ಮೇಲೆ ಕೂರಲು ಅವಕಾಶ ನೀಡದಿರುವ ಘಟನೆಗಳು 'ಅಮೃತ ಮಹೋತ್ಸವ' ಸಂದರ್ಭದಲ್ಲಿಯೇ ತಮಿಳುನಾಡಿನಿಂದ ವರದಿಯಾಗಿವೆ. ರಾಜಕೀಯವಾಗಿ ಅಧಿಕಾರ ಸ್ಥಾನದಲ್ಲಿರುವ ದಲಿತರೇ ಜಾತಿಯ ಕಿರುಕುಳಗಳಿಗೆ ಒಳಗಾಗುತ್ತಿರುವಾಗ, ಸಾಮಾನ್ಯರ ಪಾಡೇನು? ದಲಿತರ ಮೇಲಿನ ದೌರ್ಜನ್ಯದ ಘಟನೆಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇವೆ. ದಲಿತರ ಮೇಲಿನ ದೌರ್ಜನ್ಯದ ಘಟನೆಗಳು ದೇಶದಲ್ಲೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿರುವುದು 'ಕಾನೂನು ಮತ್ತು ಸುವ್ಯವಸ್ಥೆಗೆ ಮಾದರಿ' ಎಂದು ಬಿಂಬಿಸಲಾಗುತ್ತಿರುವ ಉತ್ತರ ಪ್ರದೇಶದಿಂದ. ದೇಶದ ಜನಸಂಖ್ಯೆಯಲ್ಲಿ ಶೇ 16ಕ್ಕೂ ಹೆಚ್ಚಿನ ಪ್ರಮಾಣದಲ್ಲಿರುವ ದಲಿತರಿಗೆ ಸಾಮಾಜಿಕ ನ್ಯಾಯ ಮರೀಚಿಕೆಯಾಗಿಯೇ ಉಳಿದಿದೆ. ದಬ್ಬಾಳಿಕೆ ಮತ್ತು ದೌರ್ಜನ್ಯವನ್ನು ಅವರು ಪ್ರತಿನಿತ್ಯ ಎದುರಿಸಬೇಕಾಗಿದೆ. ದಲಿತರಲ್ಲಿ ಕೆಲವರು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದರೂ, ಸಾಮಾನ್ಯ ದಲಿತರ ಸ್ಥಿತಿ ದಯನೀಯವಾಗಿಯೇ ಇದೆ.

ಜಾತೀಯತೆಯ ನಿವಾರಣೆಯಲ್ಲಿ ಉತ್ತರದ ರೂಪದಲ್ಲಿ ಶಿಕ್ಷಣವನ್ನು ಗುರುತಿಸಲಾಗುತ್ತದೆ. ಆದರೆ, ಶಿಕ್ಷಣ ಕ್ಷೇತ್ರ ಕೂಡ ಜಾತೀಯತೆಯ ಸೋಂಕಿನಿಂದ ಮುಕ್ತವಾಗಿಲ್ಲ. ವಿದ್ಯಾರ್ಥಿಗಳಲ್ಲಿ ಜಾತ್ಯತೀತ ಮನೋಭಾವ ಮೂಡಿಸಬೇಕಾದ ಶಿಕ್ಷಕರೇ ಜಾತಿಯ ಪೂರ್ವಗ್ರಹಗಳಿಂದ ಮುಕ್ತರಾಗಿಲ್ಲ. ಜಾತಿಯ ಮೇಲರಿಮೆಯ ಪರಿಣಾಮದ ರೂಪದಲ್ಲಿಯೇ ರಾಜಸ್ಥಾನದಲ್ಲಿ ವಿದ್ಯಾರ್ಥಿಯ ದುರಂತ ಸಾವನ್ನು ನೋಡಬೇಕಾಗಿದೆ. ಪ್ರಬಲ ಜಾತಿ ವಿದ್ಯಾರ್ಥಿನಿಯರ ಪೋಷಾಕು ತೆಗೆದುಕೊಳ್ಳಲಿಕ್ಕಾಗಿ, ದಲಿತ ಬಾಲಕಿಯರ ಸಮವಸ್ತ್ರ ಬಿಚ್ಚಿಸಿದ ಘಟನೆ ಉತ್ತರ ಭಾರತದಿಂದ ವರದಿಯಾಗಿತ್ತು. ಬೋಧಕರು ಮಾತ್ರವಲ್ಲ, ಮಕ್ಕಳ ಮನಸ್ಸಿನಲ್ಲೂ ಜಾತಿಯ ವಿಷಬೀಜವನ್ನು ಬಿತ್ತಲಾಗಿದೆ. ಪರಿಶಿಷ್ಟ ಸಮುದಾಯದ ಹೆಣ್ಣುಮಕ್ಕಳು ಮಾಡುವ ಆಹಾರವನ್ನು ಸೇವಿಸಲು ವಿದ್ಯಾರ್ಥಿಗಳು ನಿರಾಕರಿಸುವ ಪ್ರಸಂಗಗಳು ಆಗಾಗ ವರದಿಯಾಗುತ್ತಲೇ ಇರುತ್ತವೆ. ಜಾತಿಯ ಕಿರುಕುಳದಿಂದ ನೊಂದು ಪರಿಶಿಷ್ಟ ಸಮುದಾಯದ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವ ಉದಾಹರಣೆಗಳೂ ಇವೆ. ಈ ಎಲ್ಲ ಘಟನೆಗಳು ಪರಿಶಿಷ್ಟರ ಮೇಲೆ ಸಮಾಜ ಹೊಂದಿರುವ ಪೂರ್ವಗ್ರಹ, ಅಸಹನೆ ಹಾಗೂ ಅಮಾನವೀಯ ಮನಃಸ್ಥಿತಿಯನ್ನು ಸೂಚಿಸುವಂತಿವೆ. ಆಳವಾಗಿರುವ ಜಾತಿಯ ಗಾಯಕ್ಕೆ ಮುಲಾಮು ಬಳಿಯುವ ಪ್ರಯತ್ನಕ್ಕೆ ಕಳೆದ ಎಪ್ಪತ್ತೈದು ವರ್ಷಗಳಲ್ಲಿ ಗಮನಾರ್ಹ ಯಶಸ್ಸು ದೊರೆತಿಲ್ಲ. ಧರ್ಮನಿರಪೇಕ್ಷತೆಯನ್ನು ಎತ್ತಿಹಿಡಿದಿರುವ ಭಾರತದ ಸಂವಿಧಾನವು ಸಾಮಾಜಿಕ ತಾರತಮ್ಯಗಳನ್ನು ಸ್ಪಷ್ಟವಾಗಿ ನಿರಾಕರಿಸಿದೆ. ಜಾತಿಯ ಶೋಷಣೆಗಳಿಗೆ ಸಾಂವಿಧಾನಿಕ ಮಾರ್ಗದಲ್ಲೇ ಪರಿಹಾರ ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾಡದೆಹೋದರೆ, 'ಜಾತ್ಯತೀತ ಭಾರತ'ದ ಹೆಗ್ಗಳಿಕೆ ಮಾತುಗಳಿಗಷ್ಟೇ ಸೀಮಿತವಾಗಲಿದೆ.

ದಿನದ ಟ್ವೀಟ್

ಹೃದಯ ಕಲಕಿದೆ



ಬಿಲ್ಕಿಸ್ ಬಾನು ಮತ್ತು ಅವರ ಕುಟುಂಬದವರನ್ನು ಒಳಗೊಂಡ ಪ್ರಕರಣದ 11 ಮಂದಿ ಅತ್ಯಾಚಾರಿಗಳು, ಕೊಲೆಗಾರರ ಬಿಡುಗಡೆ ಹಾಗೂ ಆ ನಂತರದ ಸಂಭ್ರಮಾಚರಣೆಯು ಇತ್ತೀಚಿನ ದಿನಗಳಲ್ಲಿ ನಡೆದ ಅತ್ಯಂತ ಕ್ರೂರ ಮತ್ತು ದುರದೃಷ್ಟಕರ ಬೆಳವಣಿಗೆಯಾಗಿದೆ. ಇದು, ಆತ್ಮಸಾಕ್ಷಿ ಹೊಂದಿರುವವರ ಹೃದಯವನ್ನು ಕಲಕಿದೆ.

ಎಸ್.ಇರ್ಫಾನ್ ಹಬೀಬ್, ಇತಿಹಾಸಕಾರ

ಕಿಡಿನುಡಿ



ಬಿಬಿಎಂಪಿ ಚುನಾವಣೆಯನ್ನು ನಾಗರಿಕರು ಗಂಭೀರವಾಗಿ ತೆಗೆದುಕೊಳ್ಳದ ವಿನಾ ಎಲ್ಲ ರಾಜಕೀಯ ಪಕ್ಷಗಳೂ ನಾಗರಿಕರ ಮೇಲೆ ಸವಾರಿ ಮಾಡುತ್ತವೆ. ಬೆಂಗಳೂರಿನಲ್ಲಿ 10-20 ವರ್ಷಗಳಿಂದ ನೆಲೆಸಿರುವವರೂ ಬಿಬಿಎಂಪಿ ಚುನಾವಣೆಯ ಮತದಾನದಲ್ಲಿ ಭಾಗವಹಿಸುವುದಿಲ್ಲ. ಇಂತಹ ಮನೋಭಾವ ಬದಲಾಗಬೇಕಿದೆ.

ಶ್ರೀನಿವಾಸ್ ಅಲವಿಲ್ಲಿ, ಸದಸ್ಯ, ಜನಾಗ್ರಹ ಸಂಸ್ಥೆ

25 ವರ್ಷಗಳ ಹಿಂದೆ
ಬುಧವಾರ, 20-8-1997

• **ವೀರಪ್ಪನ್ 8 ಷರತ್ತಿಗೆ ಮನ್ನಣೆ: ಪಟೇಲ್**

ಬೆಂಗಳೂರು, ಆಗಸ್ಟ್ 19– ಜೀವರಕ್ಷಣೆ, ಸಂಬಂಧಿಕರಿಗೆ ಪುನರ್ವಸತಿಯ ಪರಿಶೀಲನೆ ಸೇರಿದಂತೆ ಎಂಟು ಷರತ್ತಿಗೆ ಒಳಪಟ್ಟು ದಂತಚೋರ, ನರಹಂತಕ ವೀರಪ್ಪನ್ ಹಾಗೂ ಆತನ ಸಹಚರರ ಶರಣಾಗತಿಗೆ ತಮಿಳುನಾಡು ಮತ್ತು ಕರ್ನಾಟಕ ಸರ್ಕಾರಗಳು ಸಮ್ಮತಿಸಿವೆ ಎಂದು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಇಂದು ವಿಧಾನಸಭೆಯಲ್ಲಿ ಪ್ರಕಟಿಸಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಹಾಗೂ ವಿರೋಧಿ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದು ಕೆಲ ನಿಮಿಷ ಬಿಸಿಯೇರಿದ ವಾತಾವರಣ ಉಂಟಾಯಿತು. ಸರ್ಕಾರದ ಧೋರಣೆ ಪ್ರತಿಭಟಿಸಿ ಕಾಂಗ್ರೆಸ್ ಹಾಗೂ ಭಾರತೀಯ ಜನತಾ ಪಕ್ಷದ ಸದಸ್ಯರು ಪ್ರತ್ಯೇಕವಾಗಿ ಸಭಾತ್ಯಾಗ ಮಾಡಿದ ಪ್ರಸಂಗವೂ ನಡೆಯಿತು.

ಚೆನ್ನೈನಿಂದ ಮಧ್ಯಾಹ್ನ ಹಿಂದಿರುಗಿದ ಮುಖ್ಯಮಂತ್ರಿ ಅವರು ಸಂಜೆ ಸದನದಲ್ಲಿ ಹೇಳಿಕೆ ನೀಡಿ ಎಂಟು ಷರತ್ತುಗಳನ್ನು ವಿವರಿಸಿದರು.

50 ವರ್ಷಗಳ ಹಿಂದೆ
ಭಾನುವಾರ, 20-8-1972

• **ಅರಸು ಸಂಪುಟದ ವಿರುದ್ಧ ಕೆಂಗಲ್ ಯುದ್ಧ ಘೋಷಣೆ**

ಬೆಂಗಳೂರು, ಆಗಸ್ಟ್ 19– ತಾವು ಆರಂಭಿಸಲಿರುವ 'ರಾಜಕೀಯ ಶುದ್ಧೀಕರಣ' ಚಳವಳಿಯ ಅಂಗವಾಗಿ ಕೇಂದ್ರದ ಮಾಜಿ ಸಚಿವ ಶ್ರೀ ಕೆ.ಹನುಮಂತಯ್ಯ ಅವರು ರಾಜ್ಯದ ಮಂತ್ರಿಮಂಡಲದ ವಿರುದ್ಧ ಯುದ್ಧ ಘೋಷಿಸಿದ್ದಾರೆ.

ಈ ಚಳವಳಿಯ ಅಂಗವಾಗಿ 'ರಾಜ್ಯದ ಮಂತ್ರಿಮಂಡಲ ಹೋಗಬೇಕಾದರೆ ಹೋಗಲೇಬೇಕು' ಎಂದು ಇಂದು ಸಂಜೆ ವರದಿಗಾರರಿಗೆ ತಿಳಿಸಿದರು.

ಮಂತ್ರಿಮಂಡಲದ ಬಗ್ಗೆ ಇನ್ನೊಂದು ವಾರದಲ್ಲಿ ಕಾಂಗ್ರೆಸ್ ಶಾಸಕರ ಅಭಿಪ್ರಾಯ ನಿರ್ದಿಷ್ಟ ರೂಪ ತಾಳುವುದೆಂದು ಸೂಚಕವಾಗಿ ಆದರೆ ಅಷ್ಟೇ ಸ್ಪಷ್ಟವಾಗಿ ಶ್ರೀ ಹನುಮಂತಯ್ಯ ತಿಳಿಸಿದರು.

ಮನವಿ: 30–40 ಕಾಂಗ್ರೆಸ್ ಶಾಸಕರೇ ಅಲ್ಲದೆ ಕೆಲವು ಮಂತ್ರಿಗಳೂ ಬಂದು ತಮ್ಮನ್ನು ಭೇಟಿ ಮಾಡುತ್ತಿದ್ದಾರೆಂದು ತಿಳಿಸಿದ ಶ್ರೀ ಕೆಂಗಲ್ ಅವರು, ಕಾಂಗ್ರೆಸ್ ಹೈಕಮಾಂಡಿಗೆ ಮನವಿ ಅರ್ಪಿಸುವ ರೂಪದಲ್ಲಿ ಈ ಶಾಸಕರ ಅಭಿಪ್ರಾಯ ವ್ಯಕ್ತವಾಗುವುದೆಂದು ಹೇಳಿದರು.

ಟಿ20 ಭರಾಟೆಯಲ್ಲಿ ಫಿಫ್ಟಿ–50 ಮಾದರಿ ಜನಪ್ರಿಯತೆ ಇಳಿಮುಖ?

ಏಕದಿನ ಕ್ರಿಕೆಟ್‌ಗೆ 'ಚುಟುಕು' ಕುಟುಕು



ವಿಶ್ಲೇಷಣೆ
ಗಿರೀಶ ದೊಡ್ಡಮನಿ

ಟೆಸ್ಟ್, ಏಕದಿನ, ಟಿ20, ಟಿ10 ಮತ್ತು ಹಂಡ್ರೆಡ್ ಬಾಲ್ ಕ್ರಿಕೆಟ್...

ಈ ಎಲ್ಲ ಮಾದರಿಗಳು ಬೇಕು. ಎಲ್ಲವೂ ಜನಪ್ರಿಯವಾಗಬೇಕು. ಕ್ರಿಕೆಟ್ ಸಂಸ್ಥೆಗಳಿಗೆ ಹಣದ ಹೊಳೆ ಹರಿದುಬರಬೇಕು. ಪ್ರಾಯೋಜಕರಿಗೆ ತಮ್ಮ ಮಾರುಕಟ್ಟೆ ವಿಸ್ತರಣೆಯಾಗಬೇಕು ಹಾಗೂ ಪ್ರಸಾರಕರ ಬೊಕ್ಕಸ ತುಂಬಬೇಕು. ಆದರೆ ಈ 'ಅತಿಯಾಸೆ'ಯೇ ಸಭ್ಯರ ಆಟಕ್ಕೆ ಮುಳುವಾಗುತ್ತಿದೆಯೇ?

ಕೆಲವೇ ವರ್ಷ ಹಿಂದಿನವರೆಗೂ ಕ್ರಿಕೆಟ್ ಜನಪ್ರಿಯತೆ ಮತ್ತು ಶ್ರೀಮಂತಿಕೆಯು ಉತ್ತುಂಗಕ್ಕೇರಲು ಕಾರಣವಾದ ಏಕದಿನ (ಫಿಫ್ಟಿ-50) ಮಾದರಿ ಇತ್ತೀಚಿನ ದಿನಗಳಲ್ಲಿ ಅಸ್ತಿತ್ವಕ್ಕೆ ಪರದಾಡುವಂತಾಗಿದೆ. ಮೂರು ಮಾದರಿಗಳಿಂದಾಗಿ ಅಂತರರಾಷ್ಟ್ರೀಯ ಕ್ರಿಕೆಟ್ ವೇಳಾಪಟ್ಟಿ ಕಿಕ್ಕಿರಿದು ತುಂಬಿದೆ. ಈ ನಡುವೆ ತಮಗೆ ಮನರಂಜನೆ ನೀಡುವಂತಹದ್ದನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವುದನ್ನು ಪ್ರೇಕ್ಷಕರು ಕಲಿತುಕೊಂಡಿದ್ದಾರೆ. ಅದಕ್ಕಾಗಿಯೇ ಮೂರು ತಾಸಿನಲ್ಲಿ ಮುಗಿದುಹೋಗುವ ಹಾಗೂ ಭರಪೂರ ಮನರಂಜನೆ ನೀಡುವ ಟಿ20 ಕ್ರಿಕೆಟ್ ಎಂದರೆ ಯುವಸಮೂಹಕ್ಕೆ ಅಚ್ಚುಮೆಚ್ಚು. ಚುಟುಕು ಅಬ್ಬರದಲ್ಲಿ ಟೆಸ್ಟ್ ಉಳಿಸಲು ವಿಶ್ವ ಚಾಂಪಿಯನ್‌ಷಿಪ್ ಆರಂಭಿಸಿದ್ದು ಸಿಹಿಫಲ ದೊರೆತಿದೆ. ದೀರ್ಘ ಮಾದರಿಯಲ್ಲಿಯೂ ಫಲಿತಾಂಶಗಳು ಹೊರಹೊಮ್ಮುತ್ತಿರುವುದರಿಂದಾಗಿ ಹೊಸದೊಂದು ಪ್ರೇಕ್ಷಕರ ವರ್ಗ ಸೃಷ್ಟಿಯಾಗುತ್ತಿದೆ. ಆದರೆ ಇವೆರಡರ ನಡುವೆ ಏಕದಿನ ಕ್ರಿಕೆಟ್ ಜನಪ್ರಿಯತೆ ಸೊರಗುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ.

ಏಕದಿನ ಕ್ರಿಕೆಟ್ ಅಸ್ತಿತ್ವಕ್ಕೆ ಅಪಾಯ ಎದುರಾಗುತ್ತಿರುವುದರ ಬಗ್ಗೆ ಹೋದ ತಿಂಗಳಷ್ಟೇ, ಭಾರತದ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಎಚ್ಚರಿಕೆಯ ಮಾತುಗಳನ್ನಾಡಿದ್ದರು. ಅಲ್ಲಿಂದ ಇಲ್ಲಿಯವರೆಗೆ ಹಲವು ದಿಗ್ಗಜರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಮಾದರಿಯಲ್ಲಿ ಸುಧಾರಣೆ ತಂದು ಆಕರ್ಷಕಗೊಳಿಸಬೇಕು. ಫ್ರ್ಯಾಂಚೈಸಿ ಲೀಗ್ ಟೂರ್ನಿಗಳ ಹೆಚ್ಚಳದಿಂದ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳ ಸಂಖ್ಯೆಯೇ ಕಡಿಮೆಯಾಗಿ ದೀರ್ಘ ಮಾದರಿ ನೇಪಥ್ಯಕ್ಕೆ ಸರಿಯುವ ಆತಂಕವಿದೆ. ಯುರೋಪಿನ ರಾಷ್ಟ್ರಗಳು ದ್ವಿಪಕ್ಷೀಯ ಫುಟ್‌ಬಾಲ್ ಟೂರ್ನಿಗಳಲ್ಲಿ ಆಡುತ್ತಿಲ್ಲ. ಅಲ್ಲಿ ಫುಟ್‌ಬಾಲ್ ಲೀಗ್‌ಗಳು ಹೆಚ್ಚಿರುವುದೇ ಇದಕ್ಕೆ ಕಾರಣ. ವಿಶ್ವಕಪ್ ಟೂರ್ನಿಗಳಲ್ಲಿ ಮಾತ್ರ ಮುಖಾಮುಖಿಯಾಗುತ್ತಾರೆ. ಅಂತಹ ಗತಿ ಕ್ರಿಕೆಟಿಗೂ ಬರಬಹುದು ಎಂದು 1983ರ ವಿಶ್ವಕಪ್ ವಿಜೇತ ಭಾರತ ತಂಡದ ನಾಯಕ ಕಪಿಲ್ ದೇವ್ ಅವರು ಇಂಗ್ಲಿಷ್ ದೈನಿಕವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಇದನ್ನು ಅಲ್ಲಗಳೆಯುವಂತಿಲ್ಲ; ಮೂರು ದಿನಗಳ ಹಿಂದೆ ಐಸಿಸಿ ಬಿಡುಗಡೆ ಮಾಡಿರುವ 2023–27ರ ಅವಧಿಯ ಮುಂಬರುವ ಪ್ರವಾಸ ವೇಳಾಪಟ್ಟಿಯನ್ನು (ಎಫ್‌ಟಿಪಿ) ಒಂದು ಬಾರಿ ನೋಡಿದರೆ, ಏಕದಿನ ಪಂದ್ಯಗಳ ಆಯೋಜನೆಯನ್ನು ಹಂತಹಂತವಾಗಿ ಕಡಿಮೆ ಮಾಡುತ್ತ ಹೋಗುವಂತೆ ಭಾಸವಾಗುತ್ತದೆ. ಈ ಅವಧಿಯಲ್ಲಿ ಐಸಿಸಿ ಪೂರ್ಣಸದಸ್ಯತ್ವ ಹೊಂದಿರುವ 12 ರಾಷ್ಟ್ರಗಳು ಒಟ್ಟು 777 ಪಂದ್ಯಗಳನ್ನು ಆಡಲಿವೆ. ಅದರಲ್ಲಿ 323 ಟಿ20 ಹಾಗೂ 281 ಏಕದಿನ ಪಂದ್ಯಗಳು ಇವೆ. ಅದರಲ್ಲೂ ಇಂಗ್ಲೆಂಡ್, ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್ ತಂಡಗಳು ಏಕದಿನಕ್ಕಿಂತ ಹೆಚ್ಚು ಚುಟುಕು ಪಂದ್ಯಗಳಲ್ಲಿ ಆಡಲಿವೆ. ಭಾರತ ತಂಡವು 42 ಏಕದಿನ ಹಾಗೂ 61 ಟಿ20 ಪಂದ್ಯಗಳಲ್ಲಿ ಆಡುವುದು. ಇದು ಅಂತರರಾಷ್ಟ್ರೀಯ ಕ್ರಿಕೆಟ್‌ನ ಅಂಕಿ ಸಂಖ್ಯೆಯಷ್ಟೇ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಸೇರಿದಂತೆ ಬೇರೆ ಬೇರೆ ದೇಶಗಳಲ್ಲಿ ನಡೆಯುವ ಫ್ರ್ಯಾಂಚೈಸಿ ಲೀಗ್ ಟೂರ್ನಿಗಳ ಪಂದ್ಯಗಳನ್ನು ಲೆಕ್ಕ ಹಾಕಿದರೆ, ಚುಟುಕು ಮಾದರಿ ಪರ್ವತಸದೃಶವಾಗುತ್ತದೆ. ಇದೀಗ ದಕ್ಷಿಣ ಆಫ್ರಿಕಾ ಪ್ರೀಮಿಯರ್ ಲೀಗ್‌ನ ಎಲ್ಲ ಆರು ತಂಡಗಳನ್ನೂ ಭಾರತದ ಐಪಿಎಲ್ ಫ್ರ್ಯಾಂಚೈಸಿಗಳೇ ತೆಗೆದುಕೊಂಡಿವೆ. ಅದರಿಂದಾಗಿ ಭಾರತದ ಆಟಗಾರರಿಗೆ ವಿದೇಶಿ ಲೀಗ್‌ಗಳಲ್ಲಿ ಆಡುವ ಅನುಮತಿ ನೀಡಬೇಕು ಎಂಬ ಅಭಿಪ್ರಾಯಗಳು ಕೇಳಿಬರುತ್ತಿವೆ. ಭಾರತದ ಆಟಗಾರರಿಗೆ ಇರುವ ತಾರಾಮೌಲ್ಯ ಇದಕ್ಕೆ ಕಾರಣ.

ಆದರೆ, ಈಗಾಗಲೇ 3 ಮಾದರಿಗಳ ಪಂದ್ಯಗಳಲ್ಲಿ ಆಡುತ್ತ ವಿಪರೀತ ಒತ್ತಡ ಅನುಭವಿಸುತ್ತಿರುವ ಪ್ರಮುಖ ಆಟಗಾರರು ಪದೇ ಪದೇ ವಿಶ್ರಾಂತಿಗೆ ತೆರಳುತ್ತಿರುವುದು ಕೂಡ ಬಿಸಿಸಿಐಗೆ ತಲೆನೋವಾಗಿದೆ. ಇದು ಭಾರತಕ್ಕಷ್ಟೇ ಸೀಮಿತವಾಗಿಲ್ಲ. ಹೋದ ತಿಂಗಳು ಇಂಗ್ಲೆಂಡ್ ತಂಡದ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಏಕದಿನ ಮಾದರಿಗೆ ವಿದಾಯ ಹೇಳಿದ್ದಾರೆ. 2019ರಲ್ಲಿ ಇಂಗ್ಲೆಂಡ್ ವಿಶ್ವಕಪ್ ವಿಜಯ ಸಾಧಿಸಲು ಅವರ ಆಟವೇ ಪ್ರಮುಖವಾಗಿತ್ತು. ತಾವು ಟೆಸ್ಟ್ ಹಾಗೂ ಟಿ20 ಮಾದರಿಗೆ ಆದ್ಯತೆ ನೀಡುವುದಾಗಿ ತಿಳಿಸಿದ್ದಾರೆ. ಅತ್ತ ನ್ಯೂಜಿಲೆಂಡ್ ಬೌಲರ್ ಟ್ರೆಂಟ್ ಬೌಲ್ಟ್ ಏಕದಿನ ಮಾದರಿಯ ಕೇಂದ್ರೀಯ ಗುತ್ತಿಗೆಯಿಂದ ಹೊರಗುಳಿದಿದ್ದಾರೆ. ಈ ಪರಿಪಾಟ ಬೇರೆ ದೇಶಗಳ ತಂಡಗಳಿಗೂ ಹಬ್ಬಬಹುದು. ಹೆಚ್ಚು ಹಣ, ಖ್ಯಾತಿ ಸಿಗುವ ಟಿ20 ಮಾದರಿಯನ್ನು ಆಯ್ಕೆ ಮಾಡಿಕೊಳ್ಳುವುದರಲ್ಲಿ ತಪ್ಪೇನಿದೆ ಎಂಬ ವಾದವೂ ಇದೆ.

ಪಾಕಿಸ್ತಾನ ಕ್ರಿಕೆಟ್ ದಿಗ್ಗಜ ವಾಸೀಂ ಅಕ್ರಂ ಹೇಳುವಂತೆ 'ಏಕದಿನ ಮಾದರಿಯಲ್ಲಿ ಆಕರ್ಷಣೆ ಉಳಿದುಕೊಂಡಿಲ್ಲ'. ಈ ಮಾದರಿಯನ್ನು ಶಾಶ್ವತವಾಗಿ ಸ್ಥಗಿತ ಮಾಡಬೇಕು ಎಂದೂ ಅವರು ಸಲಹೆ ಕೊಡುತ್ತಾರೆ.

ಅರ್ಧ ಶತಮಾನದಷ್ಟು ಹಳೆಯ ಮಾದರಿಯಾಗಿರುವ ಏಕದಿನ ಕ್ರಿಕೆಟ್‌ಗೂ ಇಂತಹದೊಂದು ದಿನ ಬರಲಿದೆ ಎಂದು ಬಹುಶಃ ಯಾರೂ ಅಂದುಕೊಂಡಿರಲಿಲ್ಲ. ಟಿ20 ಮಾದರಿ ಆರಂಭವಾದಾಗ ಏಕದಿನದಲ್ಲಿಯೂ ಗಮನಾರ್ಹ ಸುಧಾರಣೆಗಳನ್ನು ತರುವತ್ತ ಐಸಿಸಿ ಗಂಭೀರವಾಗಿ ಯೋಚನೆ ಮಾಡದಿರುವ ಫಲ ಇದು.

ನಾಲ್ಕು ವರ್ಷಕ್ಕೊಂದು ವಿಶ್ವಕಪ್ ಹಾಗೂ ಚಾಂಪಿಯನ್ಸ್ ಟ್ರೋಫಿ ಟೂರ್ನಿಗಳು ನಡೆಯುವ ಹೊತ್ತಿನಲ್ಲಿ ಮಾತ್ರ ವಾತಾವರಣ ಬಿಸಿಯಾಗಿರುತ್ತದೆ. ಉಳಿದಂತೆ ಟಿ20ಯದ್ದೇ ಗೌಜು ಗದ್ದಲ. ಅದಕ್ಕೆ ಕಾರಣ ಸುಸ್ಪಷ್ಟ. ಈ ಮಾದರಿಗೆ ಟೆಲಿವಿಷನ್ ವೀಕ್ಷಕರ ಸಂಖ್ಯೆ ಹೆಚ್ಚು. 'ಮುಸ್ಸಂಜೆ ಮೋಜುಗಾರಿಕೆ'ಗೆ ಹೇಳಿ ಮಾಡಿಸಿದ ಕ್ರಿಕೆಟ್ ಇದು. ಮೂರು ಗಂಟೆ ಸಿನಿಮಾದಂತೆ ಮುಗಿದುಹೋಗುತ್ತದೆ. ಸಿಕ್ಸರ್, ಬೌಂಡರಿಗಳು ಯಥೇಚ್ಛವಾಗಿ ಸಿಡಿಯುವ ಪಂದ್ಯಗಳನ್ನು ಕುಟುಂಬ, ಸ್ನೇಹಿತರೊಂದಿಗೆ ನೋಡಿ ಆನಂದಿಸಬಹುದು. ಆದ್ದರಿಂದಲೇ ಪ್ರಾಯೋಜಕರಿಗೂ ಅಚ್ಚುಮೆಚ್ಚು. ಬೆಟ್ಟಿಂಗ್ ಲೋಕಕ್ಕಂತೂ ಚಿನ್ನದ ಮೊಟ್ಟೆಯಿಡುವ ಕೋಳಿಯೇ ಸೈ. ಬಿಸಿಸಿಐಗೆ ಮುಂಬರಲಿರುವ ಐಪಿಎಲ್ ಪ್ರಸಾರ ಹಕ್ಕುಗಳಿಂದ ₹ 48 ಸಾವಿರ ಕೋಟಿ ಬರಲಿರುವುದು ಸಣ್ಣ ಮಾತೇನಲ್ಲ.

ಆದರೆ, ಏಕದಿನ ಮಾದರಿಯಲ್ಲಿ ಆಮೂಲಾಗ್ರ ಬದಲಾವಣೆ ಅಗತ್ಯವಿದೆ. ನಾಲ್ಕು ಇನಿಂಗ್ಸ್‌ನಲ್ಲಿ (ತಲಾ 25 ಓವರ್) ಪಂದ್ಯವನ್ನು ವಿಭಜಿಸಬೇಕು. ಇದರಿಂದಾಗಿ ಸ್ಪರ್ಧಾತ್ಮಕತೆ ಹೆಚ್ಚುತ್ತದೆ ಎಂದು ಏಳು ವರ್ಷಗಳ ಹಿಂದೆಯೇ ದಿಗ್ಗಜ ಸಚಿನ್ ತೆಂಡೂಲ್ಕರ್ ಹೇಳಿದ್ದರು. ಬ್ಯಾಟರ್‌ಗಳಿಗೆ ಒಂದೇ ಪಂದ್ಯದಲ್ಲಿ ಎರಡು ಅವಕಾಶ ಸಿಕ್ಕಂತಾಗುತ್ತದೆ. ಆದರೆ, ಆಗ ಅವರ ಹೇಳಿಕೆಯನ್ನು ವಿರೋಧಿಸಿದವರೇ ಹೆಚ್ಚು. ಏಕದಿನ ಮಾದರಿಯ ಔಚಿತ್ಯವೇ ನಗಣ್ಯವಾಗುತ್ತದೆ ಎಂದಿದ್ದರು. ಆದರೆ, ಈಗ ಸಚಿನ್ ಮಾತುಗಳನ್ನು ಮರುವಿಮರ್ಶೆ ಮಾಡುವ ಅಗತ್ಯವಿದೆ.

'ಏಳು ತಾಸು ಕುಳಿತು ಏಕದಿನ ಪಂದ್ಯ ವೀಕ್ಷಿಸುವಷ್ಟು ವ್ಯವಧಾನ ಯಾರಿಗಿದೆ? ಈ ಮಾದರಿಯ ಆರಂಭದಲ್ಲಿ 60 ಓವರ್‌ಗಳ ಇನಿಂಗ್ಸ್ ಇತ್ತು. ಜನರ ಆಸಕ್ತಿ ಹೆಚ್ಚಿಸಲು 50 ಓವರ್‌ಗಳಿಗೆ ಇಳಿಸಲಾಗಿತ್ತು. ಈಗಲೂ ಅದೇ ಕಾರ್ಯ ಮಾಡಬಹುದು. 40 ಓವರ್‌ಗಳಿಗೆ ಇಳಿಸಿ ನೋಡಬಹುದು. ಸ್ಪರ್ಧೆ ಹೆಚ್ಚುವುದರಿಂದ ಜನರೂ ಬರಬಹುದು' ಎಂಬ ಆಲ್‌ರೌಂಡರ್ ರವೀಂದ್ರ ಜಡೇಜ ಸಲಹೆಯನ್ನೂ ನಿರ್ಲಕ್ಷಿಸುವಂತಿಲ್ಲ. ಅಂದಹಾಗೆ ಮುಂದಿನ ವರ್ಷದ ಏಕದಿನ ವಿಶ್ವಕಪ್ ಟೂರ್ನಿಗೆ ಭಾರತವೇ ಆತಿಥ್ಯ ವಹಿಸಲಿದೆ. ಅದಕ್ಕೂ ಮುನ್ನ 27 ಏಕದಿನ ಪಂದ್ಯಗಳಲ್ಲಿ ತಂಡವು ಆಡಲಿದೆ.

ಆದರೆ, ಫ್ರ್ಯಾಂಚೈಸಿ ಲೀಗ್‌ಗಳು ಮತ್ತು ಹೊಸ ಮಾದರಿಗಳನ್ನು ಹುಟ್ಟುಹಾಕುವ ಭರಾಟೆಗೆ ಮೊದಲು ಕಡಿವಾಣ ಹಾಕುವತ್ತ ಐಸಿಸಿ ಮನಸ್ಸು ಮಾಡಬೇಕು. ಬದಲಾವಣೆ ಜಗದ ನಿಯಮ. ಅದಕ್ಕೆ ಒಗ್ಗಿಕೊಳ್ಳಬೇಕು. ಆಟಗಾರರು ಹಾಗೂ ಆಟದ ಹಿತಾಸಕ್ತಿಗಾಗಿ ಏಕದಿನ ಮತ್ತು ಟಿ20 ವಿಲೀನಕ್ಕೂ ಹಿಂಜರಿಯಬಾರದು. ತಮ್ಮ ಅಮೂಲ್ಯ ಸಮಯ ಹಾಗೂ ಹಣವನ್ನು ವಿನಿಯೋಗಿಸುವ ಕ್ರೀಡಾಪ್ರಿಯರಿಗೂ ಅಪ್ಪಟ ಕ್ರಿಕೆಟ್ ಮನರಂಜನೆ ನೀಡುವತ್ತಲೂ ಆದ್ಯತೆ ಸಿಕ್ಕರೆ ಆಟಕ್ಕೆ ಉಳಿಗಾಲವಿದೆ.



ಚುರುಮುರಿ



ವೈರಲ್ ಫೀವರ್!

• ಸಿ.ಎನ್.ರಾಜು

ಮೊನ್ನೆ ತುಟಿ ಮೀರಿ ಆಡಿದ ಮಾತುಗಳು ಸಾಮಾಜಿಕ ಜಾಲತಾಣದಲ್ಲಿ 'ವೈರಲ್' ಆದ ಪರಿಣಾಮ ಜನನಾಯಕರು 'ವೈರಲ್' ಫೀವರ್‌ನಿಂದ ಬಳಲುತ್ತಿದ್ದರು. ಆಗಿನಿಂದ ನಾಯಕರು ಟಿ.ವಿ. ಚಾನೆಲ್‌ಗಳಿಗೆ ಮುಖ ತೋರಿಸಿಲ್ಲ, ಪತ್ರಿಕೆಗಳ ಪುಟ ತೆರೆದಿಲ್ಲ.

ನಾಯಕರ ಈ ಸಂಕಷ್ಟ ಸ್ಥಿತಿಯಲ್ಲಿ ಬಂಧುಬಳಗ, ಹಿತೈಷಿಗಳು ಸಾಂತ್ವನ, ಹಿತವಚನ ಹೇಳಲು ಬಂದರು.

'ಕ್ರೈಮು, ಕ್ರಾಂತಿ, ಕಿಡಿಗೇಡಿ ಕೃತ್ಯಗಳು ಹೆಚ್ಚಾಗಿ ಸಾಮಾಜಿಕ ವಾತಾವರಣ ಕಲುಷಿತಗೊಂಡಿದೆ. ಕಾಲು ಎಳೆಯೋರು, ಕೈ ಕೊಡೋರು ವೈರಲ್ ಫೀವರ್ ಅಂಟಿಸಿಬಿಡುತ್ತಾರೆ ಎಂಬ ಎಚ್ಚರಿಕೆ ಇರಬೇಕಲ್ವೇ?...' ಬಂಧುಗಳು ಹುಸಿಗದರಿ ಕೇಳಿದರು.

'ವೈರಲ್ ಫೀವರ್ ಅಂಟಿಸಿದ ಸೋಂಕಿತನ ಪತ್ತೆಗೆ ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟಿದ್ದೇನೆ...' ಎಂದರು ನಾಯಕರು.

'ಕಳೆದ ವಾರ ಎದುರಾಳಿ ಪಕ್ಷದ ನಾಯಕರ ಜೊತೆ ಸೇರಿಕೊಂಡು ಸ್ವಪಕ್ಷದ ನಾಯಕರನ್ನು ಗೇಲಿ ಮಾಡಿ ವೈರಲ್ ಫೀವರ್ ಅಂಟಿಸಿಕೊಂಡಿದ್ರಿ, ಅದು ವಾಸಿಯಾಗುವ ಮೊದಲೇ ಮತ್ತೊಮ್ಮೆ ವೈರಸ್ ವೈರಿಗೆ ಬಲಿಯಾಗಿದ್ದೀರಿ. ಹೀಗಾದರೆ ಮುಂದಿನ ಬದುಕು, ಭವಿಷ್ಯ ಕಷ್ಟವಾಗುತ್ತದೆ...' ಹಿರಿಯ ಹಿತೈಷಿ ಬುದ್ಧಿ ಹೇಳಿದರು.

'ವೈರಲ್ ಫೀವರ್ ನಂಟು ಕೆಡಿಸುವ ಅಂಟು ರೋಗ. ರಾಜಕಾರಣಿಗಳು, ಅಧಿಕಾರಿಗಳಂತಹ ಅಧಿಕಾರಸ್ಥರಿಗೆ ಬಹು ಬೇಗ ಅಂಟಿಬಿಡುತ್ತದೆ. ಪರಿಣಾಮಕಾರಿ ಮದ್ದು ಇಲ್ಲದ ಈ ರೋಗ ಅಂಟಿಸಿಕೊಂಡು ನರಳುವ ಬದಲು ರೋಗ ಬಾರದಂತೆ ನೋಡಿಕೊಂಡು ಆರೋಗ್ಯ ಕಾಪಾಡಿಕೊಳ್ಳುವುದು ಉತ್ತಮ' ಎಂದರು ಹಿತೈಷಿಗಳು. ನಾಯಕರು ನೊಂದು ನರಳಿದರು.

'ವೈರಲ್ ಫೀವರ್‌ನಿಂದ ಮಾನಹರಣ, ಮುಖಭಂಗ, ಶಾಂತಿಭಂಗ, ಕುರ್ಚಿ ಕಂಟಕದಂತಹ ಬಾಧೆಗಳು ಕಾಡುತ್ತವೆ. ಈ ರೋಗ ಚುನಾವಣೆಯ ಟಿಕೆಟ್ ಮೇಲೂ ದುಷ್ಪರಿಣಾಮ ಬೀರುವ ಅಪಾಯವಿದೆ. ಮೈಮೇಲೆ ಎಚ್ಚರ, ನಾಲಿಗೆ ಮೇಲೆ ಕಟ್ಟೆಚ್ಚರ ವಹಿಸದಿದ್ದರೆ ವೈರಲ್ ಫೀವರ್ ಪದೇಪದೇ ಅಂಟಿಕೊಳ್ಳುತ್ತದೆ, ಹುಷಾರ್!...' ಎಂದು ಎಚ್ಚರಿಸಿದರು.

ಸಂಗತ

2047: ರಾಜ್ಯಕ್ಕೆ ಒಂದು ಮುನ್ನೋಟ

ನಮ್ಮ ಅಧಿಕಾರಸ್ಥರು ಇಚ್ಛಾಶಕ್ತಿಯೊಂದಿಗೆ ಮುಂದುವರಿದರೆ, 2047ರ ಹೊತ್ತಿಗೆ ಕನ್ನಡನಾಡು ಅಭಿವೃದ್ಧಿ ಹೊಂದಿದ ರಾಜ್ಯವಾಗಲಿದೆ

• ಪ್ರಶಾಂತ್ ಪ್ರಕಾಶ್, ನಿಶಾ ಹೊಳ್ಳ

ದೇಶದ ಅಗ್ರಗಣ್ಯ ರಾಜ್ಯಗಳಲ್ಲಿ ಒಂದಾದ ಕರ್ನಾಟಕವು ಆರ್ಥಿಕವಾಗಿ ಸದೃಢವಾಗಿದೆ. ಸಮಾಜೋ–ಆರ್ಥಿಕ ಬೆಳವಣಿಗೆಯನ್ನು ಸಾಧಿಸುವತ್ತ ದಾಪುಗಾಲು ಇಡುತ್ತಿದೆ. ನಮ್ಮ ಸರ್ಕಾರವು ಜಾಗತಿಕ ದರ್ಜೆಯ ಅಭಿವೃದ್ಧಿ ಮಾದರಿಗಳಿಗೆ ತೆರೆದುಕೊಂಡಿದೆ. ಅದರೊಂದಿಗೆ ಸರ್ಕಾರವು ಇಚ್ಛಾಶಕ್ತಿ ಪ್ರದರ್ಶಿಸಿದರೆ 2047ರ ಹೊತ್ತಿಗೆ ಕನ್ನಡನಾಡು ಅಭಿವೃದ್ಧಿಯಲ್ಲಿ ಮುಂಚೂಣಿ ಸ್ಥಾನಕ್ಕೆ ಬರಲಿದೆ.

ರಾಜ್ಯದಲ್ಲಿ ಒಟ್ಟು ಫಲವತ್ತತೆಯ ಪ್ರಮಾಣ (ಟಿಎಫ್‌ಆರ್) 1.7ರಷ್ಟು ಇದೆ. ದೇಶದ ಸರಾಸರಿಗಿಂತ (2.0) ಹಾಗೂ ಅಪೇಕ್ಷಿತ ಮಟ್ಟಕ್ಕಿಂತ ಇದು ಕಡಿಮೆ. ಮುಂದಿನ ದಿನಗಳಲ್ಲಿ ಇದು ಮತ್ತಷ್ಟು ಕಡಿಮೆ ಆಗುವ ಸಾಧ್ಯತೆ ಇದೆ ಎಂಬುದು ತಜ್ಞರ ಅಭಿಪ್ರಾಯ. ಮುಂಬರುವ ದಿನಗಳಲ್ಲಿ ನಮ್ಮಲ್ಲಿ 60 ವರ್ಷಕ್ಕಿಂತ ಮೇಲ್ಪಟ್ಟವರ ಸಂಖ್ಯೆ ತ್ವರಿತವಾಗಿ ಏರಲಿದೆ. ಅಂದರೆ, ಇನ್ನು ಕೆಲವೇ ವರ್ಷಗಳಲ್ಲಿ ನಾವು ಮುಂದುವರಿದ ದೇಶಗಳಂತೆ ಆಗಲಿದ್ದೇವೆ. ಹೀಗಾಗಿ, ಸೂಕ್ತ ಸಾಮಾಜಿಕ ಭದ್ರತೆಯ ಒಂದು ವ್ಯವಸ್ಥೆ ಅತ್ಯಗತ್ಯವಾಗಲಿದೆ.

ಆರ್ಥಿಕ ಬೆಳವಣಿಗೆಯತ್ತ ಗಮನಹರಿಸಿದರೆ, ರಾಜ್ಯದ ಜಿಡಿಪಿ ಪ್ರಮಾಣವು 2047ರ ಹೊತ್ತಿಗೆ 2.12 ಟ್ರಿಲಿಯನ್ ಡಾಲರ್ (₹ 333 ಲಕ್ಷ ಕೋಟಿ) ಮುಟ್ಟಲಿದೆ. ನಮ್ಮ ರೂಪಾಯಿಯ ಮೌಲ್ಯವು ಡಾಲರಿನ ಎದುರು ಶೇ 3ರಷ್ಟು ಕುಸಿತ ಕಾಣಲಿದೆ ಎಂಬ ಅಂದಾಜಿನಲ್ಲಿ ಮಾಡಿರುವ ಲೆಕ್ಕಾಚಾರವಿದು. ಇದೇನೇ ಇರಲಿ, ಈ ಬೆಳವಣಿಗೆಯನ್ನು ಸಾಧಿಸಬೇಕೆಂದರೆ, ನಿರಂತರ ಹೂಡಿಕೆ ಮತ್ತು ಸಮರ್ಪಕ ನೀತಿಗಳೊಂದಿಗೆ ಸಾಗಬೇಕಾಗಿದೆ.

ಸ್ಫೋಟಕ ಎನ್ನಬಹುದಾದ ಆರ್ಥಿಕ ಬೆಳವಣಿಗೆ ಮತ್ತು ಜನಸಂಖ್ಯಾ ಸಮತೋಲನ ಎರಡನ್ನೂ ಸಾಧಿಸುವುದು ಸಾಧ್ಯವಾದರೆ, ರಾಜ್ಯದ ತಲಾವಾರು ಆದಾಯವು 2047ರ ವೇಳೆಗೆ ಎಂಟು ಪಟ್ಟು ವೇಗದಲ್ಲಿ ಬೆಳೆಯಬಹುದು. ಇದು, ಅಸಾಧ್ಯವಾದ ಗುರಿಯೇನಲ್ಲ. ಏಕೆಂದರೆ, ಉದ್ಯೋಗಾವಕಾಶಗಳ ವೃದ್ಧಿ ಮತ್ತು ಸಾಮರ್ಥ್ಯ ವಿಸ್ತರಣೆಯ ಮೂಲಕ ಸೇವಾ ವಲಯವು ಈಗಾಗಲೇ ನಮ್ಮ ಆರ್ಥಿಕತೆಯಲ್ಲಿ ಶೇ 66.3ರಷ್ಟು ಪಾಲನ್ನು ಹೊಂದಿದೆ. 2047ರ ಹೊತ್ತಿಗೆ ನಮ್ಮ ಆರ್ಥಿಕತೆಗೆ ಈ ವಲಯದ ಕೊಡುಗೆಯು ಶೇ 75ರಷ್ಟು ಆಗುವ ಸಂಭವವಿದೆ. ಇದಲ್ಲದೆ, ಶೇ 8ರಿಂದ 10ರಷ್ಟು ಕೃಷಿ ಕ್ಷೇತ್ರದಿಂದಲೂ ಶೇ 15ರಿಂದ 17ರಷ್ಟು ಪಾಲು ಕೈಗಾರಿಕಾ ವಲಯದಿಂದಲೂ ಬರಬಹುದು.

ದೇಶದ ಮಹಾನಗರಗಳ ಪೈಕಿ ಬೆಂಗಳೂರು, ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ತೆರಿಗೆಯನ್ನು ಸಲ್ಲಿಸುತ್ತಿದೆ. ಈಗ ನಮ್ಮಲ್ಲಿರುವ ಕಾರ್ಯ ಪರಿಸರವನ್ನು (ಇಕೊ ಸಿಸ್ಟಂ) ಹೀಗೇ ಮುಂದುವರಿಸಿಕೊಂಡು ಹೋದರೆ, ಬೆಂಗಳೂರು 'ಜಾಗತಿಕ ನಾವೀನ್ಯತೆಯ ತೊಟ್ಟಿಲು' ಎನಿಸಿಕೊಳ್ಳಲಿದೆ. ರಾಜ್ಯವು ಈಗ ಬಹಳ ತುರ್ತಾಗಿ ಒಂದು ಕೆಲಸವನ್ನು ಸಮರೋಪಾದಿಯಲ್ಲಿ ಕೈಗೆತ್ತಿಕೊಳ್ಳಬೇಕಾಗಿದೆ. ಅದೇನೆಂದರೆ, ರಾಜ್ಯದ 10 ಹೊಸ ನಗರ ಪ್ರದೇಶಗಳನ್ನು ಆರ್ಥಿಕ ಚಟುವಟಿಕೆಗಳ ಆಡುಂಬೊಲಗಳನ್ನಾಗಿ ಪರಿವರ್ತಿಸಬೇಕಾಗಿದೆ. ಆಗ ಈ ನಗರಗಳು ಅಭಿವೃದ್ಧಿಯ ದೃಷ್ಟಿಯಿಂದ ಮಹತ್ವದ ತಾಣಗಳಾಗಿ, ರಾಜ್ಯದ ಆರ್ಥಿಕ ಕಾರಿಡಾರ್‌ಗಳ ಯಶಸ್ಸಿಗೆ ಮತ್ತಷ್ಟು ಇಂಬು ಕೊಡಲಿವೆ.

ಇದಕ್ಕೆ ಪೂರಕವಾಗಿ ಉತ್ಪಾದನಾ ಕೇಂದ್ರಗಳ ಬೆಸೆಯುವಿಕೆ, ರಫ್ತು ವಹಿವಾಟಿಗೆ ಅಗತ್ಯವಾದ ಅನುಕೂಲಗಳು ಬಹಳ ಮುಖ್ಯ. ಇವುಗಳಲ್ಲಿ ನಾವು ಸೈ ಎನಿಸಿಕೊಂಡರೆ, ಸಹಜವಾಗಿಯೇ ವಾಣಿಜ್ಯ ವಹಿವಾಟು ಮತ್ತು ಹೂಡಿಕೆಗಳು ಬೆಳೆಯುತ್ತ ಹೋಗಲಿವೆ. ಸುಗಮ ಮಾರುಕಟ್ಟೆ ವ್ಯವಸ್ಥೆಯು ಒಟ್ಟಾರೆಯಾಗಿ ಉತ್ಪಾದನೆಯನ್ನು ಹೆಚ್ಚಿಸಲಿದ್ದು, ಆಯಾ ಪ್ರದೇಶಗಳಲ್ಲಿ ಸ್ಪರ್ಧಾತ್ಮಕತೆಯನ್ನೂ ವೃದ್ಧಿಸಲಿದೆ. ಜೊತೆಗೆ ನಾವು ಸುಸ್ಥಿರತೆಯನ್ನು ಮರೆಯುವಂತಿಲ್ಲ. ಪರಿಸರ ಮತ್ತು ನೀರಿಗೆ ಸಂಬಂಧಿಸಿದ ವಿಚಾರಗಳಲ್ಲಿ ಕಟ್ಟುನಿಟ್ಟಾದ ಕೆಲವು ವೈಜ್ಞಾನಿಕ ಮಾನದಂಡಗಳನ್ನು ಅಳವಡಿಸಿಕೊಳ್ಳುವುದು ಬಹಳ ಅಪೇಕ್ಷಣೀಯ.

ನೀತಿ ಆಯೋಗದ ನಾವೀನ್ಯತಾ ಸೂಚ್ಯಂಕದಲ್ಲಿ ಮಾತ್ರವಲ್ಲದೆ ಹಲವು ವಲಯಗಳಲ್ಲಿ ಕರ್ನಾಟಕವು ಅಗ್ರಸ್ಥಾನದಲ್ಲಿದೆ. ಇದನ್ನು ಕಾಯ್ದುಕೊಳ್ಳಲು ಅಗತ್ಯವಿರುವ ಪ್ರತಿಯೊಂದು ಉಪಕ್ರಮವನ್ನೂ ಕ್ಷಿಪ್ರಗತಿಯಲ್ಲಿ ಕೈಗೊಳ್ಳಬೇಕು. ಪ್ರವರ್ಧಮಾನಕ್ಕೆ ಬರುತ್ತಿರುವ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಸಂಶೋಧನೆಗಳತ್ತ ಗಮನಹರಿಸಬೇಕು. ಅತ್ಯಂತ ನಿರ್ಣಾಯಕವಾದ ಶಿಕ್ಷಣ ಮತ್ತು ಪರಿಣತಿಗೆ ಹೆಚ್ಚಿನ ಆದ್ಯತೆ ನೀಡಬೇಕು.



ವೃದ್ಧರನ್ನು ಜತನದಿಂದ ಕಾಪಾಡಬಲ್ಲಂತಹ ಒಂದು ಸೂತ್ರವನ್ನು ಸರ್ಕಾರ ಮತ್ತು ಸಮಾಜ ಕೈಗೂಡಿಸಿ ಆವಿಷ್ಕರಿಸಬೇಕು. ಇಲ್ಲದೇ ಹೋದರೆ, ಕುಸಿಯುತ್ತಿರುವ ಒಟ್ಟು ಫಲವತ್ತತೆಯ ಪ್ರಮಾಣ, ಏರುತ್ತಿರುವ ವಿಭಕ್ತ ಕುಟುಂಬಗಳ ಸಂಖ್ಯೆ, ಯುವಜನರ ವಲಸೆ ಇವೆಲ್ಲವೂ ನಮ್ಮ ಸಮಾಜವನ್ನು ಕಾಡಲಿವೆ.

ಪ್ರತೀ ಜಿಲ್ಲೆಯಲ್ಲೂ ಬಹೂಪಯೋಗಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯನ್ನು ನಾವು ಸ್ಥಾಪಿಸಬೇಕು. ಇದರಿಂದಾಗಿ, ಜನರಿಗೆ ಅವರ ಜಿಲ್ಲೆಗಳಲ್ಲೇ ಸುಸಜ್ಜಿತ ವೈದ್ಯಕೀಯ ಸೇವೆಗಳು ಸಿಗಲಿವೆ. ಇದಕ್ಕೆ ಪೂರಕವಾಗಿ ಪ್ರತಿಯೊಂದು ತಾಲ್ಲೂಕಿನಲ್ಲೂ ಪ್ರಾಥಮಿಕ ಆರೋಗ್ಯ ಮತ್ತು ಆರೈಕೆ ಕೇಂದ್ರ ಕೂಡ ಅಸ್ತಿತ್ವಕ್ಕೆ ಬರಬೇಕು.

2047ರ ಈ ಮುನ್ನೋಟವನ್ನು ಕರ್ನಾಟಕವು ಖಂಡಿತವಾಗಿಯೂ ಸಾಧಿಸಬಹುದು. ಇದಕ್ಕೆ ವಿಸ್ತೃತ ಕಾರ್ಯನೀತಿಗಳು, ಸ್ಪಷ್ಟ ಗುರಿಯುಳ್ಳ ಹೂಡಿಕೆ ಮತ್ತು ಗುಣಮಟ್ಟದ ಆಡಳಿತವು ಅತ್ಯಗತ್ಯವಾದ ಮೆಟ್ಟಿಲುಗಳಾಗಿವೆ.

ಲೇಖಕರು: ಪ್ರಶಾಂತ್ ಪ್ರಕಾಶ್, ರಾಜ್ಯ ಸರ್ಕಾರದ ಸ್ಟಾರ್ಟ್‌ಅಪ್ ವಿಷನ್ ಗ್ರೂಪ್‌ನ ಅಧ್ಯಕ್ಷ, ನಿಶಾ ಹೊಳ್ಳ, ಸಿ-ಕ್ಯಾಂಪ್‌ನ ಟೆಕ್ನಾಲಜಿ ಫೆಲೊ

ವಾಚಕರ ವಾಣಿ

ಅಂಬೇಡ್ಕರ್ ಸಂಪುಟ: ಕಾಣದ ಪ್ರಸ್ತಾವನೆ

ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳನ್ನು ಒಳಗೊಂಡ ಸಂಪುಟ 3ರಲ್ಲಿ ಹಿಂದೂ ಧರ್ಮದ ಒಗಟುಗಳಿವೆ. ಆದರೆ ಅದರಲ್ಲಿ ಅಂಬೇಡ್ಕರ್ ಅವರು ಬರೆದಿರುವ 6 ಪುಟಗಳ ಪ್ರಸ್ತಾವನೆಯನ್ನು ತೆಗೆದುಹಾಕಲಾಗಿದೆ. 1995ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಪ್ರಕಟವಾದ ಸಂಪುಟ 4ರಲ್ಲಿ ಆ 6 ಪುಟಗಳ ಪ್ರಸ್ತಾವನೆ ಇದೆ. ಇತ್ತೀಚೆಗೆ ಬಿಡುಗಡೆಯಾಗಿರುವ ಸಂಪುಟದಲ್ಲಿ ಆ ಪ್ರಸ್ತಾವನೆಯನ್ನು ತೆಗೆದಿರುವುದಕ್ಕೆ ಸಂಬಂಧಪಟ್ಟವರು ಕಾರಣ ತಿಳಿಸಬೇಕು.

ಟಿ.ಸಿ.ಗಣೇಶ್, ತಾಟಪರ್ತಿ, ಶಿಡ್ಲಘಟ್ಟ

ಪ್ರಜಾಪ್ರಭುತ್ವ ವಿರೋಧಿ ಹೇಳಿಕೆ

ಬಿಜೆಪಿಯ ಕೇಂದ್ರ ಸಂಸದೀಯ ಮಂಡಳಿ ಹಾಗೂ ಕೇಂದ್ರ ಚುನಾವಣಾ ಸಮಿತಿಯ ಸದಸ್ಯರಾಗಿ ಇತ್ತೀಚೆಗೆ ನೇಮಕಗೊಂಡ ಸಂದರ್ಭದಲ್ಲಿ ಮಾತನಾಡಿದ ಬಿ.ಎಸ್.ಯಡಿಯೂರಪ್ಪ, 'ರಾಜ್ಯದಲ್ಲಿ ಬೇರೆ ಪಕ್ಷ ಅಧಿಕಾರಕ್ಕೆ ಬರಲು ಬಿಡುವುದಿಲ್ಲ' ಎಂದು ಹೇಳಿರುವುದು ಒಪ್ಪತಕ್ಕ ಮಾತಲ್ಲ. ಇದೊಂದು ಪ್ರಜಾಪ್ರಭುತ್ವ ವಿರೋಧಿ ಹೇಳಿಕೆ ಸಹ ಆಗಿದ್ದು, ಜನರ ಆಯ್ಕೆಯ ಹಕ್ಕಿಗೆ ಚ್ಯುತಿ ತರುವ ಕೆಲಸವಾಗಿದೆ.

ರಾಜ್ಯದ ಜನ ತಮಗೆ ಇಷ್ಟವಾದ ಪಕ್ಷಕ್ಕೆ ಅಧಿಕಾರ ನೀಡಲು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅವಕಾಶವಿದೆ. ಬೇರೆ ಪಕ್ಷಗಳು ಅಧಿಕಾರಕ್ಕೆ ಬರುವುದನ್ನು ತಡೆಯುವ ಹಕ್ಕು ಮತದಾರರಿಗೆ ಮಾತ್ರವಲ್ಲದೆ ಬೇರೆಯವರಿಗೆ ಇಲ್ಲ. ಅವರು ತಮ್ಮ ಪಕ್ಷದ ಪರವಾಗಿ ಪ್ರಚಾರ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತರಲಿ, ಅದು ಬೇರೆ ಮಾತು. ಆದರೆ ಬೇರೆ ಪಕ್ಷಗಳು ಅಧಿಕಾರಕ್ಕೆ ಬರುವುದು ಬೇಡ ಎನ್ನುವುದು ಉದ್ಧಟತನದ ಮಾತು.

ಕೆ.ವಿ.ವಾಸು, ಮೈಸೂರು

ನಗದು ಬಳಕೆಯತ್ತ ವಾಲಬಹುದು

ಜನಪ್ರಿಯವಾಗಿರುವ ಯುಪಿಐ ಪಾವತಿ ವ್ಯವಸ್ಥೆ, ನೆಫ್ಟ್, ಆರ್‌ಟಿಜಿಎಸ್, ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ ಮೂಲಕ ನಡೆಸುವ ಪಾವತಿಗಳಿಗೆ ನಿರ್ದಿಷ್ಟ ಶುಲ್ಕ ವಿಧಿಸಬಹುದೇ ಎಂದು ಕೇಳಿರುವ ಆರ್‌ಬಿಐ ಕ್ರಮ ಖಂಡನೀಯ. ಜನಸಾಮಾನ್ಯರು ಮಾಡುವ ಈ ಪಾವತಿಗಳಿಗೆ ಶುಲ್ಕ ವಿಧಿಸುವಿಕೆ ಶುರುವಾದರೆ, ದೇಶದಲ್ಲಿ ಡಿಜಿಟಲ್ ಪಾವತಿಯ ಜನಪ್ರಿಯತೆಗೆ ಅಡ್ಡಿ ಎದುರಾಗಬಹುದು. ಜನ ಮತ್ತೆ ನಗದು ಬಳಕೆಯತ್ತಲೇ ಹೆಚ್ಚಾಗಿ ವಾಲುವ ಸಾಧ್ಯತೆ ಇಲ್ಲದಿಲ್ಲ.

ಅಮರ ನಾಯಿಕ, ಬಿರನಾಳ, ರಾಯಬಾಗ

ಮಾನವತೆಗೆ ತೋರಿದ ಅಪಚಾರ

ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗಿದ್ದ 11 ಮಂದಿ ಅಪರಾಧಿಗಳನ್ನು ಸನ್ನಡತೆಯ ಆಧಾರದ ಮೇಲೆ ಗುಜರಾತ್ ಸರ್ಕಾರವು ಬಿಡುಗಡೆ ಮಾಡಿರುವುದು ಆ ಸರ್ಕಾರದ ನೈತಿಕತೆಯ ಬಗ್ಗೆ ಅನುಮಾನ ಹುಟ್ಟುವಂತೆ ಮಾಡಿದೆ. ಮಹಿಳಾ ಸಬಲೀಕರಣದ ಬಗ್ಗೆ ಆಗಾಗ್ಗೆ ಕನವರಿಸುವ ಕೇಂದ್ರ ಸರ್ಕಾರದ ನೀತಿಯ ಕುರಿತು ನಾಗರಿಕರು ಅನುಮಾನ ಪಡುವಂತಾಗಿದೆ. ಕೇಂದ್ರದಲ್ಲಿ ಆಳುತ್ತಿರುವವರ ಅನುಮತಿ ಇಲ್ಲದೆ ಗುಜರಾತ್ ಸರ್ಕಾರವು ಈ ಬಿಡುಗಡೆಯ ನಿರ್ಧಾರವನ್ನು ಕೈಗೊಂಡಿರುವ ಸಾಧ್ಯತೆ ಕಡಿಮೆ.

ಗುಜರಾತ್ ಸರ್ಕಾರಕ್ಕೆ ಅಪರಾಧಿಗಳ ಮೇಲೆ ಇರುವ ಅಪಾರ ಮಮಕಾರವು ಪ್ರಶ್ನಾರ್ಹವಾಗಿದೆ. ಘೋರ ಹಿಂಸೆ ಮತ್ತು ಅವಮಾನವನ್ನು ಅನುಭವಿಸಿ ಬದುಕುಳಿದಿರುವ ಬಿಲ್ಕಿಸ್ ಅವರ ಭಾವನೆಗಳಿಗೆ ಬೆಲೆಯೇ ಇಲ್ಲವೇ? ಅಪರಾಧಿಗಳನ್ನು ಬಿಡುಗಡೆ ಮಾಡಲು ಸರ್ಕಾರ ತೋರಿದ ಆತುರ ಅಮಾನವೀಯವಷ್ಟೇ ಅಲ್ಲ ಮಾನವತೆಗೆ ತೋರಿದ ಅಪಚಾರವೂ ಆಗಿದೆ. ಜೈಲಿನಿಂದ ಬಿಡುಗಡೆಯಾದ ಅಪರಾಧಿಗಳಿಗೆ ಸಿಹಿ ತಿನ್ನಿಸಿ ಸ್ವಾಗತಿಸಿ ಸನ್ಮಾನ ಮಾಡಿದ ವಿಶ್ವ ಹಿಂದೂ ಪರಿಷತ್ತಿನ ಕ್ರಿಯೆಯ ಬಗ್ಗೆ ಮಾತನಾಡದಿರುವುದೇ ಒಳಿತು.

ಮೋದೂರು ಮಹೇಶಾರಾಧ್ಯ, ಹುಣಸೂರು

ಮಾರಾಟಕ್ಕೆ ಸರ್ಕಾರಿ ಶಾಲಾ ಕಟ್ಟಡ: ಶೋಚನೀಯ

'ಬೆಂಗಳೂರಿನಲ್ಲಿ ಸರ್ಕಾರಿ ಶಾಲೆ ಮಾರಾಟಕ್ಕಿದೆ' ಎಂಬ ವರದಿ (ಪ್ರ.ವಾ., ಆ. 18) ಓದಿ ಬಹಳ ಬೇಸರವಾಯಿತು. ದಾನಿಗಳು ಶಿಕ್ಷಣದ ಸಲುವಾಗಿ ಕೊಟ್ಟಂತಹ ಜಾಗದಲ್ಲಿ ಇರುವ ಪ್ರಸ್ತುತ ಶಾಲಾ ಕಟ್ಟಡವನ್ನು ಯಾವುದೇ ಕಾರಣಕ್ಕೂ ಮಾರುವುದು ತರವಲ್ಲ. ಇದೊಂದು ಶೋಚನೀಯ ಬೆಳವಣಿಗೆ. ಇಂತಹ ಪ್ರಕರಣ ಮರುಕಳಿಸದಂತೆ ಮಾಡಿ, ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಿ.

ವೈ.ಎನ್.ನಾಗರಾಜ, ಕೆಂಗೇರಿ

ಪುಸ್ತಕ ಪ್ರಕಟಣೆ: ವಾಸ್ತವ ಪರಿಗಣಿಸಿ

'ಪುಸ್ತಕ: ಕೈ ಸುಟ್ಟೀತು!' ಎಂಬ ಸದಾಶಿವ್ ಸೊರಟೂರು ಅವರ ಲೇಖನವು (ಸಂಗತ, ಆ. 19) ಗಮನ ಸೆಳೆಯಿತು. ಪುಸ್ತಕ ವ್ಯಾಪಾರವನ್ನು ನಂಬಿ ಪ್ರಕಾಶಕರು, ಮಾರಾಟಗಾರರು, ಮುದ್ರಕರು ಹೀಗೆ ಅನೇಕರು ಜೀವನ ಸಾಗಿಸುತ್ತಿರುವುದು ವಾಸ್ತವ. ಆದರೆ ಇಲ್ಲಿ ಬರಹಗಾರರು ಹಾಗೂ ಓದುಗರು ಇವರೆಲ್ಲರ ನಡುವಿನ ಪ್ರಮುಖ ಕೊಂಡಿಯಾಗಿದ್ದಾರೆ ಅನ್ನುವುದೂ ಅಷ್ಟೇ ಸತ್ಯವಾಗಿದೆ. ಹೀಗಾಗಿ ಗ್ರಂಥಾಲಯ ಇಲಾಖೆಯು ಬರಹಗಾರನಿಗೂ ಓದುಗನಿಗೂ ಲಾಭವಾಗದೆ ಇದ್ದರೂ ಹೆಚ್ಚಿನ ಹಾನಿಯಾಗದಂತೆ ನೋಡಿಕೊಳ್ಳಬೇಕಾದ ಅವಶ್ಯಕತೆ ಮತ್ತು ಅನಿವಾರ್ಯ ಇದೆ.

ಒಬ್ಬ ಬರಹಗಾರನಿಗೆ ತಾನು ಬರೆದುದನ್ನು ಕನಿಷ್ಠಪಕ್ಷ ಕಡಿಮೆ ಖರ್ಚಿನಲ್ಲಿ ಪ್ರಕಟಿಸುವ ಅವಕಾಶ ಸಿಕ್ಕಾಗ, ಮತ್ತಷ್ಟು ಪುಸ್ತಕಗಳನ್ನು ಬರೆದು ಪ್ರಕಟಿಸುವ ಯೋಚನೆ ಬರುತ್ತದೆ. ಅದೇ ರೀತಿ, ಕಡಿಮೆ ಬೆಲೆಯಲ್ಲಿ ಕೊಂಡು ಓದುವ ಅವಕಾಶ ಓದುಗನಿಗೆ ದೊರೆತಾಗ, ಕೊಳ್ಳುವ ಮೂಲಕ ಪುಸ್ತಕಗಳ ಮಾರಾಟ ಹೆಚ್ಚುತ್ತದೆ. ಇದರಿಂದಾಗಿ ಪುಸ್ತಕ ಬರೆಯುವ, ಓದುವ ಪ್ರಕ್ರಿಯೆ ಹೆಚ್ಚಾಗಿ ಜ್ಞಾನದ ಪ್ರಸಾರವು ವಿಸ್ತರಣೆಯಾಗುತ್ತದೆ. ಇದು ನಾಡಿನ ಪ್ರಗತಿಗೆ ಕಾರಣವಾಗಬಲ್ಲದು. ಈ ದಿಸೆಯಲ್ಲಿ ಗ್ರಂಥಾಲಯ ಇಲಾಖೆ ಗಮನಹರಿಸಬೇಕಿದೆ.

ಗಣಪತಿ ಗೋ ಚಲವಾದಿ, ದೇವರ ಗೆಣ್ಣೂರ, ಬಬಲೇಶ್ವರ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಬಿಲ್ಕಿಸ್ ಬಾನು ಮತ್ತು ಇತರರ ಮೇಲೆ ಅತ್ಯಾಚಾರ ಎಸಗಿದ ಅಪರಾಧಿಗಳನ್ನು 'ಸನ್ನಡತೆ' ಆಧಾರದಲ್ಲಿ ಬಿಡುಗಡೆ ಮಾಡಿದ್ದು ಸರಿಯೇ?



ಪ್ರಜಾವಾಣಿ ಚರ್ಚೆ

ಅತ್ಯಾಚಾರಿಗಳ ಬಿಡುಗಡೆಗೆ ಅವಕಾಶವೇ ಇಲ್ಲ



• ವಿ.ಗೋಪಾಲಗೌಡ

ಮಹಿಳೆಯರ ಮೇಲಿನ ಸಾಮೂಹಿಕ ಅತ್ಯಾಚಾರದಂತಹ ಘೋರ ಅಪರಾಧ ಎಸಗಿದ ಅಪರಾಧಿಗಳಿಗೆ ರಾಜ್ಯ ಸರ್ಕಾರ ಮಾಫಿ ಮಾಡಿರುವುದು ಕಾನೂನು ಬಾಹಿರ. ಇದು ಸಿಆರ್‌ಪಿಸಿ ಕಲಂ 432ರ ಮಾಫಿ ನೀತಿಯ ಉಲ್ಲಂಘನೆ. ಅಂತೆಯೇ, ಗುಜರಾತ್ ರಾಜ್ಯ ಸರ್ಕಾರ ಕೇಂದ್ರದ ಜೊತೆ ಚರ್ಚಿಸದೆಯೇ ತೀರ್ಮಾನ ತೆಗೆದುಕೊಂಡಿರುವುದು ಸಿಆರ್‌ಪಿಸಿ ಕಲಂ 435 (2)ಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿದೆ

'ಯತ್ರ ನಾರ್ಯೇಷು ಪೂಜ್ಯಂತೇ ರಮಂತೇ ತತ್ರ ದೇವತಾಃ'- ಎಲ್ಲಿ ಮಹಿಳೆಯರನ್ನು ಗೌರವಿಸಲಾಗುತ್ತದೆಯೋ ಅಲ್ಲಿ ದೇವತೆಗಳು ವಾಸಿಸುತ್ತಾರೆ! ಆದರೆ ಇಂದಿನ ವಾಸ್ತವ ಶೋಚನೀಯವಾಗಿದೆ. ಜನರಿರಲಿ, ಸಂವಿಧಾನಬದ್ಧ ಸರ್ಕಾರಗಳೇ ಮಹಿಳೆಯರನ್ನು ಎರಡನೇ ದರ್ಜೆ ಪ್ರಜೆಗಳು ಎಂದು ಪರಿಗಣಿಸುತ್ತಿವೆ!!. ಇದಕ್ಕೊಂದು ಜ್ವಲಂತ ನಿದರ್ಶನ ಬಿಲ್ಕಿಸ್ ಬಾನು ಪ್ರಕರಣ.

2002ರ ಫೆಬ್ರುವರಿ 27ರಂದು ಸಾಬರಮತಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಒಂದೇ ಕೋಚ್‌ನಲ್ಲಿದ್ದ 59 ಕರಸೇವಕರನ್ನು ಭೀಕರವಾಗಿ ದಹಿಸಿ ಕೊಂದ ಬಳಿಕ ಗುಜರಾತ್ ರಾಜ್ಯದಾದ್ಯಂತ ಹಿಂಸಾಚಾರ ಭುಗಿಲೆದ್ದಿತು. ಆ ಸಮಯದಲ್ಲಿ ಬುಡಕಟ್ಟು ಜನರೇ ಹೆಚ್ಚಾಗಿರುವ ದಹೋಡ್ ಜಿಲ್ಲೆಯ ರಾಧಿಕಾಪುರ ಗ್ರಾಮದಲ್ಲೂ ದೊಂಬಿ ಗಲಭೆಗಳು ಉಂಟಾಗಿದ್ದವು. ಈ ವೇಳೆ ಐದು ತಿಂಗಳ ಗರ್ಭಿಣಿ ಬಿಲ್ಕಿಸ್ ಬಾನು ತನ್ನ ಮಗಳು ಸಲೇಹಾ ಜೊತೆಗೆ ಮನೆಯನ್ನು ತೊರೆದಿದ್ದರು.

ದೋಷಾರೋಪ ಪಟ್ಟಿಯ ಅನುಸಾರ ಈ ಪ್ರಕರಣವನ್ನು ಅಧ್ಯಯನ ಮಾಡಿದಾಗ, ಛಪ್ಪರ್‌ವಾಡ್ ಬಳಿಯ ಹೊಲವೊಂದರಲ್ಲಿ ಆಶ್ರಯ ಪಡೆದಿದ್ದ ಬಿಲ್ಕಿಸ್ ಬಾನು ಮತ್ತು ಆಕೆಯ ಜೊತೆಗಿದ್ದವರ ಮೇಲೆ ಮಾರ್ಚ್ 3ರಂದು ಶಸ್ತ್ರಸಜ್ಜಿತ 20ಕ್ಕೂ ಹೆಚ್ಚು ಜನರ ಉದ್ರಿಕ್ತ ಗುಂಪೊಂದು ದಾಳಿ ನಡೆಸಿತ್ತು. ಆ ವೇಳೆ ಬಿಲ್ಕಿಸ್ ಬಾನು ಹಾಗೂ ಇತರ ಮೂವರು ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಗಿತ್ತು. ಘಟನೆಯಲ್ಲಿ ಎಂಟು ಜನ ಮುಸ್ಲಿಮರ ಹತ್ಯೆಯಾಗಿತ್ತು. ಬಿಲ್ಕಿಸ್, ಒಬ್ಬ ಪುರುಷ ಹಾಗೂ ಮೂರು ವರ್ಷದ ಮಗು ಮಾತ್ರ ಬಚಾವಾಗಿದ್ದರು. ಈ ಘಟನೆಯನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಸುಪ್ರೀಂ ಕೋರ್ಟ್‌ಗೆ ಒಯ್ದಿತ್ತು. ಸುಪ್ರೀಂ ಕೋರ್ಟ್ ಸಿಬಿಐ ತನಿಖೆಗೆ ಆದೇಶಿಸಿತ್ತು. ಪ್ರಕರಣದ ಆರೋಪಿಗಳನ್ನು 2004ರಲ್ಲಿ ಬಂಧಿಸಲಾಗಿತ್ತು. ಅಹಮದಾಬಾದ್‌ನಲ್ಲಿ ವಿಚಾರಣೆ ಆರಂಭವಾಯಿತು. ಆದರೆ, ಬಿಲ್ಕಿಸ್ ಬಾನುಗೆ ಜೀವಬೆದರಿಕೆ ಕರೆಗಳು ಬರಲಾರಂಭಿಸಿದ ನಂತರ ಪ್ರಕರಣವನ್ನು ಮುಂಬೈಗೆ ವರ್ಗಾಯಿಸಲು ಸುಪ್ರೀಂ ಕೋರ್ಟ್ ನಿರ್ದೇಶಿಸಿತ್ತು.

ಆರು ಜನ ಪೊಲೀಸರು ಹಾಗೂ ಸರ್ಕಾರಿ ವೈದ್ಯರೊಬ್ಬರು ಸೇರಿದಂತೆ 19 ಜನರ ವಿರುದ್ಧ ದೋಷಾರೋಪ ಹೊರಿಸಲಾಗಿದ್ದ ಈ ಪ್ರಕರಣವನ್ನು ಮುಂಬೈ ನ್ಯಾಯಾಲಯ ವಿಚಾರಣೆ ನಡೆಸಿತು. ಸಾಕ್ಷ್ಯಾಧಾರಗಳ ಕೊರತೆಯ ಕಾರಣ ಏಳು ಜನರನ್ನು ಬಿಡುಗಡೆ ಮಾಡಲಾಗಿತ್ತು. ಒಬ್ಬ ಆರೋಪಿ ವಿಚಾರಣಾ ಅವಧಿಯಲ್ಲಿ ಮೃತಪಟ್ಟಿದ್ದ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ವಿಶೇಷ ನ್ಯಾಯಾಲಯ 2008ರ ಜನವರಿ 21ರಂದು 11 ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿತು. ನಂತರ ಈ ಶಿಕ್ಷೆಯನ್ನು ಬಾಂಬೆ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ 2017ರಲ್ಲಿ ಎತ್ತಿ ಹಿಡಿದಿತ್ತು.



ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿಗಳ ಬಿಡುಗಡೆ ಖಂಡಿಸಿ ದೆಹಲಿಯಲ್ಲಿ ಇತ್ತೀಚೆಗೆ ನಡೆದ ಪ್ರತಿಭಟನೆ

ಗರ್ಭಿಣಿಯ ಮೇಲೆ ಅತ್ಯಾಚಾರ, ಕೊಲೆ, ಕಾನೂನುಬಾಹಿರವಾಗಿ ಗುಂಪುಗೂಡಿದ ಮತ್ತು ಸಂಚು ರೂಪಿಸಿದ ಆರೋಪದ ಮೇಲೆ ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ವಿವಿಧ ಕಲಂಗಳ ಅಡಿಯಲ್ಲಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಲಾಗಿತ್ತು. ಈ ಪ್ರಕರಣ ಎಲ್ಲ ಹಂತದ ಕೋರ್ಟುಗಳ ಮಜಲನ್ನೂ ದಾಟಿ ಬಂದಿತ್ತು. ಅಪರಾಧಿಗಳು ಜೀವಾವಧಿ ಶಿಕ್ಷೆಯಡಿಯಲ್ಲಿ 15 ವರ್ಷಗಳಿಗಿಂತ ಹೆಚ್ಚು ಕಾಲ ಜೈಲಿನಲ್ಲಿರುವಂತಾಗಿತ್ತು. ನಂತರ ಇವರಲ್ಲಿ ಒಬ್ಬಾತ ತನ್ನ ಅವಧಿಪೂರ್ವ ಬಿಡುಗಡೆಗಾಗಿ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದ್ದ.

ಈ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, 'ಅಪರಾಧ ಪ್ರಕ್ರಿಯಾ ಸಂಹಿತೆ-1973ರ (ಸಿಆರ್‌ಪಿಸಿ) ಕಲಂ 432ರ ಪ್ರಕಾರ ಕೈದಿಗಳ ಮಾಫಿ ಮಾಡುವ ಹಕ್ಕು ರಾಜ್ಯ ಸರ್ಕಾರಕ್ಕೆ ಇದೆ. ಸದರಿ ಪ್ರಕರಣದ ತನಿಖೆಯನ್ನು ಸಿಬಿಐ ನಡೆಸಿದೆ. ಆದ್ದರಿಂದ, ಸಹಜವಾಗಿಯೇ ದೆಹಲಿ ಪೊಲೀಸ್ ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆ ಅನುಸಾರ ಮಾಫಿ ಮಾಡುವ ಮುನ್ನ ಕೇಂದ್ರ ಸರ್ಕಾರದ ಜೊತೆಗಿನ ಸಮಾಲೋಚನೆ ಕಡ್ಡಾಯ' ಎಂದು ಹೇಳಿತ್ತು. ಸಾಮೂಹಿಕ ಅತ್ಯಾಚಾರದಂತಹ ಪ್ರಕರಣದಲ್ಲಿ ಸಿಆರ್‌ಪಿಸಿ ಕಲಂ 435 (2) ಅಡಿ ಕೇಂದ್ರದ ಒಪ್ಪಿಗೆ ಪಡೆಯದೆ ಮುಂದಡಿ ಇಡುವಂತೆಯೇ ಇಲ್ಲ. ಹೀಗಾಗಿ, 1992ರ ರಾಜ್ಯದ ಮಾಫಿ ನೀತಿ 2014ರ ನೀತಿಗೆ ಒಳಪಟ್ಟು ಸಾಧಕ-ಬಾಧಕ ಪರಿಶೀಲಿಸಿ ಬಿಡುಗಡೆಯ ನಿರ್ಧಾರ ಕೈಗೊಳ್ಳಬೇಕಿತ್ತು.

ಆದರೆ, ಗುಜರಾತ್‌ನಲ್ಲಿದ್ದ 1992ರ ಮಾಫಿ ನೀತಿ ಹಾಗೂ 2014ರಲ್ಲಿ ತಿದ್ದುಪಡಿ ಕಾರಣ ಬದಲಾಗಿದ್ದ ಇದರ ಸ್ವರೂಪವನ್ನು ರಾಜ್ಯ ಸರ್ಕಾರ ಅಂದು ಸುಪ್ರೀಂ ಕೋರ್ಟ್ ಗಮನಕ್ಕೆ ತರಬೇಕಿತ್ತು. ಆದರೆ, ತರದೇ ಹೋದ ಪರಿಣಾಮ 1992ರ ಸಮಾಲೋಚನೆ ಅನುಸಾರ ಮಾಫಿ ನೀತಿ ಅನುಸರಿಸಿ ಈಗ ಅಪರಾಧಿಗಳನ್ನು ಸ್ವತಂತ್ರಗೊಳಿಸಿರುವುದು ಸಿಆರ್‌ಪಿಸಿ ಕಲಂ 435 (2)ಕ್ಕೆ ಸ್ವಾಭಾವಿಕವಾಗಿಯೇ ವಿರುದ್ಧವಾಗಿದೆ. ವಾಸ್ತವದಲ್ಲಿ ಸಿಆರ್‌ಪಿಸಿ ಕಲಂ 435 (2)ರ ಪ್ರಕಾರ ಮಹಿಳೆಯರ ಮೇಲಿನ ಸಾಮೂಹಿಕ ಅತ್ಯಾಚಾರದಂತಹ ಘೋರ ಅಪರಾಧ ಎಸಗಿದ ಅಪರಾಧಿಗಳಿಗೆ ರಾಜ್ಯ ಸರ್ಕಾರ ಮಾಫಿ ಮಾಡಿರುವುದು ಕಾನೂನು ಬಾಹಿರ. ಇದು ಸಿಆರ್‌ಪಿಸಿ ಕಲಂ 432ರ ಮಾಫಿ ನೀತಿಯ ಉಲ್ಲಂಘನೆ. ಅಂತೆಯೇ, ಗುಜರಾತ್ ರಾಜ್ಯ ಸರ್ಕಾರ ಕೇಂದ್ರದ ಜೊತೆ ಚರ್ಚಿಸದೆಯೇ ತೀರ್ಮಾನ ತೆಗೆದುಕೊಂಡಿರುವುದು ಸಿಆರ್‌ಪಿಸಿ ಕಲಂ 435 (2)ಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿದೆ.

ಹೆಣ್ಣಿನ ಮಾನಭಂಗ ಮತ್ತು ಬರ್ಬರ ಹತ್ಯೆಯ ಆರೋಪ ಸಾಬೀತಾಗಿ ಜೀವಾವಧಿ ಶಿಕ್ಷೆಗೊಳಗಾಗಿದ್ದ ಕೈದಿಗಳನ್ನು ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂಭ್ರಮದಲ್ಲಿ 'ಸನ್ನಡತೆ' ಆಧಾರದ ಮೇಲೆ ಬಿಡುಗಡೆಗೊಳಿಸಿದ್ದು ಯಾರಿಗೇ ಆಗಲಿ ಅಚ್ಚರಿ ಮೂಡಿಸದೆ ಇರದು. ಬಿಲ್ಕಿಸ್ ಬಾನು ಎಂಬ ಗರ್ಭಿಣಿ ಮೇಲೆ ಅತ್ಯಾಚಾರ ನಡೆಸಿದ್ದು ಹೀನಾಯ ಕೃತ್ಯಗಳಲ್ಲಿ ಒಂದು. ಈ ಅಪರಾಧಕ್ಕೆ ಗಲ್ಲು ಶಿಕ್ಷೆಯೇ ಸೂಕ್ತ. ಆದರೆ, ವೈಯಕ್ತಿಕವಾಗಿ ನಾನು ಗಲ್ಲು ಶಿಕ್ಷೆಗೆ ವಿರುದ್ಧ ನಿಲುವು ಹೊಂದಿದ್ದೇನೆ. ಆದಾಗ್ಯೂ, ಈ ಘನಘೋರ ಪ್ರಕರಣದಲ್ಲಿ ಅಪರಾಧಿಗಳು ಜೀವಾವಧಿ ಶಿಕ್ಷೆಯನ್ನು ಪೂರ್ಣಗೊಳಿಸಬೇಕಿತ್ತು.

ಜೀವಾವಧಿ ಶಿಕ್ಷೆ ಮತ್ತಿತರ ಶಿಕ್ಷೆ ಅನುಭವಿಸುತ್ತಿರುವ ಕೈದಿಗಳನ್ನು ಸನ್ನಡತೆಯ ಆಧಾರದಲ್ಲಿ ನಮ್ಮ ಸರ್ಕಾರಗಳು ಬಿಡುಗಡೆಗೊಳಿಸುವುದು ಸ್ವಾತಂತ್ರ್ಯ ಬಂದಾಗಿನಿಂದಲೂ ಒಂದು ರಿವಾಜಿನಂತೆ ನಡೆದುಕೊಂಡು ಬಂದಿದೆ. ಆದರೆ, ಅದಕ್ಕೆ ತನ್ನದೇ ಆದಂತಹ ನಿಯಮ, ಷರತ್ತುಗಳಿವೆ. ಭಯೋತ್ಪಾದನೆ, ಡ್ರಗ್ಸ್, ಮಾನಭಂಗ ಮತ್ತು ಹತ್ಯೆ ಪ್ರಕರಣಗಳಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಕೈದಿಗಳನ್ನು ಬಿಟ್ಟು ಇತರೆ ಅಪರಾಧ ಎಸಗಿದ ಸನ್ನಡತೆಯ ಕೈದಿಗಳನ್ನು ಮಾಫಿ ಮಾಡಿ ಬಿಡುಗಡೆ ಮಾಡಲಾಗುತ್ತದೆ. ಹೀನ ಕೃತ್ಯ ಮತ್ತು ಸಮಾಜ ಮನ್ನಿಸಲು ಸಾಧ್ಯವೇ ಇಲ್ಲದಂತಹ ಅಪರಾಧ ಹೊತ್ತ ಕೈದಿಗಳನ್ನು ಏಕೆ ಇದರಿಂದ ಹೊರತುಪಡಿಸಲಾಗಿದೆ ಎಂದರೆ; ಇವೆಲ್ಲಾ ಸಮಾಜದ ಆರೋಗ್ಯ ಹಾಗೂ ನೈತಿಕತೆಗೆ ವಿರುದ್ಧವಾದಂಥವು. ಇಂತಹ ಪ್ರಕರಣಗಳಲ್ಲಿ ಶಿಕ್ಷೆಗೊಳಗಾದ ಕೈದಿಗಳನ್ನು ಸನ್ನಡತೆಯ ಆಧಾರದ ಮೇಲೆ ಬಿಡುಗಡೆ ಮಾಡಲು ಅವಕಾಶವಿರುವುದಿಲ್ಲ.

ಗುಜರಾತ್ ಸರ್ಕಾರ ಬಿಲ್ಕಿಸ್ ಬಾನು ಪ್ರಕರಣದಲ್ಲಿ ಮೊದಲಿನಿಂದಲೂ ತನ್ನ ನೀತಿಯಿಂದಾಗಿ ಸುಪ್ರೀಂ ಕೋರ್ಟು, ಗುಜರಾತ್ ಹೈಕೋರ್ಟುಗಳಿಂದ ಛೀಮಾರಿಗೆ ಒಳಗಾಗುತ್ತಲೇ ಬಂದಿದೆ. ಈ ಪ್ರಕರಣ ಅತ್ಯಂತ ಹೇಯ ಕೃತ್ಯವೆಂದು ನ್ಯಾಯಾಲಯವೇ ಅನೇಕ ಬಾರಿ ಹೇಳಿದೆ. ಇಂತಹ ಅಪರಾಧಿಗಳನ್ನು ಬಿಡುಗಡೆ ಮಾಡಲು ಗುಜರಾತ್ ರಾಜ್ಯ ಸರ್ಕಾರದ ಸಚಿವ ಸಂಪುಟ ಕೈಗೊಂಡ ನಿರ್ಧಾರಕ್ಕೆ ಅಲ್ಲಿನ ರಾಜ್ಯಪಾಲರು ಅಂಕಿತ ಹಾಕಿದ್ದು ಸರ್ವಥಾ ಸಮರ್ಥನೀಯವಲ್ಲ. ರಾಜ್ಯಪಾಲರು ಸಂವಿಧಾನದ ಜವಾಬ್ದಾರಿ ಹೊತ್ತವರು. ಅಪರಾಧದ ತೀವ್ರತೆಯನ್ನು ಮರೆತು ಬಿಡುಗಡೆಗೆ ತಲೆಯಾಡಿಸಿ ಮುದ್ರೆ ಒತ್ತಿದ್ದು ಖಂಡಿತಾ ಅನ್ಯಾಯ. ಇದು ದೇಶದ ಸಂವಿಧಾನಕ್ಕೆ, ಕಾನೂನು ನಿಯಮಗಳಿಗೆ, ಸಮಾಜದ ಆರೋಗ್ಯಕ್ಕೆ ವಿರುದ್ಧವಾಗಿರುವಂಥದ್ದು. ಹೀಗಾಗಿ, ಇದು ಸರ್ಕಾರವೇ ಮಾಡಿರುವ ಅಪರಾಧ ಎನ್ನದೇ ವಿಧಿಯಿಲ್ಲ.

ಲೇಖಕ: ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ

ನಿರೂಪಣೆ: ಬಿ.ಎಸ್. ಷಣ್ಮುಖಪ್ಪ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 204

ಶಿವನ ಬೆವರಿಂದ ಹುಟ್ಟಿದ ಮಂಗಳ

ನಾರದ 'ಓ ಬ್ರಹ್ಮನೇ! ಶಿವಲೀಲೆಯನ್ನು ಇನ್ನೂ ವಿಸ್ತಾರವಾಗಿ ಹೇಳು. ಸತೀದೇವಿಯಿಂದ ವಿರಹಿತನಾದ ಶಂಕರ ಏನು ಮಾಡಿದ? ಹಿಮಾಲಯದ ತಪ್ಪಲಿಗೆ ತಪಸ್ಸನ್ನಾಚರಿಸಲು ಯಾವಾಗ ಬಂದ? ಶಿವಪಾರ್ವತಿ ವಿವಾಹ ಹೇಗಾಯಿತು? ಕಾಮದಹನ ಹೇಗಾಯಿತು? ಪಾರ್ವತಿ ತಪವನ್ನಾಚರಿಸಿ ಶಿವನನ್ನು ಹೇಗೆ ಪಡೆದಳು?' ಎಂದು ಕೋರುತ್ತಾನೆ. ಬ್ರಹ್ಮನು ಶಿವಪಾರ್ವತಿ ಕಲ್ಯಾಣದ ಕಥೆ ಹೇಳತೊಡಗುತ್ತಾನೆ.

ಕೈಲಾಸಕ್ಕೆ ಬಂದ ಶಂಕರ ತನ್ನ ಪ್ರಿಯೆಯ ನೆನೆದು ದುಃಖಿಸುತ್ತಿದ್ದ. ಪ್ರಾಣಾಧಿಕಳಾದ ಸತೀದೇವಿಯನ್ನು ಕುರಿತು ಚಿಂತಿಸುತ್ತಿದ್ದ. ಪ್ರೀತಿಯನ್ನು ದ್ವಿಗುಣಗೊಳಿಸುವ ಅವಳ ಸದ್ಗುಣಗಳನ್ನು ತನ್ನ ಗಣಗಳೆದುರು ಬಣ್ಣಿಸಿ ಗದ್ಗದಿತನಾಗುತ್ತಿದ್ದ. ಲೀಲಾಮಯನಾದ ಅವನು ಗೃಹಸ್ಥಾಶ್ರಮದ ವಿಧಿಯನ್ನು ಮರೆತು, ಭೈರಾಗಿಯಂತೆ ದಿಗಂಬರನಾಗಿ ಲೋಕಗಳನ್ನೆಲ್ಲಾ ಸಂಚರಿಸುತ್ತಿದ್ದ. ಹೀಗಿರುವಾಗ ಶಿವ ಮತ್ತೆ ಹಿಮಾಲಯಕ್ಕೆ ಬಂದ. ಅಲ್ಲಿ ಮನಸ್ಸನ್ನು ಸ್ಥಿರವಾಗಿರಿಸಿ ಸಮಾಧಿಸ್ಥಿತಿಯಲ್ಲಿ ಕುಳಿತ. ತಪೋನಿಷ್ಠನಾಗಿ ನಾಶರಹಿತವಾದ ತನ್ನ ಸ್ವರೂಪವನ್ನು ಸಾಕ್ಷಾತ್ಕರಿಸಿದ.

ಸತ್ವ-ರಜಸ್ಸು-ತಮೋ ಗುಣಗಳ ಸಂಬಂಧವಿಲ್ಲದೇ ನಿರ್ವಿಕಾರನಾಗಿ ಸಮಾಧಿಸ್ಥಿತಿಯಲ್ಲಿ ಬಹಳ ಕಾಲ ಕಳೆದ. ನಂತರ ಸಮಾಧಿಸ್ಥಿತಿಯನ್ನು ತ್ಯಜಿಸಿ ಮತ್ತಷ್ಟು ಕಾಲ ಕಳೆದ. ಇವೆರಡು ಕಾಲಘಟ್ಟಗಳ ನಡುವೆ ಅನೇಕ ಘಟನೆಗಳು ನಡೆದವು. ಅದರಲ್ಲಿ ಮೊದಲ ಪ್ರಮುಖ ಘಟನೆ ಎಂದರೆ ಮಂಗಳ ಗ್ರಹದ ಜನನ.

ಒಮ್ಮೆ ಶಂಕರ ಸಮಾಧಿಯಿಂದ ಬಹಿರ್ಮುಖನಾದಾಗ ಆಯಾಸದಿಂದ ಅವನ ಲಲಾಟದಿಂದ ಬೆವರ ಹನಿ ಉದುರಿತು. ಆ ಬೆವರಿನಿಂದ ಒಂದು ಶಿಶುವಾಯಿತು. ಆ ಶಿಶುವಿಗೆ ನಾಲ್ಕು ಕೈಗಳಿದ್ದುವು. ಕೆಂಬಣ್ಣದಿಂದ ಕೂಡಿತ್ತು. ತುಂಬಾ ಸುಂದರವಾಗಿ, ಮಹಾತೇಜಸ್ವಿಯಾಗಿ ಮತ್ತು ಮಹಾಕಾಂತಿಯಿಂದ ಪ್ರಜ್ವಲಿಸುತ್ತಿತ್ತು. ಶಿಶುವು ಸಮಾನ್ಯ ಮಾನವರ ಶಿಶುವಿನಂತೆ ಶಂಕರನೆದುರಿನಲ್ಲಿ ಅಳತೊಡಗಿತು. ಆಗ ಭೂದೇವಿಯು ತನ್ನ ಸುಬುದ್ಧಿಯಿಂದ ಆಲೋಚಿಸಿ ಸುಂದರವಾದ ಸ್ತ್ರೀರೂಪವನ್ನು ಧರಿಸಿ ಶಂಕರನೆದುರಿಗೆ ಪ್ರತ್ಯಕ್ಷಳಾದಳು. ಅವಳು ಶಂಕರನ ಲಲಾಟದಿಂದ ಜನಿಸಿದ ಶಿಶುವನ್ನು ತನ್ನ ತೊಡೆಯಲ್ಲಿ ಇಟ್ಟುಕೊಂಡು ಪ್ರೀತಿಯಿಂದ ಎದೆಹಾಲನ್ನು ಉಣಿಸಿದಳು. ಹೀಗೆ ಭೂದೇವಿ ತಾಯಿ ಇಲ್ಲದ ಮಗುವಿಗೆ ತಾನೇ ತಾಯಿಯಾಗಿ ಪರಮೇಶ್ವರನ ಮನಸ್ಸು ಹರ್ಷಗೊಳ್ಳುವಂತೆ ಮಾಡಿದಳು. ಭೂದೇವಿಯು ಸ್ತ್ರೀರೂಪದಿಂದ ಬಂದು ಮಗುವಿಗೆ ಸ್ತನ್ಯಪಾನ ಮಾಡಿಸಿದುದನ್ನು ತನ್ನ ಜ್ಞಾನದೃಷ್ಟಿಯಿಂದ ತಿಳಿದ ಶಿವ, 'ಎಲೈ ಭೂದೇವಿ, ಈ ಮಗುವನ್ನು ನೀನು ಸಲಹು. ಮಗು ನನ್ನ ನಿನ್ನ ಹೆಸರಿನಿಂದಲೇ ಪ್ರಸಿದ್ಧಿಯನ್ನು ಪಡೆಯುವನು. ಗುಣವಂತನೂ ನಿನಗೆ ಆನಂದವನ್ನುಂಟುಮಾಡುವವನೂ, ನನ್ನನ್ನು ಸಂತೋಷಗೊಳಿಸುವವನೂ ಆಗುವನು. ಇಂತಹ ಶಿಶುವನ್ನು ನಿನ್ನಿಷ್ಟದಂತೆಯೇ ಸ್ವೀಕರಿಸು' ಎಂದ. ಹೀಗೆ ಶಿವ ವಿರಹದ ಕಡೆಗೆ ಸಂಪೂರ್ಣ ಮನಸ್ಸು ಕೊಡದೆ, ಸ್ವಲ್ಪಕಾಲ ಲೋಕವ್ಯವಹಾರದ ಕಡೆಗೂ ಗಮನಹರಿಸುತ್ತಿದ್ದ.

ಭೂದೇವಿಯು ಆ ಮಗುವಿನೊಡನೆ ತನ್ನ ಸ್ಥಾನಕ್ಕೆ ತೆರಳಿದಳು. ಆ ಶಿಶುವು ಯುವಕನಾಗಿ 'ಭೌಮ' (ಅಂಗಾರಕ-ಕುಜ-ಮಂಗಳ) ಎಂಬ ಹೆಸರನ್ನು ಪಡೆದ. ಮುಂದೆ ಕಾಶಿಯಲ್ಲಿ ಬಹಳ ಕಾಲ ವಾಸಿಸುತ್ತಾ ಶಂಕರನನ್ನು ಆರಾಧಿಸಿದ. ಅಲ್ಲಿ ವಿಶ್ವೇಶ್ವರನ ಪ್ರಸಾದವನ್ನು ಪಡೆದ. ಅವನ ಅನುಗ್ರಹದಿಂದ ನವಗ್ರಹಗಳಲ್ಲಿ ಒಬ್ಬನಾಗಿ ಶುಕ್ರಲೋಕಕ್ಕಿಂತಲೂ ಮೇಲಿರುವ ದೇವಲೋಕಕ್ಕೆ ತೆರಳಿದ ಎಂದು ನಾರದನಿಗೆ ಬ್ರಹ್ಮ ಹೇಳುತ್ತಾನೆ. ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ, ಎರಡನೆಯದಾದ ರುದ್ರಸಂಹಿತೆಯ ಮೂರನೇ ಖಂಡವಾದ ಪಾರ್ವತೀಖಂಡದ ಹತ್ತನೆಯ ಅಧ್ಯಾಯ ಮುಗಿಯುತ್ತದೆ.

ಗುಜರಾತ್ ಸರ್ಕಾರದ ಕ್ರಮ ಕಾನೂನು ಉಲ್ಲಂಘನೆ ಅಲ್ಲ

• ಶ್ರೀಧರ ಪ್ರಭು



ಪ್ರಕರಣಗಳ ತೀರ್ಪುಗಳು ಹೇಗೇ ಬರಲಿ, ರಾಜಕೀಯ ಪಕ್ಷಗಳು ತಮ್ಮ ಲಾಭವನ್ನು ಲೆಕ್ಕಿಸಿಕೊಂಡೇ ವ್ಯಾಖ್ಯಾನಿಸುತ್ತವೆ. ಸಾಮಾನ್ಯ ಜನರಿಗೆ, ಪ್ರಕರಣಗಳ ಸಂಪೂರ್ಣ ಹಿನ್ನೆಲೆಯಾಗಲಿ, ಭಾರತದ ದಂಡ ಸಂಹಿತೆ ಅಥವಾ ಅಪರಾಧ ಪ್ರಕ್ರಿಯಾ ಸಂಹಿತೆಯ ಸೂಕ್ಷ್ಮಗಳಾಗಲಿ, ರಾಜಕೀಯ ಪಕ್ಷಗಳ ಹುನ್ನಾರಗಳಾಗಲಿ ಅರ್ಥವಾಗುವುದಿಲ್ಲ. ಹೀಗಾಗಿ, ಇಂತಹ ಸೂಕ್ಷ್ಮ ಪ್ರಕರಣಗಳಲ್ಲಿ ಪ್ರಾಜ್ಞರಾದವರು ವಸ್ತುನಿಷ್ಠವಾಗಿ ವಿಶ್ಲೇಷಿಸುವ ಪ್ರಯತ್ನ ಮಾಡಬೇಕಿದೆ

ಬಿಲ್ಕಿಸ್ ಬಾನು ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೊಳಗಾಗಿದ್ದ 11 ಜನ ಅಪರಾಧಿಗಳನ್ನು ಜೀವಾವಧಿ ಶಿಕ್ಷೆ ಪೂರ್ಣಗೊಳ್ಳುವುದಕ್ಕೂ ಮುನ್ನವೇ ಬಿಡುಗಡೆಗೊಳಿಸಿದ ಗುಜರಾತ್ ಸರ್ಕಾರದ ತೀರ್ಮಾನವನ್ನು ವಿರೋಧಿಸಲು ಮೂರು ಪ್ರಮುಖ ಕಾರಣಗಳನ್ನು ಮುಂದಿಡಲಾಗುತ್ತಿದೆ.

ಮೊದಲ ಕಾರಣ: ಕೇಂದ್ರ ಸರ್ಕಾರವು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭಕ್ಕೆ 2022ರ ಜೂನ್ 10ರಂದು ಜಾರಿಗೊಳಿಸಿದ ವಿಶೇಷ ನಿಯಮಾವಳಿಗಳ ಪ್ರಕಾರ ಅತ್ಯಾಚಾರ, ಪೋಕ್ಸೊ ಮುಂತಾದ ಅಪರಾಧಗಳಲ್ಲಿ ಶಿಕ್ಷೆಯಾಗಿರುವ ಕೈದಿಗಳ ಶಿಕ್ಷಾವಧಿ ಮೊಟಕುಗೊಳಿಸುವಂತಿಲ್ಲ.

ಎರಡನೆಯದು: ಗುಜರಾತ್ ಸರ್ಕಾರ ಅಪರಾಧಿಗಳ ಪರ ನಿಂತಿದೆ.

ಮೂರನೆಯದು: ಸ್ವಾತಂತ್ರ್ಯದ ಅಮೃತ ಗಳಿಗೆಯಲ್ಲಿ ಕೈಗೊಂಡ ಈ ತೀರ್ಮಾನ ಭಾರತದ ಗೌರವಾನ್ವಿತ ಸ್ಥಾನಕ್ಕೆ ಚ್ಯುತಿ ತಂದಿದೆ ಎಂಬ ಟೀಕೆ.

ನಮ್ಮ ಸಂವಿಧಾನದ (ಏಳನೇ ಪರಿಚ್ಛೇದದ ಎರಡನೇ ಪಟ್ಟಿ) ಪ್ರಕಾರ ಕಾನೂನು ಸುವ್ಯವಸ್ಥೆ, ಜೈಲು ಮತ್ತು ಕೈದಿಗಳ ವಿಚಾರದಲ್ಲಿ ರಾಜ್ಯ ಸರ್ಕಾರ ಮಾತ್ರವೇ ಕಾನೂನನ್ನು ರೂಪಿಸಬಹುದು.1992ರಲ್ಲೇ ಗುಜರಾತ್ ಸರ್ಕಾರ ನಿಯಮಾವಳಿಗಳನ್ನು ರೂಪಿಸಿದೆ. ಈ ನಿಯಮಾವಳಿಗಳ ಅಡಿಯಲ್ಲಿ ತಮ್ಮ ಶಿಕ್ಷಾವಧಿಯನ್ನು ಮೊಟಕುಗೊಳಿಸಬೇಕೆಂದು ಕೋರಿ ರಾಧೇಶ್ಯಾಮ್ ಮತ್ತಿತರರು ಸಲ್ಲಿಸಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ 2022ರ ಮೇ 13 ರಂದು ವಿಚಾರಣೆಗೆ ಪರಿಗಣಿಸಿತು. ಗುಜರಾತ್ ಸರ್ಕಾರದ 1992ರ ನಿಯಮಾವಳಿಗಳಡಿ ಸೂಕ್ತ ತೀರ್ಮಾನವನ್ನು ಕೈಗೊಳ್ಳಬೇಕೆಂದು ನಿರ್ದೇಶಿಸಿತು.

ಈ ಮೊದಲು 2019ರಲ್ಲಿ ತಮ್ಮ ಶಿಕ್ಷೆಯನ್ನು ಮೊಟಕುಗೊಳಿಸಬೇಕೆಂದು ಕೋರಿ ಬಿಲ್ಕಿಸ್ ಪ್ರಕರಣದಲ್ಲಿ ಶಿಕ್ಷೆಗೊಳಗಾದ ರಾಧೇಶ್ಯಾಮ್ ಮತ್ತಿತರ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಕೈದಿಗಳು ಗುಜರಾತ್ ಹೈಕೋರ್ಟ್‌ನ ಮೆಟ್ಟಿಲೇರಿದ್ದರು. ಗುಜರಾತ್ ಹೈಕೋರ್ಟ್ ಅವರ ಅರ್ಜಿಯನ್ನು ತಿರಸ್ಕರಿಸಿ, ಬಿಲ್ಕಿಸ್ ಪ್ರಕರಣದ ವಿಚಾರಣೆ ಸುಪ್ರೀಂ ಕೋರ್ಟ್ ವಿಶೇಷ ನಿರ್ದೇಶನದಡಿ ಮಹಾರಾಷ್ಟ್ರದಲ್ಲಿ ನಡೆದಿದ್ದರಿಂದ, ಮುಂಬೈ ಹೈಕೋರ್ಟ್‌ಗೆ ಹೋಗುವಂತೆ ಸೂಚಿಸಿತ್ತು. ಗುಜರಾತ್ ಹೈಕೋರ್ಟಿನ ತೀರ್ಮಾನವನ್ನು ತಿರಸ್ಕರಿಸಿದ ಸುಪ್ರೀಂ ಕೋರ್ಟ್, ಗುಜರಾತ್ ಸರ್ಕಾರದ 1992ರ ಮಾರ್ಗದರ್ಶಿ ಸೂತ್ರಗಳ ಪ್ರಕಾರವೇ ಕೈದಿಗಳ ಅರ್ಜಿಯನ್ನು ಪರಿಗಣಿಸುವಂತೆ ಹೇಳಿತ್ತು.

ಗುಜರಾತ್ ಸರ್ಕಾರ ಯಾವ ನೀತಿ ನಿಯಮವನ್ನೂ ಮೀರಿಲ್ಲ; ಅಷ್ಟೇ ಅಲ್ಲ ಪ್ರಾರಂಭದಿಂದಲೂ ಬಿಲ್ಕಿಸ್ ಪ್ರಕರಣದ ಕೈದಿಗಳ ಶಿಕ್ಷಾವಧಿಯ ಮೊಟಕುಗೊಳಿಸುವಿಕೆಯನ್ನು ವಿರೋಧಿಸುತ್ತಲೇ ಬಂದಿದೆ.

ಗುಜರಾತ್ ಸರ್ಕಾರದ ನಿಷ್ಠುರ ನೀತಿಗಳಿಂದಾಗಿಯೇ, ಕೈದಿಗಳ ಅರ್ಜಿಗಳ ಪರಿಗಣನೆಯಲ್ಲಿ ಮೂರ್ನಾಲ್ಕು ವರ್ಷಗಳ ವಿಳಂಬವಾಯಿತು. ಈಗಲೂ ಸುಪ್ರೀಂ ಕೋರ್ಟಿನ ನಿರ್ದೇಶನವನ್ನು ಪಾಲಿಸಿದೆಯೇ ಹೊರತು ಬೇರೇನೂ ಮಾಡಿಲ್ಲ. ಒಂದು ವೇಳೆ ತನ್ನ ನಿಯಮಾವಳಿಗಳನ್ನು ನಿರ್ಲಕ್ಷಿಸಿ, ಬೇರೆ ನಿಯಮಗಳ ಮೊರೆ ಹೋಗಿದ್ದರೆ, ಸುಪ್ರೀಂ ಕೋರ್ಟಿನ ತೀರ್ಮಾನವನ್ನು ಅವಗಣನೆ ಮಾಡಿದ ಆರೋಪ ಗುಜರಾತ್ ಸರ್ಕಾರದ ಹೆಗಲೇರುತ್ತಿತ್ತು.

ಕೇಂದ್ರ ಸರ್ಕಾರದ ನಿಯಮಾವಳಿಗಳು ಜಾರಿಗೆ ಬಂದದ್ದು ಜೂನ್ 2020ರಲ್ಲಿ. ಬಿಲ್ಕಿಸ್ ಪ್ರಕರಣದಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿದ್ದು 2008ರಲ್ಲಿ. ಒಬ್ಬ ಕೈದಿಗೆ ಶಿಕ್ಷೆಯಾದ ಸಂದರ್ಭದಲ್ಲಿ ಯಾವೆಲ್ಲ ನಿಯಮಾವಳಿಗಳು ಜಾರಿಯಲ್ಲಿದ್ದವೋ, ಅದೇ ನಿಯಮಾವಳಿಗಳ ಪ್ರಕಾರವೇ ಅಪರಾಧಿಯ ಶಿಕ್ಷಾವಧಿಯ ಅರ್ಜಿಯನ್ನು ಪರಿಗಣಿಸಬೇಕೆಂದು ಸುಪ್ರೀಂ ಕೋರ್ಟ್ 2010ರಲ್ಲಿ ಹರಿಯಾಣ ರಾಜ್ಯ ಸರ್ಕಾರ ಮತ್ತು ಜಗದೀಶ್ ಪ್ರಕರಣದಲ್ಲಿ ತೀರ್ಪು ನೀಡಿದೆ. ನಿರ್ದಿಷ್ಟವಾಗಿ, ಜಗದೀಶ್ ಪ್ರಕರಣವನ್ನು ಉಲ್ಲೇಖಿಸಿದ ಸುಪ್ರೀಂ ಕೋರ್ಟ್, 1992ರ ನಿಯಮಾವಳಿಗಳ ಅಡಿ ಕೈದಿಗಳ ಅರ್ಜಿಯನ್ನು ತೀರ್ಮಾನಿಸುವಂತೆ ಗುಜರಾತ್ ಸರ್ಕಾರಕ್ಕೆ ನಿರ್ದೇಶಿಸಿತು. ಹೀಗಿರುವಾಗ, ತನ್ನದೇ ನಿಯಮಾವಳಿಗಳನ್ನು ಪಾಲಿಸದೇ ಗುಜರಾತ್ ಸರಕಾರಕ್ಕೆ ಗತ್ಯಂತರವಿರಲಿಲ್ಲ.

ಬಿಲ್ಕಿಸ್ ಪ್ರಕರಣ ಜರುಗಿದ್ದು ಗುಜರಾತಿನಲ್ಲಿ. ಈ ಪ್ರಕರಣದಲ್ಲಿ ಕೇಂದ್ರ ಸರ್ಕಾರದ ಪಾತ್ರವೇನೂ ಇರಲಿಲ್ಲ. ಹಾಗಾಗಿ ಭಾರತೀಯ ದಂಡ ಸಂಹಿತೆ, 1973ರ ಕಲಂ 432 ಮತ್ತು 433ರಡಿ ಶಿಕ್ಷೆಯ ಅವಧಿಯನ್ನು ಪರಿಷ್ಕರಿಸುವ ಅಧಿಕಾರವಿರುವುದು ರಾಜ್ಯ ಸರ್ಕಾರಕ್ಕೆ ಮಾತ್ರ. ಈ ಕಾರಣಕ್ಕೂ ಕೇಂದ್ರ ಅಥವಾ ಕೇಂದ್ರದ ನಿಯಮಗಳ ಪ್ರಸ್ತುತತೆ ಈ ಪ್ರಕರಣದಲ್ಲಿ ಇರಲಿಲ್ಲ.

ನಿರ್ಭಯಾ ಪ್ರಕರಣಗಳ ನಂತರದಲ್ಲಿ ಶಾಸಕಾಂಗ ಮತ್ತು ನ್ಯಾಯಾಂಗಗಳು ಅತ್ಯಾಚಾರ ಪ್ರಕರಣಗಳನ್ನು ತುಂಬಾ ಗಂಭೀರವಾಗಿ ಪರಿಗಣಿಸಿವೆ. ದೇಶವು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮ ಆಚರಿಸುತ್ತಿದ್ದಾಗ ಅತ್ಯಾಚಾರ ಪ್ರಕರಣದ ಅಪರಾಧಿಗಳಿಗೆ ಶಿಕ್ಷಾವಧಿಯನ್ನು ಮೊಟಕುಗೊಳಿಸಿದ್ದು ಜಾಗತಿಕ ಮಟ್ಟದಲ್ಲಿ ಭಾರತದ ವರ್ಚಸ್ಸಿಗೆ ಕುಂದು ತಂದಿದೆಯೆಂದು ವಾದಿಸಲಾಗುತ್ತದೆ.

ಕಾನೂನು, ಅಪರಾಧ ಮತ್ತು ಶಿಕ್ಷೆಗಳ ವಿಚಾರದಲ್ಲಿ ವರ್ಚಸ್ಸನ್ನು ಪರಿಗಣಿಸಿ ನಿರ್ಧರಿಸಲಾಗದು. ಕೈದಿಯೊಬ್ಬನ ಶಿಕ್ಷಾವಧಿಯನ್ನು ಪರಿಷ್ಕರಿಸುವಾಗ, ಶಿಕ್ಷೆಯಾದಾಗ ಯಾವ ನಿಯಮಗಳಿದ್ದವೋ ಅವುಗಳನ್ನೇ ಪಾಲಿಸಬೇಕಾಗುತ್ತದೆ. ಇದು ಜಾಗತಿಕ ನಿಯಮ.

ತ್ರಿವಳಿ ಕೃಷಿ ಕಾಯ್ದೆ ಮುಂತಾದ ನಿದರ್ಶನಗಳನ್ನು ಇಟ್ಟುಕೊಂಡು, ಕೇಂದ್ರ ಸರ್ಕಾರವು ರಾಜ್ಯಗಳ ಅಧಿಕಾರ ವ್ಯಾಪ್ತಿಯಲ್ಲಿ ಮೂಗು ತೂರಿಸಿದೆಯೆಂದು ವಾದಿಸಿದವರೇ ಇಂದು ರಾಜ್ಯ ಸರ್ಕಾರ ತನ್ನ ನಿಯಮಗಳನ್ನು ನಿರ್ಲಕ್ಷಿಸಿ ಕೇಂದ್ರದ ನಿಯಮಗಳನ್ನು ಪಾಲಿಸಬೇಕೆಂದು ವಾದಿಸುತ್ತಿದ್ದಾರೆ.

ಯಾವಾಗ ಯಾವುದು ಲಾಭದಾಯಕವೊ ಅಂಥದ್ದನ್ನು ರಾಜಕೀಯದಲ್ಲಿ ಬಳಸಬಹುದೇ ಹೊರತು ಕಾನೂನು ವಿಚಾರದಲ್ಲಿ ಅಲ್ಲ. 1992ರಲ್ಲಿ ಶಿಕ್ಷಾವಧಿ ನಿಯಮಗಳನ್ನು ರೂಪಿಸಿದ್ದು ಗುಜರಾತಿನ ಅಂದಿನ ಕಾಂಗ್ರೆಸ್ ಸರ್ಕಾರ, ಕೇಂದ್ರದಲ್ಲಿ ಸಹ ಅದೇ ಪಕ್ಷದ ಸರ್ಕಾರ ಇತ್ತು. ನಂತರದಲ್ಲಿ ಅನೇಕ ರಾಜಕೀಯ ಪಲ್ಲಟಗಳಾದರೂ ರಾಜ್ಯ ಸರ್ಕಾರ ತನ್ನ ನಿಯಮಗಳನ್ನು ಬದಲಿಸಿಲ್ಲ.

ಸಾಮಾನ್ಯವಾಗಿ ಪ್ರತಿ ಬಾರಿ ಸರ್ಕಾರ ಬದಲಾವಣೆಯಾದಾಗ ರಾಜ್ಯದ ಅಡ್ವೊಕೇಟ್ ಜನರಲ್ ಬದಲಾಗುತ್ತಾರೆ. ಅನೇಕರಿಗೆ ಆಶ್ಚರ್ಯ ಆಗಬಹುದು, ಗುಜರಾತ್ ರಾಜ್ಯ ಉದಯವಾಗಿದ್ದು 1960ರಲ್ಲಿ. ಅಂದಿನಿಂದ ಇವತ್ತಿನವರೆಗೂ 17 ಮುಖ್ಯಮಂತ್ರಿಗಳು ರಾಜ್ಯವನ್ನಾಳಿದ್ದಾರೆ, ಆದರೆ, ಮೂರೇ ಬಾರಿ ತಮ್ಮ ಅಡ್ವೊಕೇಟ್ ಜನರಲ್‌ಗಳನ್ನು ಬದಲಿಸಿದ್ದಾರೆ! ಕಾನೂನು ಮತ್ತು ನಿಯಮಗಳು ಸಮರ್ಪಕವಾಗಿದ್ದರೂ, ಬೇಕೆಂದೇ ಬದಲಿಸುವ ಸಂಪ್ರದಾಯವನ್ನು ಗುಜರಾತಿನ ಯಾವುದೇ ಸರ್ಕಾರವೂ ಪಾಲಿಸಿಕೊಂಡು ಬಂದಿಲ್ಲ. ಕೈದಿಗಳ ವಿಚಾರದಲ್ಲೂ ಇದನ್ನೇ ಪಾಲಿಸಲಾಗಿದೆ.

ಗುಜರಾತಿನ ವಿರೋಧ ಪಕ್ಷಕ್ಕೂ ಇದು ತಿಳಿದಿದೆ. ಹೀಗಾಗಿ, ಅಲ್ಲಿ ಚುನಾವಣಾ ವರ್ಷವಾಗಿದ್ದರೂ ಈ ಪ್ರಕರಣ ಅನಗತ್ಯ ರಾಜಕೀಯ ಸಂಘರ್ಷಕ್ಕೆ ಕಾರಣವಾಗಿಲ್ಲ.

ಪ್ರಕರಣಗಳ ತೀರ್ಪುಗಳು ಹೇಗೇ ಬರಲಿ, ರಾಜಕೀಯ ಪಕ್ಷಗಳು ತಮ್ಮ ಲಾಭವನ್ನು ಲೆಕ್ಕಿಸಿಕೊಂಡೇ ವ್ಯಾಖ್ಯಾನಿಸುತ್ತವೆ. ಸಾಮಾನ್ಯ ಜನರಿಗೆ, ಪ್ರಕರಣಗಳ ಸಂಪೂರ್ಣ ಹಿನ್ನೆಲೆಯಾಗಲಿ, ಭಾರತದ ದಂಡ ಸಂಹಿತೆ ಅಥವಾ ಅಪರಾಧ ಪ್ರಕ್ರಿಯಾ ಸಂಹಿತೆಯ ಸೂಕ್ಷ್ಮಗಳಾಗಲಿ, ರಾಜಕೀಯ ಪಕ್ಷಗಳ ಹುನ್ನಾರಗಳಾಗಲಿ ಅರ್ಥವಾಗುವುದಿಲ್ಲ. ಹೀಗಾಗಿ, ಇಂತಹ ಸೂಕ್ಷ್ಮ ಪ್ರಕರಣಗಳಲ್ಲಿ ಪ್ರಾಜ್ಞರಾದವರು ವಸ್ತುನಿಷ್ಠವಾಗಿ ವಿಶ್ಲೇಷಿಸುವ ಪ್ರಯತ್ನ ಮಾಡಬೇಕಿದೆ.

ಲೇಖಕ: ವಕೀಲರು, ಕರ್ನಾಟಕ ಹೈಕೋರ್ಟ್

ಪದಬಂಧ 5055

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಡುವೆ ರಾಜಿ ಮಾಡಿಕೊಂಡರೂ ಈತ ಸೋತವನು (4)
3.ವಿದ್ಯೆಯನ್ನು ಕಲಿಸುವ ಶಾಲೆ (4)
5.ಕಬ್ಬಿಗ ಇಲ್ಲಿ ಕಾಣುತ್ತಿದ್ದಾನೆ(2)
7.ಅರಸಿ ಕೈಯಲ್ಲಿದ್ದುದು ಧಾನ್ಯಗಳನ್ನು ಕೇರುವ ಸಾಧನ (3)
8.ದಮಯಂತಿಯ ಪತಿ (2)
10.ಔಷಧಿಯ ಗುಳಿಗೆ (2)
11.ಸಡಗರ ಹೀಗೆ ಬಂದಿದೆ(3)
13.ಕಮ್ಮಾರನ ಕೈ! (2)
15.ಮೋಕ್ಷಕ್ಕೆ ಸಾಧಕವಾದ ಪರಮಾತ್ಮನ ಅರಿವು (4)
16.ಮುಚ್ಚಳವಿರುವ ಡಬ್ಬಿ (4)

ಮೇಲಿಂದ ಕೆಳಕ್ಕೆ

1.ಪದ ಹೇಳಿ ಗಳಿಸಿರುವ ಬಿಲ್ಲೆ(3)
2.ಬಿದಿರಿನ ತಟ್ಟಿಯನ್ನು ಹೀಗೂ ಹೇಳುವರು (3)
3.ಕ್ರೀಡಾಶೀಲ ವ್ಯಕ್ತಿಯಿವನು(3)
4.ಯಮನ ಬಳಿ ಬಂದಿರುವ ಜೋಡಿ(3)
6.ಗೆಲುವನ್ನು ಗಳಿಸುವುದಕ್ಕಾಗಿ ಕೈಗೊಳ್ಳುವ ಪ್ರಯಾಣ (5)
8.ಒಳ್ಳೆತನದ ಸೋಗಿನಲ್ಲಿ ಮೋಸಮಾಡುವವನು (5)
10.ವಿಕ್ರಯಿಸು ಎಂದಾಗ ಬೀಸಿದ ಗಾಳಿ! (3)
11.ಸನ್ನಿಧಾನದಲ್ಲಿ ನಡೆದ ರಾಜಿ (3)
12.ಕರುವಿಗೆ ತೋರಿರುವ ದಯೆ(3)
14.ಈತ ವಿಲಾಸಪ್ರಿಯ (3)

1			2	■	3			4
	■	■		■		■	■	
5	6	■	7			■	8	9
■		■	■	■	■	■		■
■		■	■	■	■	■		■
■		■	■	■	■	■		■
10		■	11		12	■	13	14
	■	■		■		■	■	
15				■	16			

5054ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಲಪಾತ 3.ಕವಳ
5.ನವದಂಪತಿ 7.ಕೆಸರು
9.ತಾಕತ್ತು 11.ಮೊಸರು
13.ವ್ಯವಕಲನ 15.ವನಿತೆ
16.ನಡುಪ್ರಾಯ

ಮೇಲಿಂದ ಕೆಳಕ್ಕೆ:
1.ಜವನಿಕೆ 2.ತಲ್ಲೀನ
4.ವದಂತಿ 6.ದಂಡೆತ್ತು
8.ಸಸಿ 9.ತಾರಕ
10.ಕಂಸ 12.ರುಗ್ಣಾಲಯ
13.ವ್ಯಸನಿ 14.ನವೀನ

ಸುಡೊಕು 5441

				4		8		7
4		8						
	9			7		6		4
	5		7				6	
				9				
2		3			4		7	
7								6
	1		2		9		4	
6		2				9		5


5440 ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಆಗಸ್ಟ್ 20, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣನವಮಿ ಗಂ. 25-09 ನಕ್ಷತ್ರ: ರೋಹಿಣಿ ಗಂ. 28-40 ಯೋಗ: ವ್ಯಾಘಾತ ಗಂ. 21-41, ಕರಣ: ತೈತಿಲ ಗಂ. 12-02, ಸಿಂಹ ಮಾಸದ 03 ನೇ ದಿನ. ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 06-22 ಸೂರ್ಯಾಸ್ತ : 06-46, ಮುಸ್ಲಿಂ ದಿನಾಂಕ : 21 ಮೊಹರಮ್ ದಿನ ವಿಶೇಷ : ಶ್ರೀ ಜಯಂತಿ (ರಾಮಾನುಜಾ), ಅಮೃತ ಸಿದ್ಧಿಯೋಗ
ಅದೃಷ್ಟ ಸಂಖ್ಯೆ : 3, 6

ಮೇಷ: ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು. ಚಿನ್ನಾಭರಣ ವ್ಯಾಪಾರಿಗಳಿಗೆ ಹೆಚ್ಚಿನ ಅವಕಾಶಗಳು ಸಿಗಲಿವೆ. ನಿಮ್ಮ ಆತ್ಮವಿಶ್ವಾಸ ಹಾಗೂ ಧನಾತ್ಮಕ ಮನೋಭಾವ ಗೆಲುವಿಗೆ ಕಾರಣವಾಗಲಿದೆ. ಸುಬ್ರಹ್ಮಣ್ಯನನ್ನು ಆರಾಧಿಸಿ.

ವೃಷಭ: ಅತಿಯಾಗಿ ನಂಬಿಕೆ ಇಟ್ಟಿರುವ ವ್ಯಕ್ತಿಗಳಿಂದ ಅಥವಾ ನಿಮ್ಮವರಿಂದಲೇ ತೊಂದರೆಗಳು ಆಗಲಿದೆ. ಪಿತ್ತಾಧಿಕ್ಯದಿಂದ ಉಂಟಾಗಿರುವ ಅನಾರೋಗ್ಯವನ್ನು ನಿಯಮಿತ ಆಹಾರ ಸೇವನೆಯಿಂದ ಸರಿಪಡಿಸಿಕೊಳ್ಳಬಹುದು.

ಮಿಥುನ: ಎಲ್ಲಾ ಪ್ರಯತ್ನಿಸಿದ ಕಾರ್ಯಗಳಲ್ಲಿ ಜಯವಿದ್ದು, ವಿವಿಧ ಮೂಲಗಳಿಂದ ಆದಾಯ ಲಭಿಸುವುದು. ರಾಜಕೀಯ ವ್ಯಕ್ತಿಗಳಿಗೆ ವಿವಿಧ ವಿಚಾರಗಳಲ್ಲಿ ಪ್ರಗತಿ ಇದ್ದು ಸಾಮಾಜಿಕವಾಗಿ ಸ್ಥಾನಮಾನ ಪ್ರಾಪ್ತಿಯಾಗಲಿದೆ.

ಕರ್ಕಾಟಕ: ನಿಮ್ಮ ಕಾರ್ಯಕ್ಷೇತ್ರದಲ್ಲಿ ಯಾವುದೇ ಅಡ್ಡಿ-ಆತಂಕಗಳು ಇರುವುದಿಲ್ಲ. ಆರ್ಥಿಕವಾಗಿ ಉತ್ತಮ ಪ್ರಗತಿ ಇದ್ದರೂ ಧನವ್ಯಯದಲ್ಲಿ ಆಗುತ್ತಿರುವ ಅನವಶ್ಯಕ ಖರ್ಚುಗಳನ್ನು ತಡೆಗಟ್ಟಲು ಪ್ರಯತ್ನಿಸಿ.

ಸಿಂಹ: ವ್ಯಾಪಾರಿಗಳಿಗೆ ಸರಕು ಸಾಗಾಣಿಕೆಯಲ್ಲಿ ತೊಂದರೆಗಳು ಸಂಭವಿಸಲಿದೆ. ನಿದ್ರಾಹೀನತೆಯಂತಹ ಸಮಸ್ಯೆಗೆ ಕೆಟ್ಟ ಯೋಚನೆಗಳೇ ಮುಖ್ಯ ಕಾರಣ. ಕುಶಲ-ಕರ್ಮಿಗಳಿಗೆ ಪರಸ್ಥಳದವರಿಂದ ಬೇಡಿಕೆ ಹೆಚ್ಚಲಿದೆ.

ಕನ್ಯಾ: ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಹಿಡಿತ ಸಿಗುವಂತಾಗುವುದು. ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ಮಾಡುವ ಆಲೋಚನೆಯನ್ನು ಕಾರ್ಯರೂಪಕ್ಕೆ ತನ್ನಿರಿ. ಸ್ವಯಂ ಉದ್ಯೋಗಸ್ಥರಿಗೆ ಇನ್ನೊಬ್ಬರ ಸಹಾಯ ಅನಿವಾರ್ಯ.

ತುಲಾ: ಪಾಲುದಾರಿಕೆಯಲ್ಲಿ ಸಮಸ್ಯೆಯಾಗುವ ಸಾಧ್ಯತೆಗಳಿವೆ. ಆರಕ್ಷಕ ವರ್ಗದವರಿಗೆ ಅಥವಾ ಕಾವಲು ಪಡೆಯವರಿಗೆ ಕಾರ್ಯದೊತ್ತಡ ಹೆಚ್ಚಲಿದೆ. ಸಣ್ಣ ಕೈಗಾರಿಕೆಯವರಿಗೆ ಉತ್ತಮ ಸಮಯವಿದು.

ವೃಶ್ಚಿಕ: ವಿದ್ಯುತ್ ಶಕ್ತಿಯ ವಲಯದ ಕಾರ್ಮಿಕರು ಎಚ್ಚರದಿಂದ ಕಾರ್ಯ-ನಿರ್ವಹಿಸಿ. ಸೇವಿಸುವ ಆಹಾರದಲ್ಲಿನ ವಿಷ ಪದಾರ್ಥದಿಂದಾಗಿ ಚರ್ಮಕ್ಕೆ ಸಂಬಂಧಿಸಿದಂತೆ ಅನಾರೋಗ್ಯ ಉಂಟಾಗಬಹುದು.

ಧನು: ಹಿರಿಯರ ಅನುಗ್ರಹದಿಂದ ಇಷ್ಟಸಿದ್ಧಿಯಾಗಿ ಕ್ರಯ- ವಿಕ್ರಯದಲ್ಲಿ ಲಾಭ ತರಲಿದೆ. ಮನೆಯಲ್ಲಿ ಮಂಗಳ ಕಾರ್ಯಗಳ ಸಂಭ್ರಮವಿರುವುದು. ಉನ್ನತ ವ್ಯಕ್ತಿಗಳ ಒಡನಾಟದಲ್ಲಿನ ವಿಚಾರ ವಿಮರ್ಶೆಯಿಂದ ಅನುಕೂಲ.

ಮಕರ: ಹೂವು-ಹಣ್ಣಿನ ವ್ಯಾಪಾರಿಗಳಿಗೆ ಅಧಿಕ ಲಾಭ ಉಂಟಾಗುವುದು. ಕಲಾವಿದರಿಗೆ ಜನಪ್ರಿಯತೆಯ ಜೊತೆಯಲ್ಲಿ ಪಾಂಡಿತ್ಯಕ್ಕೆ ತಕ್ಕಂತಹ ಸಂಭಾವನೆಯೂ ಪ್ರಾಪ್ತಿಯಾಗುತ್ತದೆ.

ಕುಂಭ: ನಿಮ್ಮ ಬುದ್ಧಿವಂತಿಕೆಯಿಂದ ಮತ್ತು ವಾಕ್ಚಾತುರ್ಯದಿಂದ ಕಲಹಗಳು ದೂರಾಗಲಿವೆ. ದೇವತಾನುಗ್ರಹ ಸಂಪೂರ್ಣವಿದ್ದು ತೊಂದರೆ ನಿವಾರಿಸಿ ವೃತ್ತಿ-ರಂಗದಲ್ಲಿ ಉತ್ತಮ ರೀತಿಯಲ್ಲಿ ಮುಂದುವರಿಯಲು ಪೂರಕನಾಗಿರುತ್ತಾನೆ.

ಮೀನ: ಸಾಮಾಜಿಕವಾಗಿ ಜನೋಪಕಾರದಿಂದ ಪ್ರಶಂಸೆ ಹಾಗೂ ಗುರು-ಹಿರಿಯರಿಂದ ಮೆಚ್ಚುಗೆಯ ನುಡಿ ಲಭಿಸಲಿದೆ. ರೈತರಿಗೆ ಫಸಲು ಉತ್ತಮವಾಗಿ ಸಿಕ್ಕು, ಹೆಚ್ಚಿನ ಸಂತೋಷಕ್ಕೆ ಕಾರಣವಾಗುವುದು.

ಪಂ.ಮಧೂಪ್ ಮುದ್ಗಲ್‌ಗೆ ರಾಜಗುರು ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಧಾರವಾಡ: ಸ್ವರ ಸಾಮ್ರಾಟ ಪಂಡಿತ್ ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನೀಡುವ ರಾಷ್ಟ್ರೀಯ ಪ್ರಶಸ್ತಿಗೆ ಹಿಂದೂಸ್ತಾನಿ ಸಂಗೀತದ ಹಿರಿಯ ಗಾಯಕ ದೆಹಲಿಯ ಪಂ.ಮಧೂಪ್ ಮುದ್ಗಲ್ ಅವರನ್ನು ಆಯ್ಕೆ ಮಾಡಲಾಗಿದೆ.ಪ್ರಶಸ್ತಿಯು ₹ 1ಲಕ್ಷ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. ಇದರೊಂದಿಗೆ ಬೆಂಗಳೂರಿನ ಹಾರ್ಮೋನಿಯಂ ವಾದಕ ಸತೀಶ್ ಕೊಳ್ಳಿ ಹಾಗೂ ಪುಣೆಯ ಗಾಯಕ ವಿರಾಜ್ ಜೋಶಿ 'ಯುವ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹ 25ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

ಪಂ.ರಾಜಗುರು ಅವರ 102ನೇ ಜನ್ಮದಿನಾಚರಣೆ ಅಂಗವಾಗಿ ಇದೇ 24ರಂದು ಸಂಜೆ 5.30ಕ್ಕೆ ನಗರದ ಸೃಜನಾ ರಂಗಮಂದಿರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಇದರೊಂದಿಗೆ ಪ್ರಶಸ್ತಿ ಪುರಸ್ಕೃತರ ಸಂಗೀತ ಕಛೇರಿಯನ್ನೂ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಪಂ. ಮಧೂಪ್ ಮುದ್ಗಲ್ ಸತೀಶ್ ಕೊಳ್ಳಿ ವಿರಾಜ್ ಜೋಶಿ

'ವಸತಿ ಗೃಹ ಶೀಘ್ರ ಪೂರ್ಣಗೊಳಿಸಿ'

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿರುಮಲದಲ್ಲಿ ಕರ್ನಾಟಕ ಸರ್ಕಾರದ ವತಿಯಿಂದ ನಿರ್ಮಾಣವಾಗುತ್ತಿರುವ ನೂತನ ವಸತಿ ಗೃಹ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಶುಕ್ರವಾರ ಪರಿಶೀಲನೆ ಮಾಡಿದರು.

ಕಟ್ಟಡದ ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸಿ, ಭಕ್ತಾದಿಗಳಿಗೆ ವಸತಿ ಗೃಹ ಬಳಕೆಗೆ ಅನುಕೂಲ ಮಾಡಿಕೊಡುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಕಂದಾಯ ಸಚಿವ ಆರ್. ಅಶೋಕ, ಬಿಡಿಎ ಅಧ್ಯಕ್ಷರೂ ಆಗಿರುವ ಟಿಟಿಡಿ ಟ್ರಸ್ಟ್ ಸದಸ್ಯ ಎಸ್.ಆರ್.ವಿಶ್ವನಾಥ್ ಇದ್ದರು.

ನೇಮಕಾತಿಗಳಲ್ಲಿ ಅಕ್ರಮ ● ಒಕ್ಕೂಟದ ವತಿಯಿಂದ ಪ್ರತಿಭಟನೆ

ರಾಜಭವನ ಮುತ್ತಿಗೆಗೆ ಅಭ್ಯರ್ಥಿಗಳ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ನೇಮಕಾತಿಯಲ್ಲಿ ಅಕ್ರಮ ಹಾಗೂ ಭ್ರಷ್ಟಾಚಾರ ಹೆಚ್ಚಾಗಿದ್ದು, ಲಕ್ಷಾಂತರ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿದೆ' ಎಂದು ಆರೋಪಿಸಿ ರಾಜಭವನಕ್ಕೆ ಮುತ್ತಿಗೆ ಹಾಕಲು ಹೊರಟಿದ್ದ ರಾಜ್ಯ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳ ಒಕ್ಕೂಟದ 35 ಪದಾಧಿಕಾರಿಗಳನ್ನು ಪೊಲೀಸರು ಶುಕ್ರವಾರ ವಶಕ್ಕೆ ಪಡೆದರು. ಮುಚ್ಚಳಿಕೆ ಬರೆಸಿಕೊಂಡು ಸಂಜೆ ಬಿಡುಗಡೆ ಮಾಡಿದರು.

ರಾಜಭವನ ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲು ಹಲವು ದಿನಗಳ ಹಿಂದೆಯೇ ತೀರ್ಮಾನಿಸಿದ್ದ ಪದಾಧಿಕಾರಿಗಳು, ಶುಕ್ರವಾರ ಬೆಳಿಗ್ಗೆಯೇ ಸ್ವಾತಂತ್ರ್ಯ ಉದ್ಯಾನ ಬಳಿ ಬರಲು ಅಭ್ಯರ್ಥಿಗಳಿಗೆ ತಿಳಿಸಿದ್ದರು. ಆದರೆ, ಉಪ್ಪಾರಪೇಟೆ ಠಾಣೆ ವ್ಯಾಪ್ತಿಯಲ್ಲಿರುವ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲು ಪೊಲೀಸರು ಅನುಮತಿ ನೀಡಿರಲಿಲ್ಲ.

ಪೊಲೀಸರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದ ಪದಾಧಿಕಾರಿಗಳು, ಉದ್ಯಾನದಲ್ಲಿ ಪ್ರತಿಭಟನೆ ಮಾಡುವುದಾಗಿ ಘೋಷಿಸಿದ್ದರು. ಈ ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು, ಶುಕ್ರವಾರ ಬೆಳಿಗ್ಗೆಯೇ ಕೆಲ ಪದಾಧಿಕಾರಿಗಳನ್ನು ವಶಕ್ಕೆ ಪಡೆದು ಠಾಣೆಯಲ್ಲಿ ಕೂರಿಸಿದ್ದರು. ಹಂಪಿನಗರದಲ್ಲೂ ಕೆಲ ಅಭ್ಯರ್ಥಿಗಳನ್ನು ವಶಕ್ಕೆ ಪಡೆಯಲಾಗಿತ್ತು. ಪೊಲೀಸರ ಈ ವರ್ತನೆಗೆ ಪದಾಧಿಕಾರಿಗಳು ಆಕ್ರೋಶ ವ್ಯಕ್ತಪಡಿಸಿದರು.

ಉದ್ಯಾನದಲ್ಲಿ ಪ್ರತಿಭಟನೆ: ಕೆಲ ಪದಾಧಿಕಾರಿಗಳನ್ನು ಪೊಲೀಸರು ವಶಕ್ಕೆ ಪಡೆದರೂ ಹೆದರದ ಅಭ್ಯರ್ಥಿಗಳು, ನಿಗದಿಯಂತೆ ಸ್ವಾತಂತ್ರ್ಯ ಉದ್ಯಾನಕ್ಕೆ ಬಂದು ಪ್ರತಿಭಟನೆ ಆರಂಭಿಸಿದರು.

'ಕೆಪಿಎಸ್‌ಸಿ, ಕೆಎಸ್‌ಪಿ ಹಾಗೂ ಕೆಇಎ ಸೇರಿದಂತೆ ಹಲವು ಸಂಸ್ಥೆಗಳ ಮೂಲಕ ನಡೆಯುತ್ತಿರುವ ನೇಮಕಾತಿಗಳು ಪಾರದರ್ಶಕವಾಗಿ ನಡೆಯುತ್ತಿಲ್ಲ. ಈ ಸಂಸ್ಥೆಗಳು ಅಸಮರ್ಥವಾಗಿ ಕಾರ್ಯನಿರ್ವಹಿಸುತ್ತಿವೆ. ಸಹಾಯಕ ಪ್ರಾಧ್ಯಾಪಕರು, ಕೆಪಿಟಿಸಿಎಲ್, ಪಿಎಸ್‌ಐ ಸೇರಿದಂತೆ ಹಲವು ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿರುವುದು ಈಗಾಗಲೇ ಬಯಲಾಗಿದೆ' ಎಂದು ಅಭ್ಯರ್ಥಿಗಳು ಆರೋಪಿಸಿದರು.

'ಕೆಪಿಎಸ್‌ಸಿ ನೇಮಕಾತಿ ಪ್ರಕ್ರಿಯೆಯಲ್ಲಿ ಸುಧಾರಣೆ ತರಲೆಂದು ಯುಪಿಎಸ್‌ಸಿ ನಿವೃತ್ತ ಅಧ್ಯಕ್ಷ ಪಿ.ಸಿ. ಹೋಟಾ ನೇತೃತ್ವದ ಸಮಿತಿ ನೀಡಿದ್ದ ಶಿಫಾರಸುಗಳನ್ನು ಜಾರಿಗೆ ತರಬೇಕು. ಶಿಕ್ಷಣ ಸಚಿವರ ಅಧೀನದ ಕೆಇಎ ಮುಚ್ಚಬೇಕು. ಅದರ ಜವಾಬ್ದಾರಿಗಳನ್ನು ಕೆಪಿಎಸ್‌ಸಿಗೆ ವಹಿಸಬೇಕು' ಎಂದೂ ಆಗ್ರಹಿಸಿದರು.

ಪ್ರತಿಭಟನೆ ಬಳಿಕ ಅಭ್ಯರ್ಥಿಗಳು, ರಾಜಭವನಕ್ಕೆ ಮುತ್ತಿಗೆ ಹಾಕಲು ಜಾಥಾದಲ್ಲಿ ಹೊರಟಿದ್ದರು. ಮಾರ್ಗಮಧ್ಯೆಯೇ ಅವರನ್ನು ತಡೆದ ಪೊಲೀಸರು, ವಶಕ್ಕೆ ಪಡೆದು ವಾಹನಗಳಲ್ಲಿ ಕರೆದೊಯ್ದರು.



ಕರ್ನಾಟಕ ರಾಜ್ಯ ಸ್ಪರ್ಧಾತ್ಮಕ ಪರೀಕ್ಷೆ ಅಭ್ಯರ್ಥಿಗಳ ಒಕ್ಕೂಟದ ಸದಸ್ಯರು ಶುಕ್ರವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಮಾಡಿದರು –ಪ್ರಜಾವಾಣಿ ಚಿತ್ರ

'ಕನ್ನಡ ಶಾಲೆ ಉಳಿವಿಗೆ ಕಾನೂನು ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿಕ್ಕಪೇಟೆ ಸರ್ಕಾರಿ ಪ್ರೌಢಶಾಲೆಯ ಜಾಗವನ್ನು ಜಿಲ್ಲಾಡಳಿತ ಮಾರಾಟಕ್ಕೆ ಇಟ್ಟಿರುವ ಕ್ರಮ ಅಕ್ಷಮ್ಯ. ಕನ್ನಡ ಶಾಲೆಗಳ ಉಳಿವಿಗೆ ನ್ಯಾಯಾಲಯದ ಮೆಟ್ಟಿಲು ಹತ್ತಲೂ ಸಿದ್ಧವಿದ್ದೇವೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

'ಕನ್ನಡ ಶಾಲೆಗಳನ್ನು ಉಳಿಸಿ ಕನ್ನಡ ಭಾಷೆಯನ್ನು ಬೆಳೆಸಬೇಕು ಎನ್ನುವ ಮೂಲ ಧ್ಯೇಯವನ್ನು ಹೊಂದಿರುವ ಪರಿಷತ್ತು, ಕನ್ನಡ ಶಾಲೆಗಳ ಮುಚ್ಚುವಿಕೆಯನ್ನು ಸಹಿಸುವುದಿಲ್ಲ. ಸರ್ಕಾರವು ಕನ್ನಡ ಶಾಲೆಗಳ ಬಗ್ಗೆ ಅಸಡ್ಡೆ ತೋರುವುದು ಆಗಾಗ ಕಂಡುಬರುತ್ತಿದೆ. ಚಿಕ್ಕಪೇಟೆಯಲ್ಲಿ 1945ರಲ್ಲಿ ಆರಂಭವಾದ ಸರ್ಕಾರಿ ಪ್ರೌಢಶಾಲೆಯನ್ನು ಶಿಕ್ಷಣ ಇಲಾಖೆಯ ತಕರಾರಿನ ಮಧ್ಯೆಯೂ ಜಿಲ್ಲಾಡಳಿತ ಮುಚ್ಚಲು ಹೊರಟಿರುವುದು ಅಕ್ಷಮ್ಯ. ಸ್ವಾತಂತ್ರ್ಯಪೂರ್ವದ ಶಾಲೆಯನ್ನು ಕಟ್ಟಡ ಸಮೇತ ಮಾರಾಟ ಮಾಡಿ, ಪರಭಾರೆ ಮಾಡಿದ್ದನ್ನು ಯಾವೊಬ್ಬ ಕನ್ನಡಿಗನೂ ಸಹಿಸಲು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.

'ಅವಶ್ಯ ಬಿದ್ದರೆ ಪರಿಷತ್ತು ಕನ್ನಡ ಶಾಲೆಗಳ ಉಳಿವಿಗಾಗಿ ನಿವೃತ್ತ ನ್ಯಾಯಾಧೀಶರ ಸಲಹೆ ಪಡೆದು ಕಾನೂನು ಹೋರಾಟ ನಡೆಸಲಿದೆ. ಕನ್ನಡವನ್ನು ಉಳಿಸಿ ಬೆಳೆಸಬೇಕಾದರೆ ಕನ್ನಡ ಶಾಲೆಗಳನ್ನು ಉಳಿಸಿಕೊಳ್ಳುವುದು ಮುಖ್ಯ. ಈ ಬಗ್ಗೆ ನ್ಯಾಯಾಲಯದ ಮೊರೆ ಹೋಗುವುದು ಅನಿವಾರ್ಯವಾಗಲಿದೆ' ಎಂದು ಎಚ್ಚರಿಸಿದ್ದಾರೆ.

ಶಿವಮೊಗ್ಗ ಸುಬ್ಬಣ್ಣ ಕುಟುಂಬಕ್ಕೆ ಪ್ರಧಾನಿ ಮೋದಿ ಸಾಂತ್ವನ

ಬೆಂಗಳೂರು: ಇತ್ತೀಚೆಗೆ ನಿಧನರಾದ ಗಾಯಕ ಶಿವಮೊಗ್ಗ ಸುಬ್ಬಣ್ಣ ಅವರ ಪತ್ನಿ ಶಾಂತಾ ಸುಬ್ಬಣ್ಣ ಅವರಿಗೆ ಪತ್ರ ಬರೆದಿರುವ ಪ್ರಧಾನಿ ನರೇಂದ್ರ ಮೋದಿ ಮತ್ತು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಸಾಂತ್ವನ ಹೇಳಿದ್ದಾರೆ.

'ಸುಬ್ಬಣ್ಣ ಅವರು ಕನ್ನಡ ಸಂಗೀತ ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿದ್ದರು. ಯುವ ಜನರನ್ನು ಕನ್ನಡ ಸಂಗೀತ ಲೋಕದ ಜತೆಗೆ ಬೆಸಯುವುದಕ್ಕೆ ಪೂರಕವಾಗಿ ಅವರು ಮಾಡಿರುವ ಕೆಲಸಗಳು ಸದಾ ಸ್ಮರಣೀಯ' ಎಂದು ಮೋದಿ ಅವರು ಆಗಸ್ಟ್ 16ರಂದು ಬರೆದಿರುವ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾಗಿದ್ದ ಕನ್ನಡದ ಖ್ಯಾತ ಗಾಯಕ ಶಿವಮೊಗ್ಗ ಸುಬ್ಬಣ್ಣ ಅವರ ನಿಧನದಿಂದ ಭಾರತದ ಸಂಗೀತ ಮತ್ತು ಕಲಾ ಕ್ಷೇತ್ರಗಳಿಗೆ ಅಪಾರ ನಷ್ಟವಾಗಿದೆ. ಕನ್ನಡ ಸಂಗೀತ ಲೋಕಕ್ಕೆ ನೀಡಿರುವ ಕೊಡುಗೆಗಳಿಂದಾಗಿಯೇ ಅವರು ಸದಾ ನೆನಪಿನಲ್ಲಿ ಉಳಿಯುತ್ತಾರೆ' ಎಂದು ಓಂ ಬಿರ್ಲಾ ಹೇಳಿದ್ದಾರೆ.

ಜಂಬೂ ಸವಾರಿ ಮೆರವಣಿಗೆ: ಕಲಾ ತಂಡಗಳಿಂದ ಅರ್ಜಿ

ಪ್ರಜಾವಾಣಿ ವಾರ್ತೆ

ಮೈಸೂರು: ನಾಡಹಬ್ಬ ದಸರೆಯ 'ಜಂಬೂ ಸವಾರಿ' ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ರಾಜ್ಯದ ಎಲ್ಲ ಜಿಲ್ಲೆಗಳ ಸಾಂಸ್ಕೃತಿಕ ಹಾಗೂ ಜಾನಪದ ಕಲಾ ತಂಡಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅ.5ರ ವಿಜಯದಶಮಿಯಂದು ಮೆರವಣಿಗೆ ನಡೆಯಲಿದ್ದು, ತಂಡದ ಭಾವಚಿತ್ರ, ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಸದಸ್ಯರ ವಿವರವಿರುವ ಅರ್ಜಿಯನ್ನು ಸೆ.10ರೊಳಗೆ 'ಉಪ ವಿಶೇಷಾಧಿಕಾರಿಗಳು, ದಸರಾ ಮೆರವಣಿಗೆ ಉಪಸಮಿತಿ ಹಾಗೂ ಪೊಲೀಸ್ ಆಯುಕ್ತರು, ಮೈಸೂರು ನಗರ' ಅಥವಾ 'ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು'– ಈ ವಿಳಾಸಕ್ಕೆ ಸಲ್ಲಿಸಬೇಕು.

ಅರ್ಜಿ ಸಲ್ಲಿಸಿದ ಕಲಾತಂಡಗಳ ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಘಟಕದಿಂದ ರಚಿಸಲಾದ ತಜ್ಞರ ಸಮಿತಿ ನಿರ್ಧರಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ ವಾರ್ತೆ

ಮೀರಾತಾಯಿ ಕೊಪ್ಪೀಕರ್



ಮುಧೋಳ (ಬಾಗಲಕೋಟೆ ಜಿಲ್ಲೆ): ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಪುರಸ್ಕೃತೆ, ಗಾಂಧಿವಾದಿ ಮೀರಾತಾಯಿ ಕೊಪ್ಪೀಕರ್ (96) ಅವರು ವಯೋಸಹಜ ಕಾಯಿಲೆಯಿಂದ ಇಲ್ಲಿನ ರುಕ್ಮಿಣಿ ವಾತ್ಸಲ್ಯಧಾಮದಲ್ಲಿ ಶುಕ್ರವಾರ ನಿಧನರಾದರು.

ಧಾರವಾಡದ ಖಾದಿಧಾರಿ ಶ್ರೀಪಾದರಾವ್ ಕೊಪ್ಪೀಕರ್ ಹಾಗೂ ಸುಮತಿಬಾಯಿ ಅವರ ಪುತ್ರಿಯಾಗಿದ್ದ ಮೀರಾತಾಯಿ 1928 ರಲ್ಲಿ ಜನಿಸಿದ್ದರು. ಮೂಲತಃ ಶ್ರೀಮಂತ ಕುಟುಂಬದವರಾದ ಅವರು, ಪುಣೆಯಲ್ಲಿಯೂ ಕೆಲ ವರ್ಷ ಇದ್ದು ನಂತರ ಮುಧೋಳಕ್ಕೆ ಬಂದು ಇಲ್ಲಿನ ರುಕ್ಮಿಣಿ ವಾತ್ಸಲ್ಯಧಾಮದಲ್ಲಿ 51 ವರ್ಷಗಳಿಂದ ವಾಸಮಾಡುತ್ತ ಹಲವು ಮಂದಿಗೆ ಆಶ್ರಯದಾತರಾಗಿದ್ದರು.

ಅವರಿಗೆ ರಾಜ್ಯೋತ್ಸವ, ಮಹಾತ್ಮಗಾಂಧಿ ಸೇವಾ ಪುರಸ್ಕಾರ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿದ್ದವು. ವಿಜಯಪುರ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಪುರಸ್ಕರಿಸಿತ್ತು.

ಗಾಂಧಿಯವರ ರಾಷ್ಟ್ರೀಯ ವಿಚಾರಗಳಿಗೆ ಚಿಕ್ಕಂದಿನಲ್ಲಿಯೇ ಆಕರ್ಷಿತರಾಗಿ, ಅವರ ತತ್ವ ಹಾಗೂ ಆದರ್ಶ ವಿಚಾರಗಳ ಪ್ರಚಾರಕ್ಕಾಗಿ ಅವಿವಾಹಿತರಾಗಿಯೇ ಉಳಿದು ತಮ್ಮ ಇಡೀ ಬದುಕನ್ನು ಮುಡುಪಾಗಿಟ್ಟರು. ಆಚಾರ್ಯ ವಿನೋಬಾ ಭಾವೆ ಅವರ ಸರ್ವೋದಯ ತತ್ವದ ಸ್ವದೇಶಿ ವಿಚಾರಧಾರೆಗಳನ್ನು ಅಕ್ಷರಶಃ ಅನುಷ್ಠಾನಗೊಳಿಸುವಲ್ಲಿ ತೊಡಗಿಸಿಕೊಂಡ ಸಾಧಕಿಯಾಗಿದ್ದರು. ಖಾದಿ, ಸಾವಯವ ಕೃಷಿಗೆ ಹೆಚ್ಚಿನ ಉತ್ತೇಜನವನ್ನು ನೀಡಿದ್ದರು.

ಅಂತ್ಯಸಂಸ್ಕಾರ ವಾತ್ಸಲ್ಯಧಾಮದ ಜಮೀನಿನಲ್ಲಿ ನೆರವೇರಿತು.



ಸಾಧಕರಿಗೆ ಅಕಾಡೆಮಿ ಪ್ರಶಸ್ತಿ ಗೌರವ...

ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಶುಕ್ರವಾರ ಆಯೋಜಿಸಿದ್ದ ಸಮಾರಂಭದಲ್ಲಿ ಕಲಾವಿದರಾದ ಸುಭಾಶ್ ಚಂದ್ರ ಕೆಂಬಾವಿ, ಅನಿರುದ್ಧ ಜೋಶಿ, ಸ್ಮಿತಾ ಕಾರಿಯಪ್ಪ ಮತ್ತು ಬಿ. ದೇವರಾಜ್ (ಫಲಕ ಹಿಡಿದವರು) '2021ನೇ ಸಾಲಿನ ಗೌರವ ಪ್ರಶಸ್ತಿ' ಸ್ವೀಕರಿಸಿದರು. (ಕುಳಿತವರು ಎಡದಿಂದ) ಅಕಾಡೆಮಿ ರಿಜಿಸ್ಟ್ರಾರ್ ಆರ್. ಚಂದ್ರಶೇಖರ, ವಿಮರ್ಶಕ ಎಸ್. ದಿವಾಕರ್, ಕಲಾವಿದ ಆರ್.ಬಿ. ಭಾಸ್ಕರನ್, ಅಕಾಡೆಮಿ ಅಧ್ಯಕ್ಷ ಡಿ. ಮಹೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ್ ಹಾಗೂ ವಾರ್ಷಿಕ 'ಕಲಾಪ್ರದರ್ಶನ ಬಹುಮಾನ' ಪುರಸ್ಕೃತ ಕಲಾವಿದರಾದ (ನಿಂತವರು ಎಡದಿಂದ) ಕೆ.ವಿ. ಕಾಳೆ, ರಮೇಶ್ ಪರಸಪ್ಪ ಗಾರವಾಡ, ಎಚ್.ಎಂ. ವಿಶ್ವನಾಥ್, ಕೆ. ಸಂಗೀತಾ, ಮಡಿವಾಳಪ್ಪ ಎಸ್. ಲಂಗೋಟಿ, ರಾಮಕೃಷ್ಣ ನಾಯಕ್, ಸುನೀಲ್ ಮಿಶ್ರಾ, ಶಿವಯೋಗಿ ಅಣ್ಣನವರ, ಎನ್. ನರಸಿಂಹಮೂರ್ತಿ, ಕೆ. ವಿಶಾಲ್, ಲಕ್ಷ್ಮಣ ಕಬಾಡಿ, ಆರ್. ಪವನ್ ಕುಮಾರ್, ಅಂಬಾರಾಯ ಚಿನ್ಮಳ್ಳಿ, ಜಿ.ಎಸ್.ಬಿ. ಅಗ್ನಿಹೋತ್ರಿ ಮತ್ತು ಬಿ. ನವೀನ್ ಕುಮಾರ್ ಇದ್ದಾರೆ — ಪ್ರಜಾವಾಣಿ ಚಿತ್ರ

ಪ್ರಸ್ತಾವನೆ ಸಲ್ಲಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ

ಕಾಳಿ, ಕೃಷ್ಣಾ, ಕಾವೇರಿ ಜಲಮಾರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಳಿ, ಕೃಷ್ಣಾ ಮತ್ತು ಕಾವೇರಿ ನದಿ ಪ್ರದೇಶಗಳಲ್ಲಿ ಜಲಮಾರ್ಗ ರೂಪಿಸಿ, ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಪ್ರಸ್ತಾವನೆ ಸಲ್ಲಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದ್ದಾರೆ.

ಗುರುವಾರ ಪ್ರವಾಸೋದ್ಯಮ ಇಲಾಖೆಯ ಪ್ರಗತಿ ಪರಿಶೀಲನೆ ಸಭೆಯಲ್ಲಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮೈಸೂರು– ಬೇಲೂರು– ಹಳೇಬೀಡು ಮತ್ತು ಹಂಪಿ– ಬಾದಾಮಿ– ಐಹೊಳೆ– ಪಟ್ಟದಕಲ್ಲು ಪ್ರವಾಸೋದ್ಯಮ ಸರ್ಕ್ಯೂಟ್‌ಗಳನ್ನು ತ್ವರಿತಗತಿಯಲ್ಲಿ ಅಭಿವೃದ್ಧಿಪಡಿಸಬೇಕು. ಮೈಸೂರು ಸರ್ಕ್ಯೂಟ್ ದಸರಾಗೆ ಹಾಗೂ ಹಂಪಿ ಸರ್ಕ್ಯೂಟ್ ದೀಪಾವಳಿ ವೇಳೆಗೆ ಉದ್ಘಾಟನೆಗೆ ಸಿದ್ಧವಾಗಬೇಕು ಎಂದು ಗಡುವು ನಿಗದಿ ಮಾಡಿದ್ದಾರೆ.

> **ಮುಂದಿನ ದಿನಗಳಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಬೇಕು. ಈ ದೃಷ್ಟಿಯಿಂದ ಪರಿಣಾಮಕಾರಿ ಪ್ರಚಾರ ಕಾರ್ಯ ಹಾಗೂ ಪ್ರವಾಸಿ ತಾಣಗಳಲ್ಲಿ ಅಗತ್ಯ ಸೌಲಭ್ಯ ಕಲ್ಪಿಸಲು ಆದ್ಯತೆ ನೀಡಬೇಕು**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ರಾಜ್ಯದ 10 ರಿಂದ 12 ಪ್ರಮುಖ ಕೆರೆಗಳ ಬಳಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ ಚಾರಣಕ್ಕೆ ಉತ್ತೇಜನ ನೀಡುವ ಮೂಲಕ ವಿದೇಶಿ ಮತ್ತು ಸ್ಥಳೀಯ ಪ್ರವಾಸಿಗರನ್ನೂ ಆಕರ್ಷಿಸಬೇಕು. ಹಿಡ್ಕಲ್, ಕಬಿನಿ, ಗೊರೂರು ಅಣೆಕಟ್ಟು ಪ್ರದೇಶದಲ್ಲಿ ಉದ್ಯಾನವನಗಳ ಅಭಿವೃದ್ಧಿ ಕೈಗೊಳ್ಳುವಂತೆಯೂ ಸೂಚಿಸಿದರು.

ಸ್ಮಾರಕಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಈ ಆಯವ್ಯಯದಲ್ಲಿ ಘೋಷಿಸಿರುವ ಸ್ಮಾರಕಗಳನ್ನು ದತ್ತು ಪಡೆಯುವ ಯೋಜನೆಗೆ ಮಾರ್ಗಸೂಚಿ ಹೊರಡಿಸಲಾಗಿದೆ. ಸ್ಮಾರಕಗಳ ವಿವರ ಹಾಗೂ ತಗಲುವ ವೆಚ್ಚದ ಪಟ್ಟಿ ಸಿದ್ಧಪಡಿಸಿಕೊಂಡು ವೆಬ್‌ಸೈಟ್ ರೂಪಿಸಬೇಕು ಎಂದು ಬೊಮ್ಮಾಯಿ ಹೇಳಿದರು.

ಬಾದಾಮಿಯ ಗುಹೆಗಳನ್ನು ಇನ್ನಷ್ಟು ಆಕರ್ಷಕವಾಗಿಸುವ ಕುರಿತು ಹಾಗೂ ಅಲ್ಲಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸುವ ಕುರಿತು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯೊಂದಿಗೆ ಸಭೆ ನಡೆಸಿ ಚರ್ಚಿಸಲಾಗುವುದು. ಕೇಂದ್ರದ ಪರ್ವತಮಾಲಾ ಮತ್ತು ರಾಜ್ಯ ಸರ್ಕಾರದ ಯೋಜನೆಗಳಡಿ ನಂದಿಬೆಟ್ಟ, ಯಾಣ, ಅಂಜನಾದ್ರಿ ಬೆಟ್ಟ, ಮುಳ್ಳಯ್ಯನಗಿರಿ, ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ಬೆಟ್ಟದಲ್ಲಿ ರೋಪ್‌ವೇ ನಿರ್ಮಿಸುವ ಕುರಿತು ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ಜತೆ ಸಭೆ ನಡೆಸಿ ಚರ್ಚಿಸಿ ಕ್ರಮವಹಿಸಲಾಗುವುದು ಎಂದರು.

ರಾಜ್ಯದ ಕಡಲತೀರದಲ್ಲಿ ಪರಿಸರ ಸ್ನೇಹಿ ಪ್ರವಾಸೋದ್ಯಮ ಉತ್ತೇಜಿಸಲು ಸಿ.ಆರ್.ಝೆಡ್ ಮಾನದಂಡಗಳನ್ನು ಸಡಿಲಗೊಳಿಸಲು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿ ಅನುಮೋದನೆ ಪಡೆಯಲು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದರಿಂದ ಕರಾವಳಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಅನುಕೂಲವಾಗಲಿದೆ ಎಂದರು.

ಹಾವೇರಿ ಜಿಲ್ಲೆಯ ನವಿಲು ಧಾಮ, ಬಾಡ ಅರಮನೆ, ಶಿಲಾ ಉದ್ಯಾನ, ಜನಪದ ವಿ.ವಿ ವಸ್ತು-ಸಂಗ್ರಹಾಲಯ, ಶಿಶುನಾಳ ಮತ್ತು ಸವಣೂರನ್ನು ಒಳಗೊಂಡ ಪ್ರವಾಸಿ ಸರ್ಕ್ಯೂಟ್ ಆರಂಭಿಸಲು ಬೊಮ್ಮಾಯಿ ಸೂಚಿಸಿದರು.

ಸಭೆಯಲ್ಲಿ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್, ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಕಾ.ಪು.ಸಿದ್ದಲಿಂಗಸ್ವಾಮಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಇದ್ದರು.

ವರ್ಷಾಂತ್ಯದೊಳಗೆ 50 ಸಾವಿರ ನಿವೇಶನ ಹಂಚಿಕೆ: ಸೋಮಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಕರ್ನಾಟಕ ಗೃಹ ಮಂಡಳಿ (ಕೆಎಚ್‌ಬಿ) ಕೈಗೆತ್ತಿಕೊಂಡಿರುವ 18 ವಸತಿ ಯೋಜನೆಗಳ ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ತೊಡಕುಗಳ ನಿವಾರಣೆಯಾಗಿದ್ದು, ವರ್ಷಾಂತ್ಯದೊಳಗೆ ಮಂಡಳಿಯಿಂದ 50 ಸಾವಿರ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಬಾಕಿ ಇದ್ದ 103 ಪ್ರಕರಣಗಳು ಇತ್ಯರ್ಥಗೊಂಡಿವೆ. 600 ಎಕರೆಯಷ್ಟು ಜಮೀನು ಮಂಡಳಿಯ ಸ್ವಾಧೀನಕ್ಕೆ ಬಂದಿದ್ದು, ಬಡಾವಣೆಗಳ ನಿರ್ಮಾಣಕ್ಕೆ ಇದ್ದ ತೊಡಕು ನಿವಾರಣೆಯಾಗಿದೆ' ಎಂದರು.

ಅಭಿವೃದ್ಧಿಪಡಿಸಿದ ಜಮೀನಿನಲ್ಲಿ ಶೇಕಡ 50ರಷ್ಟನ್ನು ಭೂಮಾಲೀಕರಿಗೆ ಪರಿಹಾರ ರೂಪದಲ್ಲಿ ನೀಡುವ ತೀರ್ಮಾನ ಕೈಗೊಳ್ಳಲಾಗಿದೆ. ಇದರಿಂದ ರೈತರಿಗೂ ಲಾಭ ಆಗಲಿದೆ. ಬೆಂಗಳೂರು, ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು, ಗದಗ, ಹುಬ್ಬಳ್ಳಿ- ಧಾರವಾಡ, ಬಳ್ಳಾರಿ, ದಾವಣಗೆರೆ, ಮೈಸೂರು, ಬೆಳಗಾವಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಕೆಎಚ್‌ಬಿ ವಸತಿ ಯೋಜನೆಗಳು ಶೀಘ್ರ ಪೂರ್ಣಗೊಳ್ಳಲಿವೆ ಎಂದು ತಿಳಿಸಿದರು.

ಕೆಎಚ್‌ಬಿ ಬಡಾವಣೆಗಳಲ್ಲಿನ ನಿವೇಶನ ಹಂಚಿಕೆಯನ್ನು ಅತ್ಯಂತ ಪಾರದರ್ಶಕವಾಗಿ ಮಾಡಲಾಗುವುದು. ಬೆಂಗಳೂರಿನ ಸೂರ್ಯನಗರ ಎರಡು ಮತ್ತು ಮೂರನೇ ಹಂತ, ಜಿಗಣಿ ಹಾಗೂ ನೆಲಮಂಗಲ ಬಡಾವಣೆಗಳಲ್ಲೂ ನಿವೇಶನ ಹಂಚಿಕೆ ಮಾಡಲಾಗುವುದು. ಸ್ವಾತಂತ್ರ್ಯ ಯೋಧರು, ವಿಧವೆಯರು, ಅಂಗವಿಕಲರು ಮತ್ತಿತರರಿಗೆ ಶೇ 5ರಷ್ಟು ನಿವೇಶನಗಳನ್ನು ವಿವೇಚನಾ ಕೋಟಾದಡಿ ಹಂಚಲಾಗುವುದು ಎಂದರು.

ಬೆಂಗಳೂರಿನಲ್ಲಿ ಮುಖ್ಯಮಂತ್ರಿಯವರ ಒಂದು ಲಕ್ಷ ಮನೆ ಯೋಜನೆಯಡಿ 40 ಸಾವಿರ ಮನೆಗಳ ಹಂಚಿಕೆಯ ಗುರಿ ಇದೆ. ಮೊದಲ ಹಂತದಲ್ಲಿ ಎರಡು ಸಾವಿರ ಮನೆ ಹಂಚಿಕೆ ಮಾಡಲು ಶೀಘ್ರದಲ್ಲಿ ಸಭೆ ನಡೆಸಲಾಗುವುದು. ಈ ಸರ್ಕಾರದ ಅವಧಿಯಲ್ಲೇ ಎಲ್ಲ ಮನೆಗಳನ್ನೂ ಹಂಚಿಕೆ ಮಾಡಲಾಗುವುದು ಎಂದು ತಿಳಿಸಿದರು.

ಸಮೀರ್ ವಾಂಖೆಡೆಗೆ ಕೊಲೆ ಬೆದರಿಕೆ

ಮುಂಬೈ (ಪಿಟಿಐ): ಭಾರತೀಯ ಕಂದಾಯ ಸೇವೆ (ಐಆರ್‌ಎಸ್) ಅಧಿಕಾರಿ ಸಮೀರ್ ವಾಂಖೆಡೆ ಅವರಿಗೆ ಅನಾಮಧೇಯ ವ್ಯಕ್ತಿ ಟ್ವಿಟರ್ ಮೂಲಕ ಕೊಲೆ ಬೆದರಿಕೆ ಹಾಕಿದ್ದಾನೆ.

ಗೋರೆಗಾಂವ್ ಪೊಲೀಸ್ ಠಾಣೆಗೆ ಅವರು ದೂರು ನೀಡಿದ್ದಾರೆ.

ಜಾತಿ ಪ್ರಮಾಣಪತ್ರ ವಿಚಾರದಲ್ಲಿ ತಮ್ಮ ತೇಜೋವಧೆಗೆ ಯತ್ನಿಸಿದ್ದಾರೆ ಎಂದು ಆರೋಪಿಸಿ ವಾಂಖೆಡೆ ಅವರು ಮಾಜಿ ಸಚಿವ ನವಾಬ್ ಮಲಿಕ್ ವಿರುದ್ಧ ದೂರು ಸಲ್ಲಿಸಿದ ಒಂದು ದಿನದ ಬಳಿಕ ಅವರಿಗೆ ಈ ಬೆದರಿಕೆ ಹಾಕಲಾಗಿದೆ.

ಮುಂಬೈಯಲ್ಲಿ ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಪತ್ತೆ ಪ್ರಕರಣ ತನಿಖೆ ನಡೆಸಿದ್ದ ತಂಡದಲ್ಲಿ ವಾಂಖೆಡೆ ಸಹ ಇದ್ದರು. ಸುಳ್ಳು ಜಾತಿ ಪತ್ರ ಸಲ್ಲಿಸಿದ ಆರೋಪದಲ್ಲಿ ಇವರಿಗೆ 'ಕ್ಲೀನ್‌ಚಿಟ್' ದೊರೆತಿದೆ.

ಬೆಚ್ಚಿಬಿದ್ದ ನಕ್ಸಲ್ ನಿಗ್ರಹ ಪಡೆ; ಎಫ್‌ಐಆರ್ ದಾಖಲು

ಐಟಿಬಿಪಿ: 2 ಎಕೆ –47 ರೈಫಲ್ ಕಳವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಹಾಲಭಾವಿಯಲ್ಲಿರುವ ಇಂಡೊ ಟಿಬೆಟನ್ ಗಡಿ ಪೊಲೀಸ್ (ಐಟಿಬಿಪಿ) ಕ್ಯಾಂಪಿನಿಂದ ಬುಧವಾರ ರಾತ್ರಿ ಎರಡು ಎಕೆ-47 ರೈಫಲ್‌ಗಳು ಕಳವಾಗಿವೆ.

ಮಧುರೈನ 45ನೇ ಬೆಟಾಲಿಯನ್‌ನಿಂದ ಇಲ್ಲಿನ ಕ್ಯಾಂಪಿಗೆ ಎಂಟು ವಾರಗಳವರೆಗೆ ನಕ್ಸಲ್ ನಿಗ್ರಹ ತರಬೇತಿಗಾಗಿ ಬಂದಿರುವ ರಾಜೇಶ ಕುಮಾರ್ ಹಾಗೂ ಸಂದೀಪ್ ಮೀನಾ ಅವರಿಗೆ ನೀಡಿದ್ದ ರೈಫಲ್‌ಗಳನ್ನು ಕಳ್ಳತನ ಮಾಡಲಾಗಿದೆ.

ಐಟಿಬಿಪಿಯು ಜುಲೈ 29ರಿಂದ ಇಲ್ಲಿ ತರಬೇತಿ ಶಿಬಿರ ನಡೆಸುತ್ತಿದೆ. ಆಗಸ್ಟ್ 17ರಂದು ರಾತ್ರಿ ಈ ಇಬ್ಬರೂ ಸಿಬ್ಬಂದಿ ಬ್ಯಾರಕ್‌ನ ಮೂರನೇ ಮಹಡಿಯಲ್ಲಿ ಈ ರೈಫಲ್‌ಗಳನ್ನು ಇಟ್ಟು ಮಲಗಿದ್ದಾಗ ಕಳವು ಮಾಡಲಾಗಿದೆ ಎಂದು ಕಾಕತಿ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಧಾವಿಸಿರುವ ಹಿರಿಯ ಅಧಿಕಾರಿಗಳು ಇದರಿಂದ ಬೆಚ್ಚಿಬಿದ್ದಿದ್ದಾರೆ. ಬಿಗಿ ಭದ್ರತೆಯ ನಡುವೆಯೂ ಒಳನುಗ್ಗಿದ ಕಳ್ಳರು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಕದ್ದೊಯ್ದಿರುವುದು ಅಚ್ಚರಿ ಮೂಡಿಸಿದೆ.

ಗುರುವಾರ ತಡರಾತ್ರಿಯೇ ಕಾಕತಿ ಪೊಲೀಸರು ವಿಶೇಷ ತಂಡ ರಚಿಸಿಕೊಂಡು ಶೋಧ ಆರಂಭಿಸಿದ್ದಾರೆ.

ಡಿವೈಎಸ್ಪಿ (ಅಪರಾಧ) ಪಿ.ವಿ. ಸ್ನೇಹಾ, ಎಸಿಪಿ ಎಸ್.ವಿ. ಗಿರೀಶ, ಇನ್‌ಸ್ಪೆಕ್ಟರ್ ಐ.ಎಸ್. ಗುರುನಾಥ ಅವರು ಶೋಧನಾ ತಂಡದ ನೇತೃತ್ವ ವಹಿಸಿದ್ದಾರೆ.

ಐಟಿಬಿಪಿ ಅಧಿಕಾರಿಗಳು ಶಸ್ತ್ರಾಸ್ತ್ರ ಕಾಯ್ದೆಯ ಅಡಿ ಎಫ್‌ಐಆರ್ ದಾಖಲಿಸಿದ್ದಾರೆ.

'ಅತ್ಯಾಚಾರಿಗಳಿಗೆ ಜಾತಿಯೆಂಬುದಿಲ್ಲ'

ಅಹಮದಾಬಾದ್ (ಪಿಟಿಐ): ಬಿಲ್ಕಿಸ್ ಬಾನು ಮೇಲೆ ಅತ್ಯಾಚಾರ ಎಸಗಿದವರು ಬ್ರಾಹ್ಮಣರಾಗಿದ್ದು, ಅವರೆಲ್ಲರೂ ಉತ್ತಮ ಸಂಸ್ಕಾರವಂತರು ಎಂದಿದ್ದ ಗೋಧ್ರಾ ಶಾಸಕ ಸಿ.ಕೆ. ರವುಲಜಿ ಇದೀಗ ತಮ್ಮ ರಾಗ ಬದಲಿಸಿದ್ದು, 'ಅತ್ಯಾಚಾರಿಗಳಿಗೆ ಜಾತಿಯೆಂಬುದಿಲ್ಲ' ಎಂದು ನಂಬಿರುವುದಾಗಿ ಹೇಳಿಕೆ ನೀಡಿದ್ದಾರೆ.

'ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ. ವಿವಾದಿತ ಹೇಳಿಕೆ ನೀಡಿಲ್ಲ. ನನ್ನ ಹೇಳಿಕೆ ತಿರುಚಲಾಗಿದೆ. ನಾವು ನ್ಯಾಯಾಲಯದ ತೀರ್ಪನ್ನು ಗೌರವಿಸಬೇಕು' ಎಂದು ಸ್ಪಷ್ಟನೆ ನೀಡಿದ್ದಾರೆ.

ಅತ್ಯಾಚಾರಿಗಳ ಬಿಡುಗಡೆ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ರಚಿಸಲಾಗಿದ್ದ ಸಮಿತಿಯಲ್ಲಿ ರವುಲಜಿ ಇದ್ದರು.

ವಿಹಾರ ನೌಕೆಯಲ್ಲಿ ಶಸ್ತ್ರಾಸ್ತ್ರ: ದೂರು ದಾಖಲು

ಮುಂಬೈ (ಪಿಟಿಐ): ಇಲ್ಲಿಗೆ ಸಮೀಪದ ರಾಯಗಢ ಕರಾವಳಿ ಪ್ರದೇಶದಲ್ಲಿ 16 ಮೀಟರ್ ಉದ್ದದ ವಿಹಾರ ನೌಕೆಯಲ್ಲಿ ಶಸ್ತ್ರಾಸ್ತ್ರಗಳು ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳವು (ಎಟಿಎಸ್) ಅಪರಿಚಿತ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಶಸ್ತ್ರಾಸ್ತ ಕಾಯ್ದೆಯ ಸೆಕ್ಷನ್ 7 ಮತ್ತು 25ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಎಟಿಎಸ್‌ನ ನವಿ ಮುಂಬೈ ಘಟಕವು ಪ್ರಕರಣದ ತನಿಖೆ ಕೈಗೊಂಡಿದೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಮಹಾರಾಷ್ಟ್ರದಲ್ಲಿ ದಹಿ ಹಂಡಿ (ಶ್ರೀಕೃಷ್ಣ ಜನ್ಮಾಷ್ಟಮಿ) ಮತ್ತು ಗಣೇಶ ಹಬ್ಬಗಳ ಸಂದರ್ಭದಲ್ಲಿ ಶಸ್ತ್ರಾಸ್ತ್ರಗಳಿದ್ದ ವಿಹಾರ ನೌಕೆ ಪತ್ತೆಯಾಗಿರುವುದು ಆತಂಕಕ್ಕೆ ಕಾರಣವಾಗಿತ್ತು.

'ಈ ಪ್ರಕರಣದಲ್ಲಿ ಭಯೋತ್ಪಾದಕರ ನಂಟಿರುವುದು ಕಂಡು ಬಂದಿಲ್ಲ' ಎಂದು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಹೇಳಿದ್ದಾರೆ.

ಫ್ಲೆಕ್ಸ್‌ನಲ್ಲಿ ಗೋಡ್ಸೆ ಚಿತ್ರ: ಮೂವರು ವಶಕ್ಕೆ

ಪ್ರಜಾವಾಣಿ ವಾರ್ತೆ

ಮಧುಗಿರಿ: ಪಟ್ಟಣದಲ್ಲಿ ಸ್ವಾತಂತ್ರ್ಯ ದಿನಾಚರಣೆ ಸಮಯದಲ್ಲಿ ಅಳವಡಿಸಿದ್ದ ಫ್ಲೆಕ್ಸ್‌ನಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಜತೆಗೆ ಗಾಂಧೀಜಿ ಹಂತಕ ನಾಥೂರಾಮ್ ಗೋಡ್ಸೆ ಫೋಟೊ ಹಾಕಿ ಸಂಭ್ರಮಾಚರಣೆ ನಡೆಸಿ ವಿಕೃತಿ ಮೆರೆದಿದ್ದ ಮೂವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಪಟ್ಟಣದ ದಂಡಿನ ಮಾರಮ್ಮ ದೇವಸ್ಥಾನ ಸಮೀಪದ ಡಿ.ಎಂ. ಬಡಾವಣೆ ನಿವಾಸಿಗಳಾದ ರಾಮಪ್ಪ, ಮುದ್ದುಕೃಷ್ಣ, ಲಕ್ಷ್ಮಣ ಎಂಬುವರು ಗೋಡ್ಸೆ ಫೋಟೊ ಹಾಕಿ ವಿಕೃತಿ ಮೆರೆದಿದ್ದರು.

ಆ. 15ರಂದು ಭಗತ್ ಸಿಂಗ್ 'ಯೂಥ್ ಅಸೋಸಿಯೇಷನ್' ಹೆಸರಿನಲ್ಲಿ ಹಾಕಿದ್ದ ಫ್ಲೆಕ್ಸ್‌ನಲ್ಲಿ 'ಡಿ.ಎಂ. ಬಾಯ್ಸ್' ಎಂದು ಬರೆದುಕೊಂಡು ಫ್ಲೆಕ್ಸ್ ಅಳವಡಿಸಿದ್ದರು. ಫ್ಲೆಕ್ಸ್‌ನಲ್ಲಿ ಗಾಂಧಿ ಫೋಟೊದ ಮೇಲ್ಭಾಗದಲ್ಲಿ ಗೋಡ್ಸೆ ಫೋಟೊವನ್ನು ದೊಡ್ಡದಾಗಿ ಹಾಕಿ ಸಂಭ್ರಮಿಸಿದ್ದರು.

ಮೂವರನ್ನು ತಹಶೀಲ್ದಾರ್ ಎದುರು ಹಾಜರುಪಡಿಸಲಾಯಿತು. 'ನಮಗೆ ಗೋಡ್ಸೆ ಯಾರು ಎಂಬುದೇ ಗೊತ್ತಿರಲಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಎಂದು ಹುಡುಕಿದಾಗ ಸಿಕ್ಕ ಫೋಟೊಗಳನ್ನು ಡೌನ್‌ಲೋಡ್ ಮಾಡಿಕೊಂಡು ಫ್ಲೆಕ್ಸ್ ಮಾಡಿಸಿ ಅಳವಡಿಸಿದ್ದೆವು. ತಪ್ಪಿನ ಅರಿವಾಗುತ್ತಿದ್ದಂತೆ ತಕ್ಷಣ ಫ್ಲೆಕ್ಸ್ ತೆರವುಗೊಳಿಸಿದ್ದೇವೆ. ಮುಂದಿನ ದಿನಗಳಲ್ಲಿ ಈ ರೀತಿಯಾಗದಂತೆ ಎಚ್ಚರವಹಿಸುತ್ತೇವೆ' ಎಂದು ತಹಶೀಲ್ದಾರ್ ಸುರೇಶ್ ಆಚಾರ್ ಅವರಿಗೆ ಮನವಿ ಮಾಡಿಕೊಂಡರು.

ಮುಂದಿನ ದಿನಗಳಲ್ಲಿ ಈ ರೀತಿ ಮಾಡಿದರೆ ₹5 ಲಕ್ಷ ದಂಡ ವಿಧಿಸುವುದಾಗಿ ಎಚ್ಚರಿಸಿ, ಮುಚ್ಚಳಿಕೆ ಪತ್ರ ಬರೆಸಿಕೊಂಡು ಬಿಟ್ಟು ಕಳುಹಿಸಿದ್ದಾರೆ.

ಸಿಸೋಡಿಯಾ ಮನೆಯಲ್ಲಿ ಸಿಬಿಐ ಕಾರ್ಯಾಚರಣೆ: ಬಿಜೆಪಿ, ಎಎಪಿ ಮುಖಂಡರ ನಡುವೆ ವಾಕ್ಸಮರ

‘ಎಎಪಿ ಸಾಧನೆಯೇ ಶೋಧಕ್ಕೆ ಕಾರಣ’

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರಿಗೆ ಶಿಕ್ಷಣ ಕ್ಷೇತ್ರದ ಸುಧಾರಣೆಗಾಗಿ ಜಾಗತಿಕ ಮಟ್ಟದಲ್ಲಿ ಹೊಗಳಿಕೆ ವ್ಯಕ್ತವಾದ ದಿನವೇ ಸಿಬಿಐ ಕೂಡ ಅವರ ವಿರುದ್ಧ ಕ್ರಮಕ್ಕೆ ಮುಂದಾಗಿದೆ.

ಸಿಬಿಐನ ಕ್ರಮವು ಅನಿರೀಕ್ಷಿತ ಏನಲ್ಲ. ಗುಜರಾತ್‌ನಲ್ಲಿ ಅದೃಷ್ಟ ಪರೀಕ್ಷೆಗೆ ಮುಂದಾಗಿರುವ ಎಎಪಿಯ ರಾಜಕೀಯ ಮಹತ್ವಾಕಾಂಕ್ಷೆಯನ್ನು ಮೊಳಕೆಯಲ್ಲಿ ಚಿವುಟಲು ಬಿಜೆಪಿ ಹಲವು ಕ್ರಮಗಳನ್ನು ಕೈಗೊಂಡಿದೆ. ರಾಷ್ಟ್ರಮಟ್ಟದಲ್ಲಿ ಬೆಳೆಯಬೇಕು ಎಂಬ ಎಎಪಿಯ ಮಹತ್ವಾಕಾಂಕ್ಷೆಯೂ ಬಿಜೆಪಿಗೆ ಪಥ್ಯವಾಗಿಲ್ಲ ಎನ್ನಲಾಗಿದೆ.

ಉಚಿತ ಕೊಡುಗೆಗಳ ಭರವಸೆಗೆ ಸಂಬಂಧಿಸಿದ ಹಗ್ಗಜಗ್ಗಾಟ, ಗುಜರಾತ್‌ನ ಮದ್ಯ ದುರಂತ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ದೆಹಲಿ ಸರ್ಕಾರದ ಸಾಧನೆಗೆ ನೀಡುತ್ತಿರುವ ಪ್ರಚಾರ, ರೋಹಿಂಗ್ಯಾ ಸಮುದಾಯದವರಿಗೆ ದೆಹಲಿಯಲ್ಲಿ ಆಶ್ರಯ ಮುಂತಾದ ವಿಚಾರಗಳು ಬಿಜೆಪಿ ಮತ್ತು ಎಎಪಿ ನಡುವಣ ಗುದ್ದಾಟಕ್ಕೆ ಇತ್ತೀಚಿನ ದಿನಗಳಲ್ಲಿ ಕಾರಣವಾಗಿವೆ.

ದೆಹಲಿ ಸರ್ಕಾರದ ಸಚಿವ ಸತ್ಯೇಂದ್ರ ಜೈನ್ ಅವರನ್ನು ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಇತ್ತೀಚೆಗೆ ಬಂಧಿಸಿದೆ.

ದೆಹಲಿಯ ಅಬಕಾರಿ ನೀತಿಯ ಕುರಿತು ಸಿಬಿಐ ತನಿಖೆ ನಡೆಸುವಂತೆ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಶಿಫಾರಸು ಮಾಡಿದ್ದರು. ಪಂಜಾಬ್ ವಿಧಾನಸಭೆಗೆ ಈ ವರ್ಷ ನಡೆದ ಚುನಾವಣೆಯ ಖರ್ಚಿಗೆ ಹೊಸ ಅಬಕಾರಿ ನೀತಿಯಿಂದ ದೊರೆತ ಹಣವನ್ನು ಎಎಪಿ ಬಳಸಿದೆ ಎಂದು ಆ ಪಕ್ಷದ ವಿರೋಧಿಗಳು ಆರೋಪಿಸಿದ್ದಾರೆ.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆಯನ್ನು ಗುಜರಾತ್ ಮತ್ತು ಇತರೆಡೆಗಳಲ್ಲಿ ದೆಹಲಿ ಸರ್ಕಾರವು ಬಿಂಬಿಸಲು ಆರಂಭಿಸಿದೆ. ಈ ಕ್ಷೇತ್ರಗಳ ಸಾಧನೆಯ ಕುರಿತು ‘ನ್ಯೂಯಾರ್ಕ್ ಟೈಮ್ಸ್’ ಪತ್ರಿಕೆಯಲ್ಲಿ ಮುಖಪುಟದ ಲೇಖನ ಶುಕ್ರವಾರ ಪ್ರಕಟವಾಗಿದೆ. ಈ ಸಂದರ್ಭದಲ್ಲಿಯೇ ಸಿಬಿಐ ಶೋಧ ನಡೆದಿದೆ. ಸಿಸೋಡಿಯಾ ಅವರನ್ನು ಜಗತ್ತಿನ ಅತ್ಯುತ್ತಮ ಶಿಕ್ಷಣ ಸಚಿವ ಎಂದು ಪರಿಗಣಿಸಲಾಗುತ್ತಿದೆ ಎಂದು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಎಎಪಿ ಸರ್ಕಾರವು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಮಾಡಿರುವ ಅತ್ಯುತ್ತಮ ಕೆಲಸದಿಂದಾಗಿ ಬಿಜೆಪಿ ತತ್ತರಗೊಂಡಿದೆ. ಅದಕ್ಕಾಗಿಯೇ ಆರೋಗ್ಯ ಸಚಿವ ಜೈನ್ ಮತ್ತು ತಮ್ಮನ್ನು ಗುರಿ ಮಾಡಲಾಗಿದೆ ಎಂದು ಸಿಸೋಡಿಯಾ ಹೇಳಿದ್ದಾರೆ. ‘ಈ ಹಿಂದೆಯೂ ಶೋಧಗಳು, ತನಿಖೆಗಳು ನಡೆದಿವೆ. ಆಗಲೂ ಏನೂ ಸಿಕ್ಕಿಲ್ಲ, ಈಗಲೂ ಏನೂ ಸಿಗುವುದಿಲ್ಲ’ ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಕೆಲವು ಪಕ್ಷಗಳು ಉಚಿತ ಕೊಡುಗೆಗಳ ಭರವಸೆ ನೀಡುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ತಿಂಗಳು ಟೀಕಿಸಿದ್ದರು. ಇದರೊಂದಿಗೆ ಆರೋಪ–ಪ್ರತ್ಯಾರೋಪಗಳ ಕೆಸರೆರಚಾಟ ಆರಂಭಗೊಂಡಿತ್ತು. ಮೋದಿ ಅವರು ಎಎಪಿಯನ್ನು ಹೆಸರಿಸಿರಲಿಲ್ಲ. ಆದರೆ, ಅವರ ಗುರಿ ಎಎಪಿಯೇ ಆಗಿತ್ತು. ಗುಜರಾತ್‌ನಲ್ಲಿ ಅಧಿಕಾರಕ್ಕೆ ಬಂದರೆ ಉಚಿತ ವಿದ್ಯುತ್ ಮತ್ತು ಉಚಿತ ಶಿಕ್ಷಣ ಒದಗಿಸುವುದಾಗಿ ಎಎಪಿ ಭರವಸೆ ಕೊಡುತ್ತಿದೆ. ಗುಜರಾತ್ ನಲ್ಲಿ ಈಗ ಬಿಜೆಪಿ ಅಧಿಕಾರದಲ್ಲಿ ಇದೆ.

ರಾಷ್ಟ್ರಮಟ್ಟದಲ್ಲಿ ಬೆಳೆಯಬೇಕು ಎಂಬ ಮಹತ್ವಾಕಾಂಕ್ಷೆಯನ್ನು ಎಎಪಿ ಗುಟ್ಟಾಗಿಯೇನೂ ಇಟ್ಟಿಲ್ಲ. ಇನ್ನೆರಡು ರಾಜ್ಯಗಳಲ್ಲಿ ಉತ್ತಮ ಗೆಲುವು ಸಾಧ್ಯವಾದರೆ, ರಾಷ್ಟ್ರೀಯ ಪಕ್ಷ ಎಂಬ ಹಿರಿಮೆ ಸಿಗಲಿದೆ ಎಂದು ಕೇಜ್ರಿವಾಲ್ ಇತ್ತೀಚೆಗೆ ಹೇಳಿದ್ದರು. ಭಾರತವನ್ನು ನಂ.1 ದೇಶ ಮಾಡುವ ಅಭಿಯಾನವನ್ನು ಅವರು ಘೋಷಿಸಿದ್ದಾರೆ. ಇದು ರಾಜಕೀಯೇತರ ಅಭಿಯಾನ ಎಂದು ಅವರು ಹೇಳಿದ್ದಾರೆ. ಆದರೆ, ಅವರ ಗುರಿ 2024ರ ಲೋಕಸಭಾ ಚುನಾವಣೆ ಎಂಬುದು ಸ್ಪಷ್ಟ.

ವಿರೋಧ ಪಕ್ಷಗಳ ನಡುವಣ ಸ್ಪರ್ಧೆ ಕೂಡ ಕೇಂದ್ರದ ತನಿಖಾ ಸಂಸ್ಥೆಗಳ ಶೋಧಗಳಲ್ಲಿ ಬಯಲಾಗಿದೆ. ಸಿಸೋಡಿಯಾ ಅವರ ಪರವಾಗಿ ನಿಲ್ಲಲು ಕಾಂಗ್ರೆಸ್ ನಿರಾಕರಿಸಿದೆ.

ಹಾಗೆಯೇ, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಸಂಸದ ರಾಹುಲ್ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯ ತನಿಖೆಗೆ ಒಳಪಡಿಸಿದಾಗ ಎಎಪಿ ಕೂಡ ಕಾಂಗ್ರೆಸ್ ಬೆಂಬಲಕ್ಕೆ ನಿಲ್ಲಲಿಲ್ಲ.



ಮನೀಷ್ ಸಿಸೋಡಿಯಾ ಮನೆಯಲ್ಲಿ ಸಿಬಿಐ ಅಧಿಕಾರಿಗಳು ಶುಕ್ರವಾರ ಶೋಧ ನಡೆಸಿದರು ಪಿಟಿಐ ಚಿತ್ರ

2015ರಲ್ಲಿ ಕೇಜ್ರಿವಾಲ್ ಮನೆಯಲ್ಲಿ ಶೋಧ ಕಾರ್ಯ ನಡೆಸಿದಾಗ ಸಿಬಿಐಗೆ ನಾಲ್ಕು ಮಫ್ಲರ್‌ಗಳು ಸಿಕ್ಕಿದ್ದವು. ಮನೀಷ್ ಮನೆಯಲ್ಲಿ ಪೆನ್ಸಿಲ್, ಜಿಯೊಮೆಟ್ರಿ ಬಾಕ್ಸ್ ಸಿಗಬಹುದು

ರಾಘವ್ ಛಡ್ಡಾ, ಎಎಪಿ ವಕ್ತಾರ

ಕೇಂದ್ರವು ತನಿಖಾ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ. ಆದರೆ ಭ್ರಷ್ಟರೂ ದುರುಪಯೋಗದ ನೆಪವೊಡ್ಡಿ ತಪ್ಪಿಸಿಕೊಳ್ಳುತ್ತಿದ್ದಾರೆ

ಪವನ್ ಖೇರಾ, ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ

ಅಬಕಾರಿ ನೀತಿ ಜಾರಿಯಲ್ಲಿನ ಅಕ್ರಮವು ಕೇಜ್ರಿವಾಲ್ ಮತ್ತು ಮನೀಷ್ ಸಿಸೋಡಿಯಾ ಅವರ ನಿಜವಾದ ಮುಖಗಳನ್ನು ಬಹಿರಂಗಪಡಿಸಿದೆ

ಅನುರಾಗ್ ಠಾಕೂರ್, ಕೇಂದ್ರ ಸಚಿವ

‘ಆರೋಗ್ಯ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಸಹಿಸದೆ ಕ್ರಮ’

‘ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ದೆಹಲಿ ಸರ್ಕಾರವು ಮಾಡಿರುವ ಅಭಿವೃದ್ಧಿ ಹಾಗೂ ಅರವಿಂದ ಕೇಜ್ರಿವಾಲ್ ಅವರ ಜನಪ್ರಿಯತೆ ಹೆಚ್ಚಾಗುತ್ತಿರುವುದನ್ನು ನೋಡಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಿದ್ದೆ ಬರುತ್ತಿಲ್ಲ. ಹೀಗಾಗಿ ಅವರು ಎಎಪಿ ನಾಯಕರ ಮೇಲೆ ಸಿಬಿಐಯನ್ನು ಛೂಬಿಟ್ಟಿದ್ದಾರೆ’ ಎಂದು ಎಎಪಿ ವಕ್ತಾರ ರಾಘವ್ ಛಡ್ಡಾ ಆರೋಪಿಸಿದ್ದಾರೆ.

‘ದೆಹಲಿ ಶಾಲೆಗಳನ್ನು ಮನೀಷ್ ಸಿಸೋಡಿಯಾ ನೇತೃತ್ವದ ಶಿಕ್ಷಣ ಇಲಾಖೆಯು ಅಭಿವೃದ್ಧಿಪಡಿಸಿರುವ ಬಗ್ಗೆ ನ್ಯೂಯಾರ್ಕ್ ಟೈಮ್ಸ್ ತನ್ನ ಮುಖಪುಟದಲ್ಲಿ ವರದಿ ಪ್ರಕಟಿಸಿದೆ. ವರದಿ ಪ್ರಕಟವಾದ ಮರುದಿನವೇ ಮನೀಷ್ ಸಿಸೋಡಿಯಾ ಮನೆಯ ಮೇಲೆ ಸಿಬಿಐ ದಾಳಿ ನಡೆಸಿದೆ. ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು’ ಎಂದು ಛಡ್ಡಾ ಹೇಳಿದ್ದಾರೆ.

ಇದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಕೇಂದ್ರ ಸಚಿವ ಅನುರಾಗ್ ಠಾಕೂರ್, ‘ಶಾಲೆಗಳ ಅಭಿವೃದ್ಧಿಗೂ, ಅಬಕಾರಿ ಇಲಾಖೆಗೂ ಸಂಬಂಧವಿಲ್ಲ. ಈಗ ಸಿಬಿಐ ಪ್ರಕರಣ ದಾಖಲಿಸಿರುವುದು ಅಬಕಾರಿ ಇಲಾಖೆಗೆ ಸಂಬಂಧಿಸಿದ ನೀತಿಯಲ್ಲಿ. ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ಎಎಪಿ ನಾಯಕರು ಪತ್ರಿಕಾ ವರದಿಯನ್ನು ಬಳಸಿಕೊಳ್ಳುತ್ತಿದ್ದಾರೆ’ ಎಂದು ಹೇಳಿದ್ದಾರೆ.

ಶುಕ್ರವಾರ ಬೆಳಿಗ್ಗೆ ಮಾಧ್ಯಮಗೋಷ್ಠಿ ನಡೆಸಿದ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, ‘ವಿಶ್ವದ ಅತ್ಯಂತ ಬಲಶಾಲಿ ದೇಶದ ಪತ್ರಿಕೆಯಾದ ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಸುದ್ದಿ ಪ್ರಕಟವಾಗುವಂತೆ ಮಾಡುವುದು ಅತ್ಯಂತ ಕಷ್ಟ’ ಎಂದು ಹೇಳಿದ್ದರು. ತಕ್ಷಣವೇ ತಮ್ಮ ಮಾತನ್ನು ಸರಿಪಡಿಸಿಕೊಂಡ ಅವರು, ‘ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಲೇಖನ ಪ್ರಕಟವಾಗುವಂತೆ ಮಾಡುವುದು ಅತ್ಯಂತ ಕಷ್ಟ’ ಎಂದರು.

ಕೇಜ್ರಿವಾಲ್ ಅವರ ಮಾತನ್ನು ಟೀಕಿಸಿದ ಬಿಜೆಪಿ ನಾಯಕರು, ಇದು ದುಡ್ಡುಕೊಟ್ಟು ಬರೆಸಿದ ಬರಹ. ಕೇಜ್ರಿವಾಲ್ ಸರ್ಕಾರವು ಜನರ ಹಣವನ್ನು ತನ್ನ ಪ್ರಚಾರಕ್ಕೆ ದುಂದುವೆಚ್ಚ ಮಾಡುತ್ತಿದೆ ಎಂದು ಟೀಕಿಸಿದ್ದಾರೆ.

ನ್ಯೂಯಾರ್ಕ್ ಟೈಮ್ಸ್ ಪ್ರತಿಕ್ರಿಯೆ

‘ದೆಹಲಿಯ ಶೈಕ್ಷಣಿಕ ವ್ಯವಸ್ಥೆಯನ್ನು ಸುಧಾರಿಸಿದ್ದರ ಕುರಿತ ನಮ್ಮ ವರದಿಯು ನಿಷ್ಪಕ್ಷಪಾತವಾದದ್ದು. ಶಿಕ್ಷಣಕ್ಕೆ ಸಂಬಂಧಿಸಿದ ವರದಿಗಳನ್ನು ನ್ಯೂಯಾರ್ಕ್ ಟೈಮ್ಸ್ ಹಲವು ವರ್ಷಗಳಿಂದ ಪ್ರಕಟಿಸುತ್ತಲೇ ಇದೆ. ನ್ಯೂಯಾರ್ಕ್ ಟೈಮ್ಸ್‌ನ ಪತ್ರಿಕೋದ್ಯಮವು ಸದಾ ಸ್ವತಂತ್ರ. ಅದು ರಾಜಕೀಯ ಅಥವಾ ಜಾಹೀರಾತುದಾರರ ಪ್ರಭಾವದಿಂದ ಮುಕ್ತವಾಗಿದೆ’ ಎಂದು ನ್ಯೂಯಾರ್ಕ್ ಟೈಮ್ಸ್‌ನ ವಕ್ತಾರ ನಿಕೋಲ್ ಟೇಲರ್ ಹೇಳಿದ್ದಾರೆ ಎಂದು ‘ಎನ್‌ಡಿಟಿವಿ’ ವರದಿ ಮಾಡಿದೆ.

ನ್ಯೂಯಾರ್ಕ್ ಟೈಮ್ಸ್‌ನಲ್ಲೂ ಅದೇ ವರದಿ ಇದೆ, ಖಲೀಜ್ ಟೈಮ್ಸ್‌ನಲ್ಲೂ ಅದೇ ವರದಿ ಇದೆ. ಒಬ್ಬನೇ ಲೇಖಕ, ಅದೇ ಪದಗಳು ಮತ್ತು ಅವೇ ಚಿತ್ರಗಳು. ಇದು ಪೇಯ್ಡ್ ನ್ಯೂಸ್

ಪರ್ವೇಶ್ ವರ್ಮಾ, ಬಿಜೆಪಿ ಮುಖಂಡ

ನಿಮ್ಮ ಬಳಿ ಇರುವ ಹಣ, ಅಧಿಕಾರ ಎಲ್ಲವನ್ನೂ ಬಳಸಿಕೊಂಡು ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಲೇಖನ ಪ್ರಕಟವಾಗುವಂತೆ ಮಾಡಿ ಎಂದು ಬಿಜೆಪಿಗೆ ಸವಾಲು ಹಾಕುತ್ತಿದ್ದೇವೆ

ಸೌರವ್ ಭಾರದ್ವಾಜ್, ಎಎಪಿ ಮುಖಂಡ

ಏನಿದು ದೆಹಲಿ ಅಬಕಾರಿ ನೀತಿ...

ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರೇ ಅಬಕಾರಿ ಖಾತೆಯನ್ನೂ ನಿರ್ವಹಿಸುತ್ತಿದ್ದಾರೆ. ದೆಹಲಿಯಲ್ಲಿ ಮದ್ಯ ಮಾರಾಟದಲ್ಲಿ ಆಗುತ್ತಿರುವ ಅಕ್ರಮಗಳನ್ನು ತಡೆಯುವ ಸಂಬಂಧ ಉನ್ನತ ಮಟ್ಟದ ಸಮಿತಿಯನ್ನು ರಚಿಸಿತ್ತು. ಆ ಸಮಿತಿಯು ನೀಡಿದ್ದ ಶಿಫಾರಸಿನ ಆಧಾರದಲ್ಲಿ ದೆಹಲಿ ಅಬಕಾರಿ ನೀತಿಯನ್ನು ರೂಪಿಸಲಾಗಿತ್ತು. 2021ರ ನವೆಂಬರ್ 17ರಂದು ಆ ನೀತಿಯನ್ನು ಜಾರಿಗೆ ತರಲಾಗಿತ್ತು.

ಈ ನೀತಿಯ ಅನುಷ್ಠಾನದಲ್ಲಿನ ಅಕ್ರಮಗಳ ಸಂಬಂಧ ದೆಹಲಿ ಮುಖ್ಯ ಕಾರ್ಯದರ್ಶಿ ಅವರು ಈಚೆಗೆ ಲೆಫ್ಟಿನೆಂಟ್ ಗವರ್ನರ್ ಅವರಿಗೆ ವರದಿ ನೀಡಿದ್ದರು. ವರದಿಯಲ್ಲಿ ಅವರು ಹಲವು ಅಂಶಗಳನ್ನು ಉಲ್ಲೇಖಿಸಿದ್ದರು. ಈ ವರದಿ ಸಲ್ಲಿಕೆಯಾದ ಕೆಲವೇ ದಿನಗಳಲ್ಲಿ ದೆಹಲಿ ಸರ್ಕಾರವು ಈ ನೀತಿಯನ್ನು ವಾಪಸ್ ಪಡೆದಿತ್ತು.

ವರದಿಯ ಮುಖ್ಯಾಂಶಗಳು

- ದೆಹಲಿ ಅಬಕಾರಿ ನೀತಿಯ ಅನುಷ್ಠಾನದ ಸಂದರ್ಭದಲ್ಲಿ, ಜಿಎನ್‌ಸಿಟಿಡಿ ಕಾಯ್ದೆ–1997, ಟ್ರಾನ್ಸಾಕ್ಷನ್ ಆಫ್ ಬ್ಯುಸಿನೆಸ್ ರೂಲ್ಸ್–1993, ದೆಹಲಿ ಅಬಕಾರಿ ಕಾಯ್ದೆ–2009 ಮತ್ತು ದೆಹಲಿ ಅಬಕಾರಿ ನಿಯಮಗಳು–2010 ಅನ್ನು ಉಲ್ಲಂಘಿಸಲಾಗಿದೆ
- ಸೂಕ್ತ ಪ್ರಾಧಿಕಾರದ ಅನುಮತಿಯನ್ನು ಪಡೆಯದೆಯೇ, ದೆಹಲಿ ಅಬಕಾರಿ ನೀತಿಯನ್ನು ದೆಹಲಿ ಅಬಕಾರಿ ಇಲಾಖೆಯು ಜಾರಿಗೆ ತಂದಿದೆ
- ಸನ್ನದುದಾರರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಈ ನೀತಿಯನ್ನು ಜಾರಿಗೆ ತರಲಾಗಿದೆ. ಈ ನೀತಿಯ ಮೂಲಕ ಕೆಲವೇ ವ್ಯಕ್ತಿಗಳಿಗೆ ದೆಹಲಿಯ 32 ವಲಯಗಳಲ್ಲಿ 849 ಮದ್ಯದ ಅಂಗಡಿಗಳನ್ನು ತೆರೆಯಲು ಪರವಾನಗಿ ನೀಡಲಾಗಿದೆ
- ಸನ್ನದುದಾರರು ಪರವಾನಗಿ ಶುಲ್ಕ ಎಂದು ನೀಡಿದ್ದ ₹144 ಕೋಟಿಯನ್ನು, ಕೋವಿಡ್–19ರ ಲಾಕ್‌ಡೌನ್‌ನ ಕಾರಣ ನೀಡಿ ಅವರಿಗೆ ವಾಪಸ್ ಮಾಡಲಾಗಿದೆ. ಈ ಮೂಲಕ ಬೊಕ್ಕಸಕ್ಕೆ ನಷ್ಟ ಉಂಟು ಮಾಡಲಾಗಿದೆ

ಸ್ಮಾರ್ಟ್ ಸಿಟಿ: ರಾಜ್ಯಕ್ಕೆ ತಪರಾಕಿ

ಒಂದನೇ ಪುಟದಿಂದ

ಕರ್ನಾಟಕದಲ್ಲಿ ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸಂಸ್ಥೆಗಳ ಅನುದಾನದ ನೆರವಿನಿಂದ ಇಲ್ಲಿಯವರೆಗೆ ₹2,035 ಕೋಟಿ ಮೊತ್ತದ 395 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ₹4,885 ಕೋಟಿ ಮೊತ್ತದ 252 ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಲಾಗಿದೆ. ಕೆಲವು ಯೋಜನೆಗಳು ಕನಿಷ್ಠ ಪ್ರಗತಿ ಸಾಧಿಸಿದ್ದು, 2023ರ ಜೂನ್ ತಿಂಗಳ ಗಡುವಿನೊಳಗೆ ಪೂರ್ಣಗೊಳ್ಳುವುದು ಅನುಮಾನ. ಗಡುವು ಪೂರ್ಣಗೊಂಡ ಬಳಿಕ ಕೇಂದ್ರದ ಪಾಲಿನ ಅನುದಾನ ಸ್ಥಗಿತಗೊಳಿಸಲಾಗುತ್ತದೆ. ಎಲ್ಲ ಮೊತ್ತವನ್ನು ರಾಜ್ಯ ಸರ್ಕಾರವೇ ಭರಿಸಬೇಕಾಗುತ್ತದೆ.

ಹೀಗಾಗಿ, ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ. ಇದರಿಂದಾಗಿ, ರಾಜ್ಯದ ಜನರಿಗೂ ಅನುಕೂಲವಾಗುತ್ತದೆ. ರಾಜ್ಯದ ಸ್ಮಾರ್ಟ್ ಸಿಟಿ ಯೋಜನೆಗಳ ಬಗ್ಗೆ ಪ್ರಗತಿ ಪರಿಶೀಲನೆ ನಡೆಸಿ, ಅವುಗಳನ್ನು ಕೈಬಿಡುವ, ಪೂರ್ಣಗೊಳಿಸುವ ಅಥವಾ ಬೇರೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಕುರಿತು ಕೂಡಲೇ ಕ್ರಮ ಕೈಗೊಳ್ಳಬೇಕು. ಸ್ಮಾರ್ಟ್ ಸಿಟಿ ಕಾಮಗಾರಿಗಳ ಅಂತಿಮ ಪಟ್ಟಿಯನ್ನು ಆಗಸ್ಟ್ 25ರೊಳಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಮನೋಜ್ ಜೋಷಿ ಅವರು ಸೂಚಿಸಿದ್ದಾರೆ.

ನಿಧಾನಗತಿಯ ಸ್ಮಾರ್ಟ್ ಸಿಟಿ ಕಾಮಗಾರಿಗಳು

● ಯೋಜನೆ ಮೊತ್ತ ● ಆರ್ಥಿಕ ಪ್ರಗತಿ ● ಭೌತಿಕ ಪ್ರಗತಿ
(₹ಕೋಟಿಗಳಲ್ಲಿ)

ನಗರ	ಕಾಮಗಾರಿ	ಯೋಜನೆ ಮೊತ್ತ	ಆರ್ಥಿಕ ಪ್ರಗತಿ	ಭೌತಿಕ ಪ್ರಗತಿ
ಬೆಂಗಳೂರು	ಕಬ್ಬನ್ ಪಾರ್ಕ್ (ಎರಡನೇ ಹಂತ)	21	18	65%
ಬೆಂಗಳೂರು	ಕೆ.ಆರ್.ಮಾರ್ಕೆಟ್ ಅಭಿವೃದ್ಧಿ	39	39	45%
ಬೆಂಗಳೂರು	ಸಮಗ್ರ ಕಮಾಂಡ್ ಸೆಂಟರ್	119	29	40%
ಮಂಗಳೂರು	ವೆನ್ಲಾಕ್ ಆಸ್ಪತ್ರೆ ಮೇಲ್ದರ್ಜೆ	43	44	55%
ಮಂಗಳೂರು	ಸ್ಮಾರ್ಟ್ ಸಿಟಿ (ಪ್ಯಾಕೇಜ್ 7)	39	36	50%
ಮಂಗಳೂರು	ಕುಡಿಯುವ ನೀರು ಯೋಜನೆ	114	25	30%
ಮಂಗಳೂರು	ಸ್ಮಾರ್ಟ್ ಸಿಟಿ (ಪ್ಯಾಕೇಜ್ 5)	47	18	30%
ಶಿವಮೊಗ್ಗ	ಮೂಲಸೌಕರ್ಯ ಕಾಮಗಾರಿ	103	48	50%
ತುಮಕೂರು	ಬಸ್ ಟರ್ಮಿನಲ್	90	43	50%
	ಸುಲ್ತಾನ್ ಬತ್ತೇರಿ ಸೇತುವೆ	40	4	0%
	ನಾಯರ್ ಕುದ್ರುವಿನಲ್ಲಿ ಬಯಲು ರಂಗಮಂದಿರ	50	4	0%
ಹುಬ್ಬಳ್ಳಿ	ಚಿಟಗುಪ್ಪಿ ಆಸ್ಪತ್ರೆ ಮೇಲ್ದರ್ಜೆ	24	22	35%
ಹುಬ್ಬಳ್ಳಿ	ಏಕೀಕೃತ ಕ್ರೀಡಾ ಸಂಕೀರ್ಣ	166	4	5%
ಹುಬ್ಬಳ್ಳಿ	ಹಸಿರು ಸಂಚಾರ ಕಾರಿಡಾರ್	96	4	5%
ದಾವಣಗೆರೆ	ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಅಭಿವೃದ್ಧಿ	90	25	30%



ಪ್ರಜಾವಾಣಿ ಗ್ರಾಫಿಕ್ಸ್

ಬಿಹಾರ: ಸರ್ಕಾರಿ ಸಭೆಗಳಲ್ಲಿ ಲಾಲು ಅಳಿಯ ಭಾಗಿ– ಖಂಡನೆ

ಪಟ್ನಾ (ಪಿಟಿಐ): ಬಿಹಾರದ ನಡೆದ ಸರ್ಕಾರಿ ಸಭೆಗಳಿಗೆ, ರಾಷ್ಟ್ರೀಯ ಜನತಾದಳದ (ಆರ್‌ಜೆಡಿ) ಸಂಸ್ಥಾಪಕ ಲಾಲು ಪ್ರಸಾದ್ ಯಾದವ್ ಅವರ ಅಳಿಯ ಶೈಲೇಶ್ ಕುಮಾರ್ ಹಾಜರಾಗಿರುವ ವಿಡಿಯೊ ದೃಶ್ಯಗಳು ಶುಕ್ರವಾರ ಹೊರಬಿದ್ದಿದ್ದು, ಇದರಿಂದ ಹೊಸದಾಗಿ ಆಡಳಿತ ಚುಕ್ಕಾಣಿ ಹಿಡಿದಿರುವ ನಿತೀಶ್ ಕುಮಾರ್ ನೇತೃತ್ವದ ಸಮ್ಮಿಶ್ರ ಸರ್ಕಾರ ಮುಜುಗರ ಅನುಭವಿಸಿದೆ.

ಲಾಲು ಅವರ ಹಿರಿಯ ಮಗ ತೇಜ್ ಪ್ರತಾಪ್ ಯಾದವ್ ಅವರು ಈ ಎರಡೂ ಸಭೆಗಳ ಅಧ್ಯಕ್ಷತೆ ವಹಿಸಿದ್ದರು. ತೇಜ್ ಪ್ರತಾಪ್ ಅವರು ಈ ವಾರದ ಆರಂಭದಲ್ಲಿ, ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಖಾತೆಯ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

ಶೈಲೇಶ್ ಕುಮಾರ್ ಅವರು, ತೇಜ್ ಪ್ರತಾಪ್ ಅವರ ಅಕ್ಕ, ರಾಜ್ಯಸಭೆಯ ಸದಸ್ಯೆಯೂ ಆಗಿರುವ ಮಿಸಾ ಭಾರತಿ ಅವರನ್ನು ಮದುವೆಯಾಗಿದ್ದಾರೆ.

‘ತಪ್ಪು ಮಾಡಿಲ್ಲ, ದಾಳಿಯಿಂದ ಭೀತಿಗೊಂಡಿಲ್ಲ’

ನವದೆಹಲಿ (ಪಿಟಿಐ): ‘ನಾವು ಕಟ್ಟಾ ಪ್ರಾಮಾಣಿಕರು. ಸಿಬಿಐ ದಾಳಿಯಿಂದ ನಾನು ಭಯಗೊಂಡಿಲ್ಲ’ ಎಂದು ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರು ಪ್ರತಿಕ್ರಿಯಿಸಿದ್ದಾರೆ.

‘ನಾನು ಯಾವುದೇ ತಪ್ಪು ಮಾಡಿಲ್ಲ. ತನಿಖೆಗೆ ಎಲ್ಲ ರೀತಿಯ ಸಹಕಾರ ನೀಡಿದ್ದೇನೆ. ಅಧಿಕಾರಿಗಳು ಕೆಲ ಕಡತಗಳು, ನನ್ನ ಕಂಪ್ಯೂಟರ್ ಮತ್ತು ಮೊಬೈಲ್ ಫೋನ್ ಜಪ್ತಿ ಮಾಡಿದ್ದಾರೆ’ ಎಂದು ತಿಳಿಸಿದರು.

‘ಕೇಂದ್ರ ತನಿಖಾ ಸಂಸ್ಥೆಯನ್ನು ಕೇಂದ್ರ ಸರ್ಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಉತ್ತಮ ಕೆಲಸ ಮಾಡುವುದರಿಂದ ದೆಹಲಿ ಸರ್ಕಾರವನ್ನು ತಡೆಯುವುದೇ ಇದರ ಉದ್ದೇಶ’ ಎಂದು ಆರೋಪಿಸಿದರು.

ಐಎಎಸ್ ಅಧಿಕಾರಿಗಳ ವರ್ಗಾವಣೆ: ಸಿಸೋಡಿಯಾ ನಿವಾಸದ ಮೇಲೆ ಸಿಬಿಐ ದಾಳಿ ಹಿಂದೆಯೇ ದೆಹಲಿ ಸರ್ಕಾರ ಸುಮಾರು 12 ಮಂದಿ ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಶೇಷ ಕಾರ್ಯದರ್ಶಿ ಉದಿತ್ ಪ್ರಕಾಶ್ ರೈ ಅವರೂ ವರ್ಗಾವಣೆ ಆದವರಲ್ಲಿ ಸೇರಿದ್ದಾರೆ. ಭ್ರಷ್ಟಾಚಾರ ಪ್ರಕರಣ ಸಂಬಂಧ ರೈ ವಿರುದ್ಧ ಕ್ರಮ ಜರುಗಿಸಬೇಕು ಎಂದು ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಈಚೆಗೆ ಕೇಂದ್ರಕ್ಕೆ ಶಿಫಾರಸು ಮಾಡಿದ್ದರು.



ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿಯ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಕ್ಕಳು ಕೃಷ್ಣ–ರಾಧೆ ವೇಷಭೂಷಣದಲ್ಲಿ ಸಂಭ್ರಮಿಸಿದರು

ಹಗರಿಬೊಮ್ಮನಹಳ್ಳಿ: ಉರ್ದು ಶಾಲೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಸಂಭ್ರಮ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ತಂಬ್ರಹಳ್ಳಿಯ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಶ್ರೀಕೃಷ್ಣ ಜನ್ಮಾಷ್ಟಮಿ ಸಂಭ್ರಮದಿಂದ ಜರುಗಿತು.

ಶಾಲೆಯ 94 ವಿದ್ಯಾರ್ಥಿಗಳಲ್ಲಿ 83 ಚಿಣ್ಣರು ಮುಸ್ಲಿಂ ಸಮುದಾಯದವರು. ಬಹುತೇಕ ಮಕ್ಕಳು ಕೃಷ್ಣ, ರಾಧೆ, ರುಕ್ಮಿಣಿಯರ ವೇಷಭೂಷಣಗಳಿಂದ ಗಮನ ಸೆಳೆದರು. ಗ್ರಾಮದ ಮುಖ್ಯಬೀದಿಗಳಲ್ಲಿ ಸಾಮೂಹಿಕವಾಗಿ ಹೆಜ್ಜೆ ಹಾಕಿದ ಕೃಷ್ಣ, ರಾಧೆಯರನ್ನು ಸಾರ್ವಜನಿಕರು ಕಣ್ತುಂಬಿಕೊಂಡರು.

ಮುಖ್ಯ ಶಿಕ್ಷಕ ಎಲ್.ರೆಡ್ಡಿನಾಯ್ಕ ಮಾತನಾಡಿ,‘ಶಾಲೆಯಲ್ಲಿ ರಾಷ್ಟ್ರೀಯ ಹಬ್ಬಗಳ ಸಹಿತ ಎಲ್ಲ ಹಬ್ಬಗಳನ್ನೂ ವಿಶೇಷವಾಗಿ ಆಚರಿಸಲಾಗುತ್ತಿದೆ. ಇದಕ್ಕೆ ಗ್ರಾಮಸ್ಥರು, ವಿದ್ಯಾರ್ಥಿಗಳ ಪಾಲಕರ ಸಹಕಾರ ಇದೆ’ ಎಂದರು.ಎಸ್‌ಡಿಎಂಸಿ ಸದಸ್ಯರಾದ ಗುಲ್ಜರ್, ಹಜರತ್ ಬೇಗಂ, ರೇಷ್ಮಾ, ಶಿಕ್ಷಕಿಯರಾದ ಶಾಕೀರಾ ಬೇಗಂ, ಶೇಖ್ ಮುಮ್ತಾಜ್, ಗೌರವ ಶಿಕ್ಷಕರಾದ ಶಬೀನಾ ಹಾಗೂ ಸಕ್ರಹಳ್ಳಿ ರವಿಕುಮಾರ್ ಇದ್ದರು.

ಸಂಕ್ಷಿಪ್ತ ಸುದ್ದಿ

ಎಫ್‌ಐಆರ್ ರದ್ದು ಕೋರಿ ಸ್ವಪ್ನಾ ಸಲ್ಲಿಸಿದ್ದ ಅರ್ಜಿ ವಜಾ



ಕೊಚ್ಚಿ: ತಿರುವನಂತಪುರ ಮತ್ತು ಪಾಲಕ್ಕಾಡ್ ನಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ರದ್ದುಗೊಳಿಸಬೇಕೆಂದು ಕೋರಿ ಚಿನ್ನ ಕಳ್ಳಸಾಗಣೆ ಪ್ರಕರಣದ ಆರೋಪಿ ಸ್ವಪ್ನಾ ಸುರೇಶ್ ಸಲ್ಲಿಸಿದ್ದ ಅರ್ಜಿಯನ್ನು ಕೇರಳ ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಪ್ರಕರಣದ ತನಿಖೆ ಪ್ರಾಥಮಿಕ ಹಂತದಲ್ಲಿದೆ. ಆರೋಪಪಟ್ಟಿ ಸಲ್ಲಿಸಿದ ಬಳಿಕ ದೂರುದಾರರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು ಎಂದು ಈ ವೇಳೆ ನ್ಯಾಯಾಲಯ ಹೇಳಿದೆ.

ಮತದಾರರ ಪಟ್ಟಿಗೆ ವಲಸಿಗರ ಸೇರ್ಪಡೆ: ಪಿಡಿಪಿ ಪ್ರತಿಭಟನೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ವಲಸಿಗರನ್ನು ಮತದಾರರ ಪಟ್ಟಿಯಲ್ಲಿ ಸೇರಿಸುವುದಕ್ಕೆ ವಿರೋಧಿಸಿ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಇಲ್ಲಿನ ಶೇರ್-ಎ-ಕಾಶ್ಮೀರ್ ಪಾರ್ಕ್ ಬಳಿಯ ಪಕ್ಷದ ಕೇಂದ್ರ ಕಚೇರಿಯಿಂದ ಶುಕ್ರವಾರ ಪ್ರತಿಭಟನಾ ಮೆರವಣಿಗೆ ನಡೆಸಿತು. ಪಕ್ಷದ ಮುಖ್ಯ ವಕ್ತಾರ ಸುಹೇಲ್ ಬುಖಾರಿ ನೇತೃತ್ವದಲ್ಲಿ ಹಲವಾರು ಪಿಡಿಪಿ ನಾಯಕರು ಮೆರವಣಿಗೆ ನಡೆಸಿದರು.

‘ಮತದಾರರ ಪಟ್ಟಿಯಲ್ಲಿ ಆಮದು ಮಾಡಿಕೊಂಡ ಮತದಾರರನ್ನು ಸೇರಿಸುವ ಮೂಲಕ, ಬಿಜೆಪಿಯು ಬಲವಂತವಾಗಿ ನಡೆಸುತ್ತಿರುವ ಚುನಾವಣಾ ಜನಸಂಖ್ಯಾ ಬದಲಾವಣೆ ವಿರುದ್ಧ ಈ ಪ್ರತಿಭಟನೆ ನಡೆಸಲಾಗಿದೆ. ಇಲ್ಲಿನ ಜನರ ಹಕ್ಕುಗಳು ತುಳಿತಕ್ಕೊಳಗಾಗುತ್ತಿವೆ’ ಎಂದು ಬುಖಾರಿ ಹೇಳಿದರು.

ಗೃಹ ಕಾರ್ಯದರ್ಶಿ ಸೇವೆ ವಿಸ್ತರಣೆ

ನವದೆಹಲಿ (ಪಿಟಿಐ): ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರ ಸೇವೆಯನ್ನು ಒಂದು ವರ್ಷ ಅವಧಿಗೆ ಅಂದರೆ 2023 ರ ಆ.22ರವರೆಗೆ ವಿಸ್ತರಿಸಲಾಗಿದೆ ಎಂದು ಸಿಬ್ಬಂದಿ ಸಚಿವಾಲಯ ತಿಳಿಸಿದೆ.

ಸುದ್ದಿ 2 ನಿಮಿಷ

ನಲ್ಲಿ ನೀರು: 10 ಕೋಟಿ ಸಂಪರ್ಕ ಮೈಲಿಗಲ್ಲು: ಪ್ರಧಾನಿ ಮೋದಿ

ಪಣಜಿ (ಪಿಟಿಐ): ಜಲ ಜೀವನ ಮಿಷನ್ ಅಡಿಯಲ್ಲಿ ಏಳು ಕೋಟಿ ಗ್ರಾಮೀಣ ಕುಟುಂಬಗಳಿಗೆ ಕಳೆದ ಮೂರು ವರ್ಷಗಳಲ್ಲಿ ನಲ್ಲಿ ನೀರಿನ ಸಂಪರ್ಕ ಕಲ್ಪಿಸಲಾಗಿದೆ. ದೇಶದಲ್ಲಿ ಇದುವರೆಗೂ ಗ್ರಾಮೀಣ ಪ್ರದೇಶಗಳಲ್ಲಿ ಇಂತಹ 10 ಕೋಟಿ ಸಂಪರ್ಕ ಒದಗಿಸಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ತಿಳಿಸಿದರು.


ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಶೇ 100ರಷ್ಟು ನಲ್ಲಿ ನೀರಿನ ಸಂಪರ್ಕ ಪೂರ್ಣಗೊಂಡಿದ್ದಕ್ಕಾಗಿ ಗೋವಾ ಸರ್ಕಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಡಿಯೊ ಸಂವಾದದಲ್ಲಿ ಅವರು ಈ ವಿಷಯ ತಿಳಿಸಿದರು.

‘10 ಕೋಟಿ ಸಂಪರ್ಕ ಒದಗಿಸಿರುವ ಈ ಮೈಲಿಗಲ್ಲು, ಪರಿಸರ ಸಂರಕ್ಷಣೆ ಮತ್ತು ಜಲ ಸಂರಕ್ಷಣೆ ಕುರಿತು ಕೇಂದ್ರ ಸರ್ಕಾರ ಕೈಗೊಂಡಿರುವ ಕಾರ್ಯಗಳನ್ನು ಪ್ರತಿಫಲಿಸುತ್ತದೆ’ ಎಂದು ಹರ್ಷ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರವು ಜಲ ಜೀವನ ಮಿಷನ್ ಘೋಷಣೆ ಮಾಡಿದಾಗ, 16 ಕೋಟಿ ಗ್ರಾಮೀಣ ಕುಟುಂಬಗಳು ನೀರಿಗಾಗಿ ವಿವಿಧ ಮೂಲಗಳ ಮೇಲೆ ಅವಲಂಬಿತರಾಗಿದ್ದವು. ಇಷ್ಟೊಂದು ದೊಡ್ಡ ಸಂಖ್ಯೆಯ ಜನರು ಕಷ್ಟದಲ್ಲಿರುವುದನ್ನು ಕಂಡು ಸುಮ್ಮನಿರುವುದು ಸಾಧ್ಯವಾಗಲಿಲ್ಲ’ ಎಂದರು.

ಮಹಿಳೆಯರಿಗೆ ಹೆಚ್ಚು ಅನುಕೂಲ: ‘ಹರ್ ಘರ್ ಜಲ್ ಮಿಷನ್ (ಪ್ರತಿ ಮನೆಗೂ ನಲ್ಲಿ ನೀರಿನ ಸಂಪರ್ಕ) ಯೋಜನೆಯಿಂದ ಮಹಿಳೆಯರಿಗೇ ಹೆಚ್ಚು ಅನುಕೂಲವಾಗಿದೆ. ಮಹಿಳೆಯರೇ ಈ ಯೋಜನೆಯ ಮುಖ್ಯ ಗುರಿ. ಮನೆಗೆ ಬಹು ದೂರದಿಂದ ನೀರು ತರುವ ಅವರ ಸಮಯ ಉಳಿಯುತ್ತಿದೆ.

ಜತೆಗೆ ಅಪೌಷ್ಟಿಕತೆಯ ವಿರುದ್ಧ ಹೋರಾಟಕ್ಕೆ ಈ ಯೋಜನೆ ಇನ್ನಷ್ಟು ಶಕ್ತಿ ತುಂಬಿದೆ’ ಎಂದು ಪ್ರಧಾನಿ ಅಭಿಪ್ರಾಯಪಟ್ಟರು.



ರಾಜಸ್ಥಾನ: 1.35 ಕೋಟಿ ಮಹಿಳೆಯರಿಗೆ ಸ್ಮಾರ್ಟ್‌ಫೋನ್– ಪ್ರಕ್ರಿಯೆಗೆ ಚಾಲನೆ

ಜೈಪುರ (ಪಿಟಿಐ): ಮುಖ್ಯಮಂತ್ರಿ ಡಿಜಿಟಲ್ ಸೇವಾ ಯೋಜನೆ ಅಡಿಯಲ್ಲಿ 1.35 ಕೋಟಿ ಮಹಿಳೆಯರಿಗೆ ಸ್ಮಾರ್ಟ್ ಫೋನ್‌ಗಳನ್ನು ನೀಡುವ ಯೋಜನೆ ಸಂಬಂಧ ದೇಶದ ಪ್ರಮುಖ ಮೂರು ದೂರ ಸಂಪರ್ಕ ಕಂಪನಿಗಳು ಆಸಕ್ತಿ ತೋರಿಸಿವೆ ಎಂದು ಶುಕ್ರವಾರ ಅಧಿಕಾರಿಗಳು ತಿಳಿಸಿದರು.

‘ಬುಧವಾರ ಬಿಡ್‌ಗಳನ್ನು ತೆರೆಯಲಾಗಿದೆ. ಬಿಡ್ಡರ್‌ಗಳ ಕುರಿತು ಉನ್ನತ ಮಟ್ಟದ ಸಮಿತಿಯು ಈ ತಿಂಗಳು ನಿರ್ಧಾರ ಕೈಗೊಳ್ಳಲಿದೆ’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

‘ಮುಂದಿನ ವರ್ಷ ನಡೆಯಲಿರುವ ವಿಧಾನಸಭೆ ಚುನಾವಣೆಗೂ ಮುನ್ನವೇ ಈ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಇಚ್ಛಿಸಿದೆ. ಈ ವರ್ಷದ ಬಜೆಟ್‌ನಲ್ಲಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಈ ಯೋಜನೆಯನ್ನು ಘೋಷಿಸಿದ್ದರು. ಇದಕ್ಕಾಗಿ 12,000 ಕೋಟಿ ಖರ್ಚಾಗಲಿದೆ’ ಎಂದು ಹೇಳಿದ್ದರು.



ಉಡುಪಿಯ ಕೃಷ್ಣಮಠದಲ್ಲಿ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಶುಕ್ರವಾರ ಕೃಷ್ಣನಿಗೆ ‘ಯಶೋದಾ ಕೃಷ್ಣ’ ವಿಶೇಷ ಅಲಂಕಾರ ಮಾಡಲಾಗಿತ್ತು

ಕೃಷ್ಣಮಠ: ಇಂದು ವಿಟ್ಲಪಿಂಡಿ ಉತ್ಸವ

ಯಶೋದಾ ಕೃಷ್ಣನಾಗಿ ಕಂಗೊಳಿಸಿದ ಮುರಾರಿ

ಉಡುಪಿ: ಕೃಷ್ಣಮಠದಲ್ಲಿ ಶುಕ್ರವಾರ ಶ್ರದ್ಧಾ–ಭಕ್ತಿಯಿಂದ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಪರ್ಯಾಯ ಕೃಷ್ಣಾಪುರ ಮಠದ ವಿದ್ಯಾಸಾಗರ ತೀರ್ಥರು ಕೃಷ್ಣನಿಗೆ ಮಹಾ ಪೂಜೆ ನೆರವೇರಿಸಿದರು.

ಕಾಣಿಯೂರು ಮಠಾಧೀಶರಾದ ವಿದ್ಯಾವಲ್ಲಭ ತೀರ್ಥ ಸ್ವಾಮೀಜಿ ಕೃಷ್ಣನಿಗೆ ಯಶೋಧೆ ಅಲಂಕಾರ ಮಾಡಿದರು. ಸಾವಿರಾರು ಭಕ್ತರು ಕೃಷ್ಣನ ದರ್ಶನ ಮಾಡಿದರು. ಕೃಷ್ಣಮಠದ ಒಳಾಂಗಣಕ್ಕೆ ಹೂವಿನ ವಿಶೇಷ ಅಲಂಕಾರ ಮಾಡಲಾಗಿತ್ತು.

ಕೃಷ್ಣಮಠದಲ್ಲಿ ಕೃಷ್ಣ ವೇಷ ಸ್ಪರ್ಧೆಗಳು ನಡೆದವು. ರಥಬೀದಿಯಲ್ಲಿ ಹುಲಿಕುಣಿತ ಪ್ರದರ್ಶನ ನಡೆಯಿತು. ವೇಷಧಾರಿಗಳು ರಂಜಿಸಿದರು. ರಾಜಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಆ.20ರಂದು ಮಧ್ಯಾಹ್ನ ವಿಟ್ಲಪಿಂಡಿ ಉತ್ಸವ ನಡೆಯಲಿದ್ದು ಕೃಷ್ಣನ ಮಣ್ಣಿನ ಮೂರ್ತಿಯನ್ನು ಚಿನ್ನದ ರಥದಲ್ಲಿಟ್ಟು ಮೆರವಣಿಗೆ ಮಾಡಲಾಗುವುದು. ರಥಬೀದಿಯಲ್ಲಿ ಸಾಂಪ್ರದಾಯಿಕ ಮೊಸರು ಕುಡಿಕೆ ಒಡೆಯುವ ಆಚರಣೆ ನಡೆಯಲಿದೆ. ಈ ದೃಶ್ಯವನ್ನು ಕಣ್ತುಂಬಿಕೊಳ್ಳಲು ಸಾವಿರಾರು ಮಂದಿ ಕೃಷ್ಣ ಮಠಕ್ಕೆ ಭೇಟಿ ನೀಡುತ್ತಾರೆ.

22ರ ಬಳಿಕ ರಾಜ್ಯದಲ್ಲಿ ಮತ್ತೆ ಮಳೆ

ಬೆಂಗಳೂರು: ರಾಜ್ಯದ ಮಲೆನಾಡು, ಕರಾವಳಿ ಜಿಲ್ಲೆಗಳಲ್ಲಿ ಆಗಸ್ಟ್ 22ರ ಬಳಿಕ ಮತ್ತೆ ಸಾಧಾರಣ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ವಾರದಿಂದ ಮಳೆ ಬಿಡುವು ನೀಡಿ, ಬಿಸಿಲ ವಾತಾವರಣ ಕಂಡುಬಂದಿತ್ತು.

ಆಗಸ್ಟ್ 22ರಂದು ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಜಿಲ್ಲೆಯಲ್ಲಿ ಹಾಗೂ 23ರಂದು ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಕೊಡಗು ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.98	11,380	4,865
ಹಾರಂಗಿ	2,859	2,856.91	2,710	1,300
ಕಬಿನಿ	2284	2283.43	6,345	4,325
ಹೇಮಾವತಿ	2,922	2,921.95	6,461	5,280
ಲಿಂಗನಮಕ್ಕಿ	1,819	1813	10,430	5,612
ಸೂಪಾ (ಮೀ)	564	548.47	6,456	883
ಮಾಣಿ	595	587	1,450	760
ತುಂಗಭದ್ರಾ	1,633	1,632.99	42,211	33,945
ಮಲಪ್ರಭಾ	2079.5	2,077.40	4,357	1,244
ಘಟಪ್ರಭಾ	2175	2,173.83	8,155	4,970
ಭದ್ರಾ	186	184	8,068	5,094
ಆಲಮಟ್ಟಿ (ಮೀ)	519.6	519.44	1,55,067	1,00,000
ನಾರಾಯಣಪುರ (ಮೀ)	492.25	491.67	1,05,000	1,02,976

* ನೆಲಮಟ್ಟದಿಂದ



ಈ ಸಾರಿ ಯಾವ ಸೀರಿ..!

ರಶ್ಮಿ ಎಸ್.

ಲಹರಿ

ಶ್ರಾವಣ ಮಾಸ ಹೊಸಿಲಿನಲ್ಲಿರುವಾಗಲೇ ಸೇಲ್ ಭರಾಟೆ ಶುರು ಆಗ್ತದ. ಪಂಚಮಿಗೆ ಅಣ್ಣನಿಂದ, ವರಮಹಾಲಕ್ಷ್ಮಿಗೆ ಗಂಡನಿಂದ, ಗೌರಿಗೆ ಅಮ್ಮನಿಂದ ಹಿಂಗ ಸೀರಿಗಳ ಲೆಕ್ಕ ಹಾಕೂದೆ ಹಬ್ಬ. ಈ ಸಲ ಅಣ್ಣಗ ಹೇಳೇಬಿಡಬೇಕು.. ಒಂದು ಸಾಫ್ಟ್ ಸಿಲ್ಕೇ ಬೇಕು ಅಂತ. ಜರಿಯಿರುವ ಭರ್ಜರಿ ಸೀರಿ ಉಟ್ಟು ಸಾಕಾಗೇದ. ಮತ್‌ಗ ಉಟ್ರ ಉಟ್ಟೇವಿ ಇಲ್ಲ ಅಂತ ಅನಿಸಬೇಕು.. ಹಂಗಿರಬೇಕು. ಜರಿ ಬ್ಯಾಡ, ರೇಷ್ಮಿ ನೂಲಿನ ಕೆಲಸ ಇದ್ರ ಇನ್ನಾ ಹಿತ.. ಅಂತದ್ದೇ ಸೀರಿ ಕೊಡಸು ಅಂತ್ಹೇಳ್ತೇನಿ. ಇವು ಚೂರು ತುಟ್ಟಿ ಆಗ್ತಾವ... ಹಂಗ ಅವನಿಗೆ ತುಟ್ಟಿ ಅನಿಸಿದ್ರ, ರೊಕ್ಕಾನೆ ಕೊಡ್ಲಿ. ಮ್ಯಾಲಿಂದ ನಾ ಹಾಕಿ ತೊಗೊಂಡ್ರ, ಸಾಫ್ಟ್ ಸಿಲ್ಕ್ ಸೀರಿನೆ ತೊಗೊಬೇಕು.

ಇನ್ನ ವರಮಹಾಲಕ್ಷ್ಮಿಗೆ ಮಾತ್ರ ಕಾಂಜೀವರಂ ತೊಗೊಬೇಕು. ಇಲ್ಲಾಂದ್ರ ಗದ್ವಾಲ್, ಚಂದ್ರಕಾಳಿ, ರೇಷ್ಮಿ ಇಳಕಲ್ ಆದ್ರೂ ಆಯ್ತು. ಇವೆಲ್ಲಾ ಈಗೀಗ ಐದಂಕಿ ದಾಟ್ಯಾವ. ಮತ್ತ ಲಕುಮಿ ಬಂದು ಜಗುಲಿಗೆ ಕೂಡಬೇಕಂದ್ರ ಒಂದೀಟರೆ ಖರ್ಚು ಮಾಡೂದು ಬ್ಯಾಡ ಅಂತ ಹೆಣ್ಮಕ್ಕಳ ಲೆಕ್ಕಾಚಾರ. ಅಷ್ಟೆಲ್ಲ ರೊಕ್ಕ ಕೊಟ್ರ, ಮನ್ಯಾಗಿರುವ ಲಕುಮಿ ದಡದಡ ಮೆಟ್ಲು ಇಳದು, ಸೀರಿ ಅಂಗಡಿಗೇ ಹೋಗಿ ಕುಂದರ್ತಾಳ ಅನ್ನುವ ಆತಂಕ ಗಂಡುಮಕ್ಕಳದು. ಆದ್ರ ಬದುಕಿನಾಗ ಒಂದರೆ ಸಣ್ಣ ಬೆಳ್ಳಿ ದಡಿ ಇರುವ ಮೈಸೂರು ಸಿಲ್ಕು ಸೀರಿ ಇರಬೇಕು. ಅದೀಗ ಹದಿನಾರು ಸಾವಿರದ ಗಡಿ ದಾಟಿದ್ರೂ ಅಡ್ಡಿ ಇಲ್ಲ... ಒಂದು ಪಟ್ಟು ಸೀರಿ ಇರಬೇಕು. ಅಂದ್ರ ನಾಲ್ಕು ಮೀಟರ್ ಒಡಲು ಒಂದ್ಕಡೆ ಹೆಣದು, ಒಂದು ಮೀಟರ್ ಸೆರಗು ಬ್ಯಾರೆ ಕಡೆ ಹೆಣದು, ಇವೆರಡನ್ನೂ ಕೈಲೆ ಜೋಡಿಸುಹಂಗ ಹೆಣದಿರ್ತಾರ. ಅಗ್ದಿ ವೈಭವೋಪೇತ ಸೀರಿಗಳು. ಆದ್ರ ಇವೂ ಐದಂಕಿ ದಾಟ್ತಾವ.

ನೆರೆಯ ಗದ್ವಾಲದ ತಿಳಿಬಣ್ಣದ ಒಡಲಿಗೆ ಗಾಢ ಬಣ್ಣದ ಅಂಚು ಒಡಲು ಇರುವ ಸೀರಿಗಳಿವು. ಜೊತಿಗೆ ಒಂದೇ ಬಣ್ಣದ ರೇಷ್ಮಿ ಸೀರಿನೂ ಇರ್ತಾವ. ಹಂಗೇ ಅಗಲಗಲ ಅಂಚಿನ ಧರ್ಮಾವರಂ ಬೇಕಂದ್ರ, ಕಳೆದ ವರ್ಷದ ವರಮಹಾಲಕ್ಷ್ಮಿಯ ಆರತಿ ತಟ್ಟಿಗೆ ಇಟ್ಟ ರೊಕ್ಕ ಕೂಡಿಡೂದ್ರಿಂದ, ಸೀರಿ ಕನಸು ಹೆಣಿಯೂದು ಶುರು ಆಗಿರ್ತದ.

ಭಾಗಲ್‌ಪುರಿ ಸಿಲ್ಕ್ ಇರಬಹುದು, ಅಪ್ಪಟ ಜಾಮ್ದಾನಿ ಕಾಟನ್ ಸೀರಿ ಇರಬಹುದು, ಪಶ್ಚಿಮಬಂಗಾಳದ ಕಾಟನ್ ಸೀರೆಗಳಿರಬಹುದು, ಹದಿಹರೆಯದಿಂದಲೇ ಸೀರಿ ಸಂಗ್ರಹ ಶುರು ಆಗಿರ್ತದ. ಸೀರಿಯ ಪಾರದರ್ಶಕತನ ನಮ್ಮ ಅನುಭವದಂಗ ಗಾಢ ಆಗ್ಕೊಂತ ಹೋಗ್ತದ. ಹಂಗಾಗಿನೇ ಕಾಲೇಜಿಗೆ ಹೋಗೋರು, ನೆಟ್ ಮತ್ತು ಶಿಫಾನ್ ತೊಗೊತಾರ.



ಸಾಂದರ್ಭಿಕ ಚಿತ್ರ ಚಿತ್ರಗಳು/ ತಾಜುದ್ದೀನ್ ಆಜಾದ್

> ಸೀರಿ ಅನ್ನೂದು ಹೆಣ್ಮಕ್ಕಳ ಸಿರಿಪ್ರಪಂಚ. ಎಷ್ಟು ತಂದ್ರೂ ಕಡಿಮಿ. ಎಷ್ಟು ಇದ್ರೂ ಕಡಿಮಿ.. ಅಂಗಡಿಯೊಳಗ ಕುಂತಾಗ ಯಾವಾಗಲೂ ಬ್ಯಾರೆಯೋರು ಆರಿಸಿದ ಸೀರಿ ಸೇರೂದು ಅಷ್ಟೇ ಸಹಜ. ಇರುವುದೆಲ್ಲ ಬಿಟ್ಟು.. ಇರದುದರೆಡೆಗೆ... ಅನ್ನೂ ಹಂಗ!

ಮದಿವಿ ಆದೋರು ರೇಷ್ಮಿ ಸೀರಿ ಕಡೆ ಹೊರಳತಾರ. ಮಕ್ಕಳಾದ ಮೇಲೆ, ಕಾಟನ್ ಸೀರಿ ಹಿತ ಅನಸ್ತಾವ. ಜರಿ ಬ್ಯಾಡನಸ್ತದ. ಮುಂದ, ಅಗ್ದಿ ಸರಳ ಯಾವ ವಿನ್ಯಾಸನೂ ಇಲ್ದೆ ಇರುವ ಸೀರಿಗಳು ಬೇಕನಸ್ತಾವ.

ಸೀರಿಗಳು ನಮ್ಮ ಮನಸು, ನಮ್ಮ ಮೂಡು ಜೊತಿಗೆ ನಮ್ಮ ಸ್ವಭಾವವನ್ನೂ ಹಿಡದಿಡ್ತಾವಂತ. ಆದ್ರ ವಸ್ತ್ರವಿನ್ಯಾಸಕರು ನೀಡುವ ಸಲಹೆಗಳು ಬ್ಯಾರೇನೆ ಇರ್ತಾವ. ದಪ್ಪ ಇದ್ರ ಉದ್ದ ಗೆರಿ ಸೀರಿ ತೊಗೊರಿ, ಸಣ್ಣ ಚೌಕಳಿ ಸೀರಿ ಚಂದ. ಸಪೂರ ಇದ್ರ, ಅಡ್ಡ ಗೆರಿ ಸೀರಿ, ದೊಡ್ಡ ಚೌಕಳಿ ಸೀರಿ, ದೊಡ್ಡ ಹೂವಿನ ಸೀರಿ ತೊಗೊರಿ. ನಾವೇ ಸ್ಥೂಲಕಾಯದವರಾಗಿ ಬೊಡ್ಡಿ ಹಂಗಿದ್ರ, ನಿಮ್ಮ ಸೀರಿಯೊಳಗ ತೆಳ್ಳಗಿನ ಬಳ್ಳಿ ಹರದಾಡ್ಲಿ ಅಂತಾರ.

ಇನ್ನ ಸೀರಿ ಮತ್ತು ಬಣ್ಣ, ಇವೆರಡರ ನಡುವೆ ಜುಗಲ್ಬಂದಿಗೆ ಬಿದ್ರ, ಬಣ್ಣಾನೆ ಭಾಳದಾವೋ.. ಬಣ್ಣಗಳ ಭಾವನೆಗಳೇ ಭಾಳದಾವೋ ತಿಳಿಯೂದಿಲ್ಲ. ತಿಳಿ ಇದ್ದೋರು, ಗಾಢ ಬಣ್ಣ ಉಡ್ತಾರ. ಮತ್ತಿಷ್ಟು ತಿಳೀ ಕಾಣಾಕ. ಗಾಢ ಬಣ್ಣದವರು ತಿಳಿ ಬಣ್ಣಾನೆ ಹುಡುಕ್ತಾರ. ಇವು ಅವರವರ ವೈಯಕ್ತಿಕ ಆಸಕ್ತಿಗೆ ಸಂಬಂಧಿಸಿದ್ದು. ಆದ್ರ ಒಂದೇ ಒಂದು ಸೀರಿ ತರೂನಂತ ಅಂಗಡಿಗೆ ಹೋದೋರು, ಅಲ್ಲಿ ರಿಯಾಯ್ತಿ ಮಾರಾಟ ಕಂಡಕೂಡಲೆ, ಕೈ ಸಡಿಲು ಬಿಡ್ತಾರ. ಕನಸಿನ ಸೀರಿಗೆ ಹದಿನೈದು ಸಾವಿರ ಕೊಟ್ಟು ಒಂದು ತೊಗೊಳೂದೊ, ಐದು ಸಾವಿರದ್ದು ಮೂರು ತೊಗೊಳೂದೊ, ಮೂರು ಸಾವಿರದ್ದು ಐದು ತೊಗೊಳ್ಳೂದೊ.. ಇಂಥ ಲೆಕ್ಕಾಚಾರಗಳು ಅಗ್ದಿ ಬೆಳಕಿನ ವೇಗದೊಳಗ ಮನಸಿನಾಗ ಆಗ್ತಿರ್ತಾವ.

ಹಿಂಗ ಹೆಚ್ಚುವರಿ ತೊಗೊಳ್ಳುವ ಸೀರಿಯೊಳಗ ಅತ್ತಿಗೆ ಯಾವುದು, ಅಮ್ಮಗ ಯಾವುದು, ಅಕ್ಕಗ, ಅತ್ತಿಗಿಗೆ, ನಾದಿನಿಗೆ ಹಿಂಗ ಲೆಕ್ಕಾಚಾರನೂ ಸಾಗ್ತಾವ. ಒಮ್ಮೊಮ್ಮೆ ತ್ಯಾಗ ಮಾಡ್ಕೊಂತ, ಒಮ್ಮೊಮ್ಮೆ ಆಸೆಗಳಿಗೆ ತಿಲಾಂಜಲಿ ಇಟ್ಕೊಂತ, ಇನ್ನೊಮ್ಮೆ ದುರಾಸೆ ಆದ್ರೂ ಚಿಂತಿಲ್ಲ.. ಏನು ಮತ್ಮತ್ತ ತೊಗೊಳೂದಿಲ್ಲ ಅಂತ ತಾವೇ ಸಮಾಧಾನ ಪಟ್ಕೊಂತ, ಕೆಲವೊಮ್ಮೆ ಯಾದಿ ಮೆ ಶಾದಿ ಆಗ್ತಾವಲ್ಲ.. ಹಂಗೂ ಇರ್ತದ. ಗಂಡ ಕೊಟ್ಟ ರೊಕ್ಕ, ತಾನು ಕೂಡಿಟ್ಟ ಕಾಸು, ಅಮ್ಮ, ಅಣ್ಣ ಅವಾಗವಾಗ ಕೊಟ್ಟಿದ್ದು, ಉಳಿಸಿಟ್ಟಿದ್ದು, ಕೂಡಿಟ್ಟಿದ್ದು, ಬಚ್ಚಿಟ್ಟಿದ್ದು ಎಲ್ಲಾನೂ ಸೀರಿ ಮಡಿಕಿ ಬಿಚ್ಚೂಮುಂದ ಮತ್ತ ಎಣಕಿಗೆ ಬರ್ತಾವ.

ಸೀರಿ ಅನ್ನೂದು ಹೆಣ್ಮಕ್ಕಳ ಸಿರಿಪ್ರಪಂಚ. ಎಷ್ಟು ತಂದ್ರೂ ಕಡಿಮಿ. ಎಷ್ಟು ಇದ್ರೂ ಕಡಿಮಿ.. ಅಂಗಡಿಯೊಳಗ ಕುಂತಾಗ ಯಾವಾಗಲೂ ಬ್ಯಾರೆಯೋರು ಆರಿಸಿದ ಸೀರಿ ಸೇರೂದು ಅಷ್ಟೇ ಸಹಜ. ಇರುವುದೆಲ್ಲ ಬಿಟ್ಟು.. ಇರದುದರೆಡೆಗೆ... ಅನ್ನೂಹಂಗ!

ಭಾಳ ಮಂದಿ ಮಾಡುವ ತಪ್ಪೇನಂದ್ರ ಚಂದ ಕಾಣುವ ಛೊಲೊ ಸೀರಿ ಆರಾಸಕ ಕುಂದರ್ತಾರ. ಹೊತ್ತು ಹೋಗಿದ್ದು ತಿಳಿಯೂದೆ ಇಲ್ಲ. ಖರೇವಂದ್ರ, ನಮಗ ಚಂದ ಕಾಣುವ ಸೀರಿಗಿಂತಲೂ ಉಟ್ಟಾಗ, ನಾವು ಚಂದ ಕಾಣುವ ಸೀರಿ ಆರಸಬೇಕು. ಆವಾಗ ನಮ್ಮ ಸ್ವಭಾವಕ್ಕ, ನಮ್ಮ ವ್ಯಕ್ತಿತ್ವಕ್ಕ ಮೆರುಗು ನೀಡುವಂಥ ಸೀರಿ ನಮ್ಮನ್ನ ಅಪ್ಕೊಂತದ.

ಮತ್ತ ಈ ಸಾರಿ ಹಬ್ಬಕ್ಕ ಯಾವ ಸೀರಿ ಖರೀದಿ ಆಯ್ತು?

ಆಹಾ.. ಅನ್ನಪೂರ್ಣೆಯರು..

ಹಿಮದ್ವತಿ

‘ಸೊಸಿ ಅಡಗಿ ಮಾಡಿ, ಬುತ್ತಿ ಕಟ್ತಾಳ್ರಿ. ನಾ ಅಷ್ಟರೊಳಗ ನೆಲಾ ಕಸಾ ಮಾಡಿ, ಸ್ನಾನ ಮಾಡಿ ತಯಾರ ಆಗ್ತೇನಿ. ಪೂಜಿ ಮಾಡ್ಕೊಂಡು ಚಾ ಕುಡದು ಮಂಜಮುಂಜೇನೆ ಊರು ಬಿಟ್ವಿ ಅಂದ್ರ ಮತ್ತ ಸಂಜೀಕ ಮನಿ ಮುಟ್ಟೂದ್ರಿ’

ಅರವತ್ತರ ಗಡಿ ದಾಟಿರುವ ಮುದುಕಮ್ಮ, 60ರ ಹೊಸಿಲಲ್ಲಿರುವ ಲಕ್ಷ್ಮಮ್ಮ ತಮ್ಮ ಕತೆ ಹೇಳುತ್ತಿದ್ದರು. ಇವರಿಬ್ಬರೂ ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಬನಶಂಕರಿ ದೇವಸ್ಥಾನದ ಆಸುಪಾಸಿನಲ್ಲಿ ರೊಟ್ಟಿ ಬುತ್ತಿ ಮಾರಾಟ ಮಾಡುವ ಅನ್ನಪೂರ್ಣೆಯರು. ಕಳೆದ ಮೂವತ್ತು ನಲ್ವತ್ತು ವರ್ಷಗಳಿಂದ ಇವರೆಲ್ಲ ಬುತ್ತಿಯೂಟವನ್ನು ಬುಟ್ಟಿಯಲ್ಲಿ ಹೊತ್ತು ತಂದು, ಇಲ್ಲಿ ಮಾರಾಟ ಮಾಡಿ ಮನೆ ಸೇರುತ್ತಾರೆ. ಅವರ ದಿನಚರಿ, ಬದುಕಿನ ತುಣುಕು ಅವರ ಮಾತಲ್ಲೇ ಇಲ್ಲಿದೆ...

ಇದು ಹಿಂದಿನ ದಿನದಿಂದನ ತಯಾರಿ ಚಾಲು ಇರ್ತದ್ರಿ. ಖಟಿ ರೊಟ್ಟಿ ಬೇಕಾದ್ರ ಮತ್ತ ಅವು ಕಾವು ಉಣ್ಣಬೇಕು. ಅಂದ್ರ ಕುರುಕುರು ಆಗ್ತಾವ. ಖಟಿಯಾದ್ರ ಯಾರು ಉಣ್ತಾರ ಬಿಡ್ರಿ..? ಬೆಳಗಿನ ಜಾವ ಮೊದಲು ಬಿಸಿರೊಟ್ಟಿ ಮಾಡಿ, ಅಂಗವಸ್ತ್ರದಾಗ ಸುತ್ತಿಡ್ತಾರ್ರೀ . ಇನ್ನೊಂದ್ಕಡೆ ಬ್ಯಾಳಿ ಪಲ್ಲೆ, ಹಿಟ್ಟಿನ ಪಲ್ಲೆ ಮಾಡಾಕ ಏನು ಬೇಕೋ ಹೆಚ್ಚಿಡ್ತೀವಿ. ನಮ್ಮ ಹಿತ್ತಲದಾಗ ಬೆಳಿಯೂ ಬದನಿಕಾಯಿ, ಬೆಂಡಿಕಾಯಿ, ಸೌತಿಕಾಯಿ, ಅವರಿಕಾಯಿ ಹಿಂಗ ಇವನ್ನ, ರಾಜಗಿರಿ, ಸಬ್ಬಸಗಿ, ಉಳ್ಳಾಗಡ್ಡಿ ಪಲ್ಲೆ ಮಾಡ್ಕೊಂಡು ಬರ್ತೇವಿ. ಏನೂ ಬೆಳದಿರಲಿಲ್ಲ, ತುಟ್ಟಿ ಅನಿಸ್ತು ಅಂದ್ರ ಕಾಳು ಕಡಿ ಅಂತೂ ಇದ್ದೇ ಇರ್ತಾವಲ್ರಿ. ಮಳಿಗಾಲದಾಗ ಕಾಳುಕಡಿ ಮಾಡೂದು, ಚಳಿಗಾಲದಾಗ ತಪ್ಪಲಪಲ್ಯ, ಬ್ಯಾಸಗಿ ಯೊಳಗ ಮೊಸರು, ಮಜ್ಗಿ ಹಿಂಗ ಏನರೆ ಮಾಡ್ತೀವಿ.

ಸುಳ್ಳು ಯಾಕ ಹೇಳೂನ್ರಿ, ಮೊದಲೆಲ್ಲ ಎರಡು ರೊಟ್ಟಿ ಅಂದ್ರ ಹಂಚಿನಗಲ ರೊಟ್ಟಿ ಇರ್ತಿದ್ವು. ಈಗ ಅಂಗೈ ಅಗಲ ಮಾಡ್ತೀವಿ. ಒಲಿ ಖರ್ಚು ಹೆಚ್ಚಾಗ್ತದ. ಕೊಡೋರು ಹೆಚ್ಗಿ ಮಾಡಿದ್ರ ಕೊಡೂದಿಲ್ಲ. ನಾವೇನು ಕುಂದ್ರಾಕ ಕುರ್ಚಿ, ಟೇಬಲ್ ತರೂದಿಲ್ಲ. ಬನದಮ್ಮನ ಅಂಗಳದಾಗ ಭಕ್ತರು ನೆಲದ ಮ್ಯಾಲೆ ಚಕ್ಕಳಮಕ್ಕಳ ಹಾಕ್ಕೊಂಡು ಕುಂತು ಉಂಡ್ರಂದ್ರ ನಮಗೂ ಸಮಾಧಾನ. ಅವರಿಗೂ ಸಮಾಧಾನ.

ಅವ್ವಾರ, ಸೋಡಾ ಹಾಕೂದಾಗಲಿ, ಬಣ್ಣಾ ಹಾಕೂದಾಗಲಿ ಏನೂ ಮಾಡೂದಿಲ್ಲ. ಬುತ್ತಿಯೂಟಕ್ಕ ತಂದಿದ್ದನ್ನೇ ನಾವೂ ಉಣ್ತೇವಿ. ಸುಳ್ಳೂ ತಟವಟ ಗೊತ್ತಿಲ್ಲ ನೋಡ್ರಿ... ಬನದಮ್ಮ ನಡಿಸಿಕೊಂಡು ಹೊಂಟಾಳ. ನಡಕೊಂಡು ಹೊಂಟದ. ಹೆಣ್ಮಕ್ಕಳ ಜೀವನ ಸರಳಲ್ರಿ, ಅಂಥಾ ದೇವಾನುದೇವತೆಗಳೇ ಕಷ್ಟ ಉಂಡು ಗೆದ್ದು ಬಂದಾರ. ಇನ್ನ ನಾವಂತೂ ಮನುಷಾರು. ಎಲ್ಲಾ ದೇವರ ಮ್ಯಾಲೆ ಭಾರ ಹಾಕೂದದ, ಹಾಡೂದದ, ಉಣ್ಣೂದದ, ಮುನ್ನಡಿಯೂದದ.

ಹೆಣ್ಮಕ್ಕಳು ದಗದ ಮಾಡ್ಲಿಕ್ರ ನಡಿಯೂದೆ ಇಲ್ರಿ.. ಬದುಕಿನ ಬಂಡಿಗೆ ನಾವ ಹೆಚ್ಗಿ ಶಕ್ತಿ ಕೊಡಬೇಕಾಗ್ತದ. ಹೊರಗ ದುಡೀಲಿಕ್ರ, ಮನೀ ಕೆಲಸೇನು ಕಡಿಮಿ ಇರ್ತಾವಂತೀರಿ? ಮಕ್ಕಳನ್ನ ಜ್ವಾಕಿ ಮಾಡಬೇಕು. ಅಡಗಿಮನಿ ನೋಡಬೇಕು.. ಹೊರಗೂ ಮೈಕೈ ಮಣ್ಣು ಮಾಡ್ಕೊಬೇಕು. ಅಂಥಾ ಜೀವದಂಥಾ ಜೀವಾನ್ನ ಧರಿಗೆ ತರ್ತೀವಿ. ಇನ್ನ ಆ ನೋವು, ಕಷ್ಟದ ಮುಂದ ಇವೆಲ್ಲ ಯಾವ ಲೆಕ್ಕ?

ಅನುಕೂಲ ಹೆಚ್ಚೇನಿಲ್ಲ. ಆದ್ರ ಮನಸಿಗೆ ಬೇಕನಿಸಿದ್ರ ಎಲ್ಲಾನೂ ಬೇಕನಸ್ತದ್ರಿ. ಅದಕ್ಕ ಎಲ್ಲಿ ನಿಲುಗಡೆ ಅನ್ನೂದದ? ತಗೀರಿ.. ಮಾತೀಗೆ ಕೊನಿ ಇರೂದಿಲ್ಲ. ಬೇಕಂದ್ರ ಬೇಕನಸ್ತದ. ಬ್ಯಾಡಂದ್ರ ಅರಾಮಿರ್ತೀವಿ.

ಹೀಗೆ ಹೇಳುತ್ತ ತಮ್ಮ ಬುತ್ತಿ ಬುಟ್ಟಿಯನ್ನು ಹೊತ್ತು ಹೊರಟರು ಅನ್ನಪೂರ್ಣೆಯರು..



ರೊಟ್ಟಿ ಬುತ್ತಿಯೊಂದಿಗೆ ಅನ್ನಪೂರ್ಣೆಯರು...!

ಬಾದಾಮಿಯ ಬನಶಂಕರಿಯಲ್ಲಿ ಮೂರ್ನಾಲ್ಕು ದಶಕಗಳಿಂದ ನಿತ್ಯ ಬುತ್ತಿಯೂಟ ಮಾರಾಟ ಮಾಡುವ ಹಿರಿಯ ಜೀವಗಳ ಬದುಕಿನ ಚಿತ್ರಣದ ವಿಡಿಯೊಗಾಗಿ ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ...

ಪ್ರಜಾವಾಣಿ ನೋಡಿಯೊ

https://bit.ly/3K7yEnf



ಬುತ್ತಿಯಲ್ಲಿರುವ ರೊಟ್ಟಿ- ಪಲ್ಯೆ. ಚಿತ್ರಗಳು: ಗೋವಿಂದರಾಜ ಜವಳಿ

ಲೈಂಗಿಕ ಹಿಂಸೆ ಸಹಜ ಪ್ರವೃತ್ತಿಯೇ?



ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

• ಲೈಂಗಿಕ ದೌರ್ಜನ್ಯ ಮತ್ತು ಹಿಂಸೆ ಮನುಷ್ಯನಲ್ಲಿ ಇರಬಹುದಾದ ಸುಪ್ತಭಾವಗಳೇ? ಅವಕಾಶ ಸಿಕ್ಕರೆ ಎಲ್ಲರೂ ಈ ಪ್ರಯತ್ನ ನಡೆಸುವರೇ? ಅಥವಾ ಇದೊಂದು ಮನಸ್ಥಿತಿಯೇ?

ಹೆಸರು ಊರು ತಿಳಿಸಿಲ್ಲ.

ಬಹು ಕುತೂಹಲಕರ ಮತ್ತು ಪ್ರಮುಖವಾದ ಪ್ರಶ್ನೆ ಇದು. ಲೈಂಗಿಕತೆಯಲ್ಲಿ ಮೇಲ್ನೋಟಕ್ಕೆ ಸ್ವಲ್ಪ ದೈಹಿಕ ಹಿಂಸೆಯಿರುವಂತೆ ಕಾಣಿಸಬಹುದು. ಇಂತಹ ಪ್ರವೃತ್ತಿಯನ್ನು ಸಾಕಷ್ಟು ಕಾಡುಪ್ರಾಣಿಗಳಲ್ಲಿ ಗುರುತಿಸಬಹುದು. ಉದಾಹರಣೆಗೆ ಹುಲಿಗಳು ಮಿಲನದ ಸಂದರ್ಭದಲ್ಲಿ ಸಂಗಾತಿಯನ್ನು ಪರಚುತ್ತವೆ. ವಾಸ್ತವವಾಗಿ ಅಲ್ಲಿ ನಡೆಯುವುದೂ ಹಿಂಸೆಯಲ್ಲ. ಏಕೆಂದರೆ ಸಂಗಾತಿಗೆ ದೈಹಿಕ ನೋವನ್ನು ಉಂಟುಮಾಡುವ ಉದ್ದೇಶವಿರುವುದಿಲ್ಲ. ಇದು ಮಿಲನದ ಉನ್ಮಾದದಲ್ಲಿ ಇಬ್ಬರ ಒಪ್ಪಿಗೆಯಿಂದ ನಡೆಯುವ ಸಹನೀಯ ದೈಹಿಕ ಆಘಾತ ಮಾತ್ರ. ಈ ಪ್ರವೃತ್ತಿ ಸಹನೀಯ ಮಟ್ಟದಲ್ಲಿ ಮಾನವರಲ್ಲಿಯೂ ಕಾಣಿಸಬಹುದು. ಚುಂಬಿಸುವಾಗ ಹಗುರಾಗಿ ಕಚ್ಚುವುದು, ಪ್ರೀತಿಯಿಂದ ಕೊಡುವ ಏಟುಗಳು ಉಸಿರೆಳೆಯಲು ಅವಕಾಶವಿಲ್ಲದಂತೆ ಅಪ್ಪುವುದು ಮುಂತಾದವು ಸಹನೀಯ ಮಿತಿಯಲ್ಲಿ ಇಷ್ಟಪಟ್ಟು ಸ್ವೀಕರಿಸುವ ಹಿಂಸೆಗಳಾಗಿರಲು ಸಾಧ್ಯ. ಆದರೆ ಹಿಂಸೆಯೇ ಲೈಂಗಿಕ ಸುಖದ ಮೂಲ ಪ್ರೇರಣೆಯಾದಾಗ, ಹಿಂಸೆಯಿಲ್ಲದ ಲೈಂಗಿಕತೆ ಸಾಧ್ಯವೇ ಇಲ್ಲ ಎನ್ನಿಸಿದಾಗ, ಸಂಗಾತಿಯ ಒಪ್ಪಿಗೆಯಿಲ್ಲದೆ ಅಥವಾ ವಿರೋಧವಿದ್ದಾಗಲೂ ನಡೆಯುವ ಹಿಂಸೆ ಲೈಂಗಿಕ ದೌರ್ಜನ್ಯವಾಗುತ್ತದೆ. ಇದೊಂದು ರೀತಿಯ ಮಾನಸಿಕ ವಿಕೃತಿ. ಇಂತಹ ಮಾನಸಿಕ ವಿಕೃತಿ ಎಲ್ಲರಲ್ಲಿಯೂ ಇರಬಹುದಾದ ಸಹಜ ಪ್ರವೃತ್ತಿಯಲ್ಲ. ಬಾಲ್ಯದ ಅನುಭವಗಳ ಆಧಾರದ ಮೇಲೆ ಆ ವ್ಯಕ್ತಿ ಕಟ್ಟಿಕೊಂಡಿರುವ ಸಂಬಂಧಗಳ ಮತ್ತು ಲೈಂಗಿಕತೆಯ ಮಾನಸಿಕ ಚಿತ್ರಣದ ಪರಿಣಾಮ ಇದು. ಇಂಥವರು ತಮ್ಮದೇ ದೈಹಿಕ ನೋವುಗಳಿಗೂ ಕಲ್ಲಾಗಿರುತ್ತಾರೆ. ಹಾಗಾಗಿ ಇತರರ ನೋವು ಇವರನ್ನು ತಲುಪುವುದಿಲ್ಲ. ಹೆಚ್ಚಿನ ಸಂದರ್ಭದಲ್ಲಿ ಇಂಥ ವ್ಯಕ್ತಿಗಳು ಬಾಲ್ಯದಲ್ಲಿ ಲೈಂಗಿಕ ಹಿಂಸಾಚಾರ ಸೇರಿದಂತೆ ಬೇರೆಬೇರೆ ರೀತಿಯ ದೈಹಿಕ ಆಘಾತವನ್ನು ನೋಡುತ್ತ ಮತ್ತು ಅನುಭವಿಸುತ್ತ ವಿರೋಧಿಸಲಾಗದ ಅಸಹಾಯಕತೆಯಲ್ಲಿ ಬೆಳೆದಿರುತ್ತಾರೆ. ಇದು ನಮ್ಮ ಬುದ್ಧಿ ತರ್ಕಗಳಗಿಂತ ಬಹಳ ಆಳವಾಗಿ ದಾಖಲಾಗಿರುತ್ತದೆ. ಹಾಗಾಗಿ ಹಿಂಸೆ ಸಹಜವಾದದ್ದು ಅಥವಾ ಇರುವುದೇ ಹೀಗೆ ಎಂದು ಅನ್ನಿಸಬಹುದು. ಇಂಥವರನ್ನು ಮಾನಸಿಕ ಚಿಕಿತ್ಸೆಯಿಂದ ಗುಣಪಡಿಸಬಹುದು.

• 24ರ ಯುವಕ. ನಿತ್ಯ ಹಸ್ತಮೈಥುನ ಮಾಡಿಕೊಳ್ಳಬೇಕೆನಿಸುತ್ತದೆ. ಶೀಘ್ರಸ್ಖಲನದ ಸಮಸ್ಯೆಯೂ ಇದೆ. ಪರಿಹಾರವೇನು.

ಹೆಸರು ಊರು ತಿಳಿಸಿಲ್ಲ.

ಹಸ್ತಮೈಥುನದಿಂದ ದೈಹಿಕ ತೊಂದರೆಗಳಾಗುವುದಿಲ್ಲ ಎಂದು ಈ ಅಂಕಣದಲ್ಲಿ ಹಲವಾರು ಬಾರಿ ಉತ್ತರಿಸಲಾಗಿದೆ. ನಿಮ್ಮನ್ನು ಕಾಡುತ್ತಿರುವುದು ಹಸ್ತಮೈಥುನ ಕುರಿತಾದ ಅನಗತ್ಯ ಆತಂಕ ಮತ್ತು ತಪ್ಪುತಿಳಿವಳಿಕೆಗಳು ಮಾತ್ರ. ಶೀಘ್ರಸ್ಖಲನ ಕೂಡ ನಿಮ್ಮ ಆತಂಕದ ಪರಿಣಾಮ. ಶೀಘ್ರಸ್ಖಲನದ ಕುರಿತಾಗಿ ನೀವು ಯೋಚಿಸಬೇಕಾಗಿರುವುದು ಸಂಗಾತಿಯ ಜೊತೆ ಲೈಂಗಿಕ ಸುಖವನ್ನು ಹಂಚಿಕೊಳ್ಳಲು ಅಡ್ಡಿಯಾದಾಗ ಮಾತ್ರ. ಹಾಗಾಗಿ ಮದುವೆಯಾದ ಮೇಲೆ ಇದು ಸಮಸ್ಯೆ ಎನ್ನಿಸಿದರೆ ಇಬ್ಬರೂ ಲೈಂಗಿಕ ಮನೋಚಿಕಿತ್ಸಕರನ್ನು ಭೇಟಿಯಾಗಬಹುದು. ಮಾರುಕಟ್ಟೆಯಲ್ಲಿ ಸಿಗುವ ಯಾವುದೇ ಔಷಧಗಳನ್ನು ಬಳಸಿ ಮೋಸಹೋಗಬೇಡಿ.


• 24ರ ಯುವತಿ. ನಾನು ಪ್ರೀತಿಸುವ ಹುಡುಗನು ಅಲ್ಪಾಯುಷಿ ಎಂದು ಜಾತಕದಲ್ಲಿ ಹೇಳಿದೆ. ನನಗೆ ಅದರಲ್ಲಿ ನಂಬಿಕೆಯಿಲ್ಲ. ನನ್ನ ತಾಯಿಗೆ ಜ್ಯೋತಿಷ್ಯದಲ್ಲಿ ನಂಬಿಕೆಯಿರುವುದರಿಂದ ಅವರು ಗೊಂದಲದಲ್ಲಿದ್ದಾರೆ. ಏನು ಮಾಡಬೇಕೆಂದು ತೋಚುತ್ತಿಲ್ಲ. ಸಲಹೆ ನೀಡಿ.

ಹೆಸರು ಊರು ತಿಳಿಸಿಲ್ಲ.

ನಿಮಗೆ ಜ್ಯೋತಿಷ್ಯದಲ್ಲಿ ನಂಬಿಕೆಯಿಲ್ಲ ಎಂದು ಹೇಳಿದ್ದೀರಿ. ಹಾಗಿದ್ದರೂ ಹುಡುಗನ ಜಾತಕವನ್ನು ಜ್ಯೋತಿಷಿಗಳಿಗೆ ತೋರಿಸಲು ಅವಕಾಶ ಕೊಟ್ಟಿದ್ದೀರಲ್ಲವೇ? ಈಗ ಜಾತಕವನ್ನು ನಂಬದಿದ್ದರೂ ತಾಯಿಯ ಭಯ ಗೊಂದಲಗಳನ್ನು ವಿರೋಧಿಸಿ ನಡೆದರೆ ಅವರಿಗೆ ನೋವುಂಟು ಮಾಡುತ್ತಿದ್ದೇನೆ ಎಂದುಕೊಳ್ಳುತ್ತಿದ್ದೀರಿ. ನಿಮ್ಮ ಜೀವನದ ನಿರ್ಧಾರಗಳನ್ನು ನೀವೇ ತೆಗೆದುಕೊಳ್ಳುತ್ತಿಲ್ಲ, ಆದರೆ ಬೇರೆಯವರ ನಿರ್ಧಾರಗಳನ್ನು ಒಪ್ಪಿಕೊಳ್ಳಲೂ ಆಗುತ್ತಿಲ್ಲ- ಇದು ನಿಮ್ಮ ದ್ವಂದ್ವವಲ್ಲವೇ? ನಿಮ್ಮ ಜೀವನದ ನಿರ್ಧಾರಗಳನ್ನು ನೀವೇ ತೆಗೆದುಕೊಂಡು ಅದರ ಸೋಲು ಗೆಲುವುಗಳ ಜವಾಬ್ದಾರಿಯನ್ನು ನೀವೇ ಹೊರುವುದಕ್ಕೆ ಸಿದ್ಧರಾಗಬೇಕು. ನಿಮ್ಮ ಆಯ್ಕೆಗಳು ತಾಯಿಯ ವಿರುದ್ಧವಾಗಿಲ್ಲ ಎಂದು ಅವರಿಗೆ ಮನವರಿಕೆ ಮಾಡಲು ಪ್ರಯತ್ನಿಸಿ. ಹಾಗೊಮ್ಮೆ ಸಾಧ್ಯವಾಗದಿದ್ದರೂ ಅವರೊಡನೆ ಒಳ್ಳೆಯ ಸಂಬಂಧ ಮುಂದುವರಿಸಲು ಬೇಕಾದಷ್ಟು ಇತರ ದಾರಿಗಳಿವೆ. ಮೂಲ ಪ್ರಶ್ನೆ ಅನಗತ್ಯವಾಗಿ ಜಾತಕವನ್ನು ತೋರಿಸಿ ನಿಮ್ಮೊಳಗೆ ಆಹ್ವಾನಿಸಿಕೊಂಡಿರುವ ಭಯವನ್ನು ಏನು ಮಾಡುತ್ತೀರಿ ಎನ್ನುವುದು. ಅದನ್ನು ನಿಭಾಯಿಸುವುದು ಸಾಧ್ಯವಿದ್ದರೆ ನಿರ್ಧಾರಗಳು ಸುಲಭ.

ಏನಾದ್ರೂ ಕೇಳ್ಬೋದು.... ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಷೇರುಪೇಟೆ ವಹಿವಾಟು 652



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17,956
ಇಂದಿನ ಅಂತ್ಯ	17,758
▼	198
ದಿನದ ಕನಿಷ್ಠ	17,710

ವಿನಿಮಯ ದರ

$ ಡಾಲರ್	79.84
£ ಪೌಂಡ್	94.74
€ ಯುರೊ	80.37
¥ ಯೆನ್ (100ಕ್ಕೆ)	58

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1660 (1660)
ಸೋಯಾ (ರಿಫೈನ್ಡ್)	₹1240 (1250)
ಸೂರ್ಯಕಾಂತಿ (ರಿಫೈನ್ಡ್)	₹1550 (1555)
ಪಾಮೋಲಿನ್	₹1190 (1207)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹305-650
ದ್ವಿತಳಿ (ಬಿ.ವಿ)	₹391-778

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹159
ಆರ್ಎಸ್ಎಸ್-5	₹150
ಗುಡ್ ಲಾಟ್	₹142

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1000-1300
ಮಧ್ಯಮ	₹600-1000
ಸಣ್ಣ	₹400-600

ಮಹಿಳೆಯರಿಗೇ ಅಧಿಕ ಲೈಂಗಿಕ ಸಂಗಾತಿಗಳು

ನವದೆಹಲಿ (ಪಿಟಿಐ): ದೇಶದ 11 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶ-ಗಳಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಲೈಂಗಿಕ ಸಂಗಾತಿಗಳನ್ನು ಹೊಂದಿದ್ದಾರೆ ಎಂಬ ಅಂಶ ಸಮೀಕ್ಷೆಯೊಂದರಿಂದ ತಿಳಿದು ಬಂದಿದೆ.

ಆದರೆ, ತಮ್ಮ ಪತ್ನಿಯಲ್ಲದ ಅಥವಾ ಸಹಬಾಳ್ವೆ ನಡೆಸದಿರುವ ಇತರ ವ್ಯಕ್ತಿಯೊಂದಿಗೆ ಸಂಭೋಗ ನಡೆಸಿರುವ ಪುರುಷರ ಸಂಖ್ಯೆ ಶೇ 4ರಷ್ಟಿದ್ದರೆ, ಮಹಿಳೆಯರ ಪ್ರಮಾಣ ಶೇ 0.5ರಷ್ಟಿತ್ತು ಎಂದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಎನ್ಎಫ್ಎಚ್ಎಸ್) ಅಂಕಿ-ಅಂಶಗಳು ಹೇಳುತ್ತವೆ.

1.1 ಲಕ್ಷ ಮಹಿಳೆಯರು ಹಾಗೂ 1 ಲಕ್ಷ ಪುರುಷರು ಈ ಸಮೀಕ್ಷೆಯ ಭಾಗವಾಗಿದ್ದರು. ರಾಜಸ್ಥಾನ, ಹರಿಯಾಣ, ಚಂಡೀಗಡ, ಜಮ್ಮು-ಕಾಶ್ಮೀರ, ಲಡಾಖ್, ಮಧ್ಯಪ್ರದೇಶ, ಅಸ್ಸಾಂ, ಕೇರಳ, ಲಕ್ಷದ್ವೀಪ, ಪುದುಚೇರಿ ಹಾಗೂ ತಮಿಳುನಾಡಿನಲ್ಲಿ ಈ ವಿದ್ಯಮಾನ ದಾಖಲಾಗಿದೆ.

ರಾಜಸ್ಥಾನದಲ್ಲಿ ಮಹಿಳೆಯರು ಗರಿಷ್ಠ ಮೂವರಿಗಿಂತ ಅಧಿಕ ಲೈಂಗಿಕ ಸಂಗಾತಿಗಳನ್ನು ಹೊಂದಿದ್ದಾರೆ. ಪುರುಷರು ಹೊಂದಿರುವ ಲೈಂಗಿಕ ಸಂಗಾತಿಗಳ ಸಂಖ್ಯೆ ಒಬ್ಬರಿಗಿಂತ ಹೆಚ್ಚು ಎಂದು ಸಮೀಕ್ಷೆಯಿಂದ ತಿಳಿದುಬಂದಿದೆ.

ಈ ಸಮೀಕ್ಷೆಯನ್ನು 2019-21ರ ಅವಧಿಯಲ್ಲಿ ನಡೆಸಲಾಗಿದ್ದು, 28 ರಾಜ್ಯಗಳು ಹಾಗೂ 8 ಕೇಂದ್ರಾಡಳಿತ ಪ್ರದೇಶಗಳ 707 ಜಿಲ್ಲೆಗಳಲ್ಲಿ ಮಾಹಿತಿ ಸಂಗ್ರಹಿಸಲಾಗಿದೆ.

ನೀತಿ ನಿರೂಪಣೆ ಹಾಗೂ ಪರಿಣಾಮಕಾರಿ ಅನುಷ್ಠಾನಕ್ಕೆ ನೆರವಾಗಬಲ್ಲ ಸಾಮಾಜಿಕ-ಆರ್ಥಿಕ ಹಾಗೂ ಇತರ ಅಂಶಗಳನ್ನು ಸಹ ಈ ಸಮೀಕ್ಷೆಯ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಕಾರ್ಕಳ	
ಹಳತು	40000-46500
ಶಿವಮೊಗ್ಗ	
ಬೆಟ್ಟೆ	52169-55572
ಗೊರಬಲು	17109-39069
ರಾಶಿ	48658-52599
ಸರಕು	6000-80296
ಕುಂದಾಪುರ	
ಹಳೆಚಾಲಿ	50000-56000
ಹೊಸಚಾಲಿ	40000-46500
ಪುತ್ತೂರು	
ಹೊಸತು	33500-46500
ಸಿದ್ದಾಪುರ	
ಬಿಳಿಗೋಟು	28199-35699
ಚಾಲಿ	38099-43109
ಕೋಕ	25690-35190
ಕೆಂಪುಗೋಟು	28089-33889
ರಾಶಿ	47599-51299
ತಟ್ಟಿಬೆಟ್ಟೆ	38169-49589
ಶಿರಸಿ	
ಬೆಟ್ಟೆ	35601-48699
ಬಿಳಿಗೋಟು	21919-35699
ಚಾಲಿ	36300-44221
ರಾಶಿ	46399-53099
ಯಲ್ಲಾಪುರ	
ಬಿಳಿಗೋಟು	28899-35169
ಚಾಲಿ	38020-43500
ಕೋಕ	18600-32812
ಕೆಂಪುಗೋಟು	31219-37199
ರಾಶಿ	50050-55939
ತಟ್ಟಿಬೆಟ್ಟೆ	40269-49770
ಆಪಿ	76269-76269

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16500	15700	15900	214.70 ಸೆಂಟ್ಸ್
ಎಸಿ	9100	8200	8825	
ಆರ್‌ಪಿ	9900	9500	9750	ಲಂಡನ್
ಆರ್‌ಸಿ	4900	4500	4700	2215 ಡಾಲರ್ಸ್

ಲಾಭ ಗಳಿಕೆ ವಹಿವಾಟು, 5 ದಿನಗಳ ಓಟಕ್ಕೆ ತಡೆ

ಸೆನ್ಸೆಕ್ಸ್ 652 ಅಂಶ ಕುಸಿತ

ಮುಂಬೈ (ಪಿಟಿಐ): ಐದು ದಿನಗಳಿಂದ ಗಳಿಕೆ ಕಂಡಿದ್ದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರ ಕುಸಿತ ದಾಖಲಿಸಿದವು. ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಷೇರುಗಳನ್ನು ಮಾರಾಟ ಮಾಡಿದ್ದು ಕುಸಿತಕ್ಕೆ ಒಂದು ಕಾರಣ.

ರೂಪಾಯಿ ಮೌಲ್ಯ ಇಳಿಕೆ ಹಾಗೂ ವಿದೇಶಿ ಬಂಡವಾಳದ ಹೊರಹರಿವು ಕೂಡ ಕುಸಿತಕ್ಕೆ ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 652 ಅಂಶ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 198 ಅಂಶ ಕುಸಿದವು.

'ಜಾಗತಿಕ ಷೇರುಪೇಟೆಗಳಲ್ಲಿನ ಮಂದಗತಿಯ ವಹಿವಾಟು ಹಾಗೂ ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ನಡೆಸಿದ ವಹಿವಾಟು ದೇಶದ ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಉಂಟುಮಾಡಿತು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಶುಕ್ರವಾರಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಒಟ್ಟು 183 ಅಂಶ, ನಿಫ್ಟಿ 60 ಅಂಶ ಏರಿಕೆ ಕಂಡಂತಾಗಿದೆ. 'ಸಾಲದ ಮೇಲಿನ ಬಡ್ಡಿ ದರಕ್ಕೆ ಹೆಚ್ಚು ಸ್ಪಂದಿಸುವ ಬ್ಯಾಂಕಿಂಗ್, ಆಟೊಮೊಬೈಲ್ ಮತ್ತು ರಿಯಾಲ್ಟಿ ಷೇರುಗಳಲ್ಲಿ ಲಾಭ ಗಳಿಕೆಯ ವಹಿವಾಟು ಹೆಚ್ಚು ನಡೆದಿದೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ಡೆಪ್ಯುಟಿ ಉಪಾಧ್ಯಕ್ಷ ಅಮೋಲ್ ಅಠವಳೆ ಹೇಳಿದ್ದಾರೆ.

ಬಿಎಸ್ಇ ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ಸೂಚ್ಯಂಕಗಳು ಕ್ರಮವಾಗಿ ಶೇ 1.27ರಷ್ಟು ಮತ್ತು ಶೇ 0.93ರಷ್ಟು ಇಳಿಕೆ ಕಂಡಿವೆ.

ಸೋಲ್, ಶಾಂಘೈ, ಟೋಕಿಯೊ ಷೇರುಪೇಟೆಗಳು ಕುಸಿದಿವೆ. ಹಾಂಗ್‌ಕಾಂಗ್ ಷೇರುಪೇಟೆಯಲ್ಲಿ ಏರಿಕೆ ದಾಖಲಾಗಿದೆ.

ಬಿಎಸ್ಇ: ವಲಯವಾರು ಇಳಿಕೆ (%)

ವಲಯ	ಇಳಿಕೆ (%)
ರಿಯಾಲ್ಟಿ	2.14
ಲೋಹ	1.84
ಎಫ್ಎಂಸಿಜಿ	1.24
ಹಣಕಾಸು	1.63
ತೈಲ ಮತ್ತು ಅನಿಲ	1.62
ಬ್ಯಾಂಕ್	1.61

25ರಿಂದ ಸಿಐಐ ನಾವೀನ್ಯ ಶೃಂಗಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ನಾವೀನ್ಯ ಶೃಂಗಸಭೆಯ 18ನೇ ಆವೃತ್ತಿ 'ಇನ್ನೋವರ್ಜ್-2022' ಇದೇ 25ರಿಂದ ಮೂರು ದಿನ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಭಾರತೀಯ ಕೈಗಾರಿಕಾ ಒಕ್ಕೂಟವು (ಸಿಐಐ) ಶುಕ್ರವಾರ ತಿಳಿಸಿದೆ.

ಭಾರತೀಯ ಕೈಗಾರಿಕೆಗಳು ನಾವೀನ್ಯದ ಆಧಾರಲ್ಲಿ ಬೆಳವಣಿಗೆ ಸಾಧಿಸಿ, ಆ ಮೂಲಕ ಡಿಜಿಟಲ್ ಯುಗದಲ್ಲಿ ಜಾಗತಿಕವಾಗಿ ದೊಡ್ಡ ಮಟ್ಟದಲ್ಲಿ ಬೆಳೆಯಲು ಈ ಶೃಂಗಸಭೆ ನೆರವಾಗಲಿದೆ ಎಂದು ಸಿಐಐ ಹೇಳಿದೆ.

'ಶಿಕ್ಷಣ ಮತ್ತು ಕ್ರೀಡೆ ಈ ಬಾರಿಯ ಶೃಂಗದಲ್ಲಿ ಹೊಸದಾಗಿ ಸೇರ್ಪಡೆ ಆಗಿರುವ ವಿಷಯಗಳು. ಭವಿಷ್ಯದಲ್ಲಿ ಶಿಕ್ಷಣ ಮತ್ತು ಕೌಶಲವೃದ್ಧಿಯ ಕುರಿತು ಹಾಗೂ ಕ್ರೀಡೆಗಳಲ್ಲಿ ತಂತ್ರಜ್ಞಾನ ಆಧಾರಿತ ನಾವೀನ್ಯದ ಕುರಿತು ತಜ್ಞರು ಮಾತನಾಡಲಿದ್ದಾರೆ' ಎಂದು ಸಿಐಐ ಕರ್ನಾಟಕದ ಮಾಜಿ ಅಧ್ಯಕ್ಷ ರಮೇಶ್ ರಾಮದೊರೈ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಜಾಗತಿಕ ನಾವೀನ್ಯ ಕೇಂದ್ರವಾಗುವ ಸಾಮರ್ಥ್ಯ ಮತ್ತು ಸಂಪನ್ಮೂಲಗಳನ್ನು ಭಾರತ ಹೊಂದಿದೆ. ಇದಕ್ಕಾಗಿ ಬಲಿಷ್ಠವಾದ ನಾವೀನ್ಯ ವ್ಯವಸ್ಥೆ ರೂಪಿಸಬೇಕಿದೆ. ಆ ಮೂಲಕ ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡಬೇಕು' ಎಂದು ಸಿಐಐ ಮಾಜಿ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್ ಹೇಳಿದರು.

ಸುದ್ದಿ 2 ನಿಮಿಷ

ನೌಕರರ ವೇರಿಯೇಬಲ್ ಪೇ ತಡೆಹಿಡಿದ ವಿಪ್ರೊ

ನವದೆಹಲಿ (ಪಿಟಿಐ): ಐ.ಟಿ. ಸೇವಾ ಕಂಪನಿ ವಿಪ್ರೊ ತನ್ನ ನೌಕರರಿಗೆ ನೀಡುವ 'ವೇರಿಯೇಬಲ್ ಪೇ' ತಡೆಹಿಡಿದಿದೆ. ಕಂಪನಿಯ ಲಾಭಾಂಶ ಕಡಿಮೆ ಆಗುವ ಸಾಧ್ಯತೆ ಇರುವುದು, ಪ್ರತಿಭಾವಂತರನ್ನು ಕಂಪನಿಗೆ ಪೂರೈಸುವ ವ್ಯವಸ್ಥೆಯು ಅದಕ್ಷವಾಗಿರುವುದು ಇದಕ್ಕೆ ಕಾರಣ ಎಂದು ಮೂಲಗಳು ಹೇಳಿವೆ.

ವೇರಿಯೇಬಲ್ ಪೇ ಕಡಿತ ಮಾಡುತ್ತಿರುವ ಬಗ್ಗೆ ಕಂಪನಿಯು ತನ್ನ ನೌಕರರಿಗೆ ಇ-ಮೇಲ್ ಮೂಲಕ ಮಾಹಿತಿ ನೀಡಿದೆ ಎಂದು ಮೂಲಗಳು ವಿವರಿಸಿವೆ.

ಸಿ-ಸೂಟ್ ಹಂತದ ವ್ಯವಸ್ಥಾಪಕರಿಗೆ ವೇರಿಯೇಬಲ್ ಪೇ ಸಿಗುವುದೇ ಇಲ್ಲ. ಹೊಸದಾಗಿ ನೇಮಕ ಆದವರು ಹಾಗೂ ತಂಡಗಳ ನಾಯಕರು ವೇರಿಯೇಬಲ್ ಪೇನಲ್ಲಿ ಗರಿಷ್ಠ ಶೇಕಡ 70ರಷ್ಟು ಪಡೆಯಲಿದ್ದಾರೆ. ಪ್ರತಿಭಾವಂತರ ಮೇಲೆ ಹೆಚ್ಚಿನ ಹೂಡಿಕೆ ಹಾಗೂ ತಂತ್ರಜ್ಞಾನದ ಮೇಲಿನ ಹೂಡಿಕೆ ಕೂಡ ವೇರಿಯೇಬಲ್ ಪೇ ಕಡಿತಕ್ಕೆ ಒಂದು ಕಾರಣ ಎಂದು ಕಂಪನಿಯು ತಿಳಿಸಿದೆ ಎಂದು ಗೊತ್ತಾಗಿದೆ.

ಈ ಕುರಿತು ಪ್ರತಿಕ್ರಿಯೆಗೆ ಸಂಪರ್ಕಿಸಿದಾಗ ವಿಪ್ರೊ ಕಂಪನಿಯು, 'ವೇತನ ಹೆಚ್ಚಳದ ವಿಚಾರವಾಗಿ ನಾವು ಈ ಹಿಂದೆ ನೀಡಿದ್ದ ಹೇಳಿಕೆಯನ್ನು ಬದಲಿಸುವುದಿಲ್ಲ. ನಮ್ಮ ನೌಕರರಿಗೆ ವೇತನ ಏರಿಕೆಯು ಸೆಪ್ಟೆಂಬರ್ 1ರಿಂದ ಅನ್ವಯವಾಗಲಿದೆ. ವೇರಿಯೇಬಲ್ ಪೇ ವಿಚಾರದಲ್ಲಿ ಹೆಚ್ಚಿನ ಪ್ರತಿಕ್ರಿಯೆ ಇಲ್ಲ' ಎಂದು ಹೇಳಿದೆ.



ಟಾಟಾ ಪ್ಲೇ ಬಿಂಜ್‌ನಲ್ಲಿ 16 ಒಟಿಟಿ

ಬೆಂಗಳೂರು: ಒಟಿಟಿ ವೇದಿಕೆಗಳ ಮೂಲಕ ಮನರಂಜನಾ ಕಾರ್ಯಕ್ರಮಗಳನ್ನು, ಇಷ್ಟದ ಇತರ ಕಾರ್ಯಕ್ರಮಗಳನ್ನು ವೀಕ್ಷಿಸಲು ಬಯಸುವ ಎಲ್ಲರಿಗೂ ಈಗ ಟಾಟಾ ಪ್ಲೇ ಬಿಂಜ್ ಲಭ್ಯವಿದೆ ಎಂದು ಕಂಪನಿ ತಿಳಿಸಿದೆ.

16 ಒಟಿಟಿ ವೇದಿಕೆಗಳ ಮೂಲಕ ಲಭ್ಯವಾಗುವ ಎಲ್ಲವನ್ನೂ ಒಂದೇ ಆ್ಯಪ್ ಮೂಲಕ ಪಡೆಯಬಹುದು. ಸ್ಮಾರ್ಟ್‌ಫೋನ್ ಬಳಕೆದಾರರು ಟಾಟಾ ಪ್ಲೇ ಬಿಂಜ್ ಆ್ಯಪ್ ಬಳಸಿ ಇಷ್ಟು ಒಟಿಟಿಗಳಲ್ಲಿನ ಕಾರ್ಯಕ್ರಮಗಳನ್ನು ಒಂದೇ ಕಡೆ ವೀಕ್ಷಿಸಬಹುದು. ಆರಂಭಿಕ ಚಂದಾ ಮೊತ್ತ ತಿಂಗಳಿಗೆ ₹ 59.

ಸ್ಮಾರ್ಟ್‌ಫೋನ್ ಮೂಲಕ, ವೆಬ್‌ಸೈಟ್ ಮೂಲಕ ಹಾಗೂ ಟಿ.ವಿ. ಮೂಲಕ ಟಾಟಾ ಪ್ಲೇ ಬಿಂಜ್‌ನಲ್ಲಿನ ಕಾರ್ಯಕ್ರಮಗಳನ್ನು ವೀಕ್ಷಿಸುವ ಅವಕಾಶ ಇದೆ ಎಂದು ಪ್ರಕಟಣೆ ತಿಳಿಸಿದೆ.

ಟಾಟಾ ಪ್ಲೇ ಬಿಂಜ್ ಚಂದಾ ಪಡೆಯುವವರಿಗೆ ಜನಪ್ರಿಯ ಒಟಿಟಿ ವೇದಿಕೆಗಳಾದ ಡಿಸ್ನಿ+ಹಾಟ್‌ಸ್ಟಾರ್, ಜೀ5, ಸೋನಿಎಲ್‌ಐವಿ, ವೂಟ್ ಸೆಲೆಕ್ಟ್, ಹೊಯ್‌ಚೊಯ್, ನಮ್ಮ ಫ್ಲಿಕ್ಸ್, ಸನ್ ಎನ್‌ಎಕ್ಸ್‌ಟಿ, ಹಂಗಾಮಾ ಪ್ಲೇ, ಎರೋಸ್ ನೌ, ಶೆಮರೂಮಿ, ವೂಟ್ ಕಿಡ್ಸ್ ಸೇರಿದಂತೆ ಹಲವು ಒಟಿಟಿಗಳು ಲಭ್ಯವಾಗಲಿವೆ.

ಡೀಸೆಲ್ ರಫ್ತಿಗೆ ತೆರಿಗೆ ಏರಿಕೆ

ನವದೆಹಲಿ (ಪಿಟಿಐ): ಡೀಸೆಲ್ ರಫ್ತು ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಕೇಂದ್ರ ಸರ್ಕಾರವು ಪ್ರತಿ ಲೀಟರಿಗೆ ₹ 7ಕ್ಕೆ ಹೆಚ್ಚಿಸಿದೆ. ಅಲ್ಲದೆ, ವಿಮಾನ ಇಂಧನ (ಎಟಿಎಫ್) ರಫ್ತಿನ ಮೇಲೆ ಮತ್ತೆ ತೆರಿಗೆ ವಿಧಿಸಿದೆ.

ಡೀಸೆಲ್ ರಫ್ತಿನ ಮೇಲೆ ಲೀಟರಿಗೆ ₹ 5ರಷ್ಟು ತೆರಿಗೆ ಇತ್ತು. ಎಟಿಎಫ್ ರಫ್ತಿಗೆ ಲೀಟರಿಗೆ ₹ 2ರಷ್ಟು ತೆರಿಗೆ ವಿಧಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಅಧಿಸೂಚನೆಯಲ್ಲಿ ಹೇಳಲಾಗಿದೆ. ಎಟಿಎಫ್ ರಫ್ತಿಗೆ ತೆರಿಗೆಯನ್ನು ಈ ತಿಂಗಳ ಆರಂಭದಲ್ಲಿ ರದ್ದುಪಡಿಸಲಾಗಿತ್ತು.

ದೇಶೀಯವಾಗಿ ಉತ್ಪಾದನೆ ಆದ ಕಚ್ಚಾ ತೈಲದ ಮೇಲಿನ ತೆರಿಗೆಯನ್ನು ಪ್ರತಿ ಟನ್‌ಗೆ ₹ 13 ಸಾವಿರಕ್ಕೆ ಇಳಿಸಲಾಗಿದೆ. ಇದು ₹ 17,750 ಆಗಿತ್ತು.

ಹವಾಮಾನ ಬದಲಾವಣೆ: ಸೌರ, ಪವನ ಶಕ್ತಿಗೆ ಧಕ್ಕೆ?



ನವದೆಹಲಿ (ಪಿಟಿಐ): ಹವಾಮಾನ ಬದಲಾವಣೆಯು ಭಾರತದಲ್ಲಿ ಸೌರ ಮತ್ತು ಪವನ ಶಕ್ತಿ ಉತ್ಪಾದನೆ ಮೇಲೆ ನಕರಾತ್ಮಕ ಪರಿಣಾಮ ಬೀರುವ ಸಂಭವ ಇದೆ ಎಂದು ಪುಣೆಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮೆಟಿಯೊರಾಲಜಿ (ಉಷ್ಣ ಹವಾಮಾನ) ಅಧ್ಯಯನ ವರದಿ ಹೇಳಿದೆ.

ಈ ಅಧ್ಯಯನ ವರದಿ ಇತ್ತೀಚೆಗೆ ಪೀರ್-ರಿವೀವ್ಡ್ ಜರ್ನಲ್‌ನಲ್ಲಿ ಪ್ರಕಟವಾಗಿದೆ. ಹವಾಮಾನ ಬದಲಾವಣೆಯ ಸಂಬಂಧ ಇಂಟರ್ ಗವರ್ನಮೆಂಟಲ್ ಪ್ಯಾನಲ್ ಆನ್ ಕ್ಲೈಮೆಟ್ ಚೇಂಜ್ (ಐಪಿಸಿಸಿ) ರೂಪಿಸಿದ ಹವಾಮಾನ ವಿಶ್ಲೇಷಣೆಯ ಅತ್ಯಾಧುನಿಕ ಮಾದರಿಗಳನ್ನು ಬಳಸಿಕೊಂಡು ಸಂಶೋಧಕರು, ಭಾರತೀಯ ಉಪಖಂಡದ ನವೀಕರಿಸಬಹುದಾದ ಇಂಧನ ವಲಯದ ಪವನ ಮತ್ತು ಸೌರ ಶಕ್ತಿಯ ಮುನ್ಸೂಚನೆಯ ವಿಶ್ಲೇಷಣೆ ನಡೆಸಿದ್ದಾರೆ.

ಉತ್ತರ ಭಾರತದಲ್ಲಿ ಋತುಮಾನ ಮತ್ತು ವಾರ್ಷಿಕ ಗಾಳಿಯ ವೇಗ ಕಡಿಮೆಯಾಗುವ ಮತ್ತು ದಕ್ಷಿಣ ಭಾರತದಲ್ಲಿ ಹೆಚ್ಚಾಗುವ ಸಾಧ್ಯತೆ ಇದೆ. ಒಡಿಶಾ ಮತ್ತು ದಕ್ಷಿಣದ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡಿನ ದಕ್ಷಿಣ ಕರಾವಳಿಯಲ್ಲಿ ಹವಾಮಾನ ಬದಲಾವಣೆಯಿಂದ ಗಾಳಿಯ ವೇಗ ವೃದ್ಧಿಯಾಗುವ ಸಂಭವನೀಯತೆ ತೋರಿಸುತ್ತಿದೆ ಎಂದು ಅಧ್ಯಯನ ಹೇಳಿದೆ.


ಈ ಅಧ್ಯಯನದ ಸಂಶೋಧಕರಲ್ಲಿ ಒಬ್ಬರಾದ ಪಾರ್ಥಸಾರಥಿ ಮುಖ್ಯೋಪಾಧ್ಯಾಯ, 'ನಮ್ಮ ಉದ್ಯಮವು ಬದಲಾಗುತ್ತಿರುವ ಹವಾಮಾನಕ್ಕೆ ಹೊಂದಿಕೊಳ್ಳಬೇಕಾಗಿದೆ. ನಮ್ಮ ತಂತ್ರಜ್ಞಾನಗಳು ವೇಗ ಕಾಪಾಡಿಕೊಳ್ಳಬೇಕು' ಎಂದರು.

ತ್ವರಿತ ವಿಚಾರಣೆ ನ್ಯಾಯಾಲಯದ ಕರ್ತವ್ಯ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಪ್ರಕರಣಗಳ ವಿಚಾರಣೆ ಪ್ರಕ್ರಿಯೆ ದೀರ್ಘವಾಗದಂತೆ ಖಾತ್ರಿಪಡಿಸುವುದು ವಿಚಾರಣಾ ನ್ಯಾಯಾಲಯಗಳ ಕರ್ತವ್ಯ ಎಂದು ಸುಪ್ರೀಂಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್ ಹಾಗೂ ಎಂ.ಎಂ.ಸುಂದ್ರೇಶ್ ಅವರಿದ್ದ ನ್ಯಾಯಪೀಠವು, ಯಾವುದೇ ಕಕ್ಷಿದಾರರು ವಿಳಂಬ ತಂತ್ರ ಅನುಸರಿಸುವುದನ್ನು ತಡೆಗಟ್ಟಬೇಕು ಎಂದೂ ಸೂಚಿಸಿತು.

ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಮೇಯರ್‌ವೊಬ್ಬರ ಕೊಲೆ ಮಾಡಿದವರು ತಪ್ಪಿಸಿಕೊಳ್ಳಲು ನೆರವಾದ ಆರೋಪ ಎದುರಿಸುತ್ತಿದ್ದ ವ್ಯಕ್ತಿ ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆ ವೇಳೆ ನ್ಯಾಯಪೀಠ ಈ ಸೂಚನೆ ನೀಡಿತು.



ಸಾಕ್ಷಿಗಳ ವಿಚಾರಣೆಯಲ್ಲಿ ಆಗುತ್ತಿರುವ ವಿಳಂಬದ ಕುರಿತು ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ಸಮಯ ಕಳೆದಂತೆ ಸಾಕ್ಷಿಗಳಿಂದ ಹೇಳಿಕೆ ಪಡೆಯುವ ಪ್ರಕ್ರಿಯೆಯಲ್ಲಿ ಸಾಕಷ್ಟು ಸಮಸ್ಯೆಗಳುಂಟಾಗುತ್ತವೆ ಎಂದು ಹೇಳಿತು.

'ವ್ಯಕ್ತಿಯು ಕಳೆದ ಏಳು ವರ್ಷಗಳಿಂದ ಜೈಲಿನಲ್ಲಿದ್ದಾರೆ. ಇನ್ನೊಂದೆಡೆ, ಪ್ರಾಸಿಕ್ಯೂಷನ್‌ನಿಂದ ಸಾಕ್ಷಿಗಳಿಂದ ಹೇಳಿಕೆ ಪಡೆಯುವ ಪ್ರಕ್ರಿಯೆ ಇನ್ನೂ ಆರಂಭಗೊಂಡಿಲ್ಲ. ಏಳು ವರ್ಷಗಳು ಗತಿಸಿದ್ದರೂ ವಿಚಾರಣೆಯೇ ಆರಂಭವಾಗಿಲ್ಲ ಎಂಬುದನ್ನು ತಿಳಿದು ನಮಗೆ ಅಚ್ಚರಿಯಾಗಿದೆ. ಇದು ಒಪ್ಪತಕ್ಕದ್ದಲ್ಲ' ಎಂದು ನ್ಯಾಯಮೂರ್ತಿಗಳು ಹೇಳಿದರು.

ಅರ್ಜಿದಾರಗೆ ಜಾಮೀನು ಮಂಜೂರು ಮಾಡಿದ ನ್ಯಾಯಪೀಠ, 'ಸುಪ್ರೀಂಕೋರ್ಟ್‌ನ ಈ ಆದೇಶ ಕೈಸೇರಿದ ದಿನದಿಂದ ಒಂದು ವರ್ಷದ ಒಳಗಾಗಿ ವಿಚಾರಣಾ ನ್ಯಾಯಾಲಯವು ಪ್ರಕರಣಕ್ಕೆ ಸಂಬಂಧಿಸಿ ತೀರ್ಪು ನೀಡಬೇಕು' ಎಂದು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶನ ನೀಡಿತು.

ಕಾಶ್ಮೀರ ವಿವಾದ: ಶಾಂತಿ ಮಾತುಕತೆಗೆ ಪಾಕ್ ಒಲವು

ಇಸ್ಲಾಮಾಬಾದ್ (ಪಿಟಿಐ): 'ಕಾಶ್ಮೀರದ ಸಮಸ್ಯೆಯನ್ನು ಮಾತುಕತೆಯಿಂದ ಬಗೆಹರಿಸಿಕೊಳ್ಳಲು ಭಾರತದ ಜತೆ ಸಮಾನತೆ, ನ್ಯಾಯ ಮತ್ತು ಪರಸ್ಪರ ಗೌರವದ ತತ್ವಗಳ ಆಧಾರದ ಮೇಲೆ ಶಾಂತಿಯುತ ಸಂಬಂಧವನ್ನು ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ಬಯಸಿದ್ದಾರೆ' ಎಂದು ಮಾಧ್ಯಮ ವರದಿಗಳು ಶುಕ್ರವಾರ ಹೇಳಿವೆ.

ಕಾಶ್ಮೀರ ವಿಷಯದಲ್ಲಿ ಭಾರತ-ಪಾಕ್ ನಡುವಿನ ಶೀಥಲ ಪರಿಸ್ಥಿತಿ ತಡೆದು, ದ್ವಿಪಕ್ಷೀಯ ಸಂಬಂಧ ವೃದ್ಧಿಗೆ, ಗಡಿಯಾಚೆಗಿನ ಭಯೋತ್ಪಾದನೆ ನಿಗ್ರಹಿಸಲು ಹಾಗೂ ದಕ್ಷಿಣ ಏಷ್ಯಾದಲ್ಲಿ ದೀರ್ಘಕಾಲದ ಶಾಂತಿ ಮತ್ತು ಸ್ಥಿರತೆ ಖಾತ್ರಿಪಡಿಸುವ ಮಹತ್ವದ ಪಾತ್ರ ವಹಿಸುವಂತೆ ಅಂತರರಾಷ್ಟ್ರೀಯ ಸಮುದಾಯಕ್ಕೆ ಷರೀಫ್ ಮನವಿ ಮಾಡಿದ್ದಾರೆ.

ಪಾಕಿಸ್ತಾನಕ್ಕೆ ಹೊಸದಾಗಿ ನೇಮಕಗೊಂಡ ಆಸ್ಟ್ರೇಲಿಯಾದ ಹೈಕಮಿಷನರ್ ನೀಲ್ ಹಾಕಿನ್ಸ್ ಅವರ ಜತೆ ಗುರುವಾರ ನಡೆಸಿದ ಸಭೆಯಲ್ಲಿ ಷರೀಫ್ ಅವರು, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯಗಳಿಗೆ ಮತ್ತು ಕಾಶ್ಮೀರಿ ಜನರ ಆಶಯಗಳಿಗೆ ಅನುಗುಣವಾಗಿ ಜಮ್ಮು ಮತ್ತು ಕಾಶ್ಮೀರ ವಿವಾದ ಶಾಂತಿಯುತವಾಗಿ ಪರಿಹರಿಸುವುದು ಅಗತ್ಯ ಎಂದು ಹೇಳಿರುವುದಾಗಿ ಪ್ರಧಾನಿ ಕಚೇರಿಯ ಹೇಳಿಕೆ ಉಲ್ಲೇಖಿಸಿ 'ಡಾನ್' ಪತ್ರಿಕೆ ವರದಿ ಮಾಡಿದೆ.

'ಭಯೋತ್ಪಾದನೆ, ಹಗೆತನ ಮತ್ತು ಹಿಂಸಾಚಾರ ಮುಕ್ತ ವಾತಾವರಣದಲ್ಲಿ ನೆರೆಯ ದೇಶಗಳೊಂದಿಗೆ ಸಹಜ ಸಂಬಂಧವನ್ನು ಭಾರತ ಬಯಸುತ್ತದೆ. ಭಯೋತ್ಪಾದನೆ ಮತ್ತು ಹಗೆತನ ಮುಕ್ತ ವಾತಾವರಣ ಸೃಷ್ಟಿ ಪಾಕಿಸ್ತಾನದ ಜವಾಬ್ದಾರಿ' ಎಂದು ಭಾರತ ಪುನರುಚ್ಚರಿಸಿದೆ.

ಮುಂಬೈ ಧಾರಣೆ

ಶೇಂಗಾ

19–8-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1670)
ಒಂದು ವಾರದ ಡೆಲಿವರಿ	1665 (1665)
ಸೋಯಾ ಕಚ್ಚಾ	1200 (1200)
ಪಾಮ್ ವಾರದ ಡೆಲಿವರಿ	1188 (1205)
ಸೂರ್ಯಕಾಂತಿ ಎಣ್ಣೆ ಕಚ್ಚಾ	1470 (1480)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,650 (51,900)
ಬೆಳ್ಳಿ ಕೆ.ಜಿ 55,850 (57,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಂಕ್ಷಿಪ್ತ ಸುದ್ದಿ

ನ್ಯೂಯಾರ್ಕ್‌ನಲ್ಲಿ ಗಾಂಧಿ ಪ್ರತಿಮೆ ಧ್ವಂಸ

ನ್ಯೂಯಾರ್ಕ್ (ಪಿಟಿಐ): ಇಲ್ಲಿನ ಹಿಂದೂ ದೇವಾಲಯದ ಸಮೀಪ ಇರುವ ಮಹಾತ್ಮ ಗಾಂಧೀಜಿ ಪ್ರತಿಮೆಯನ್ನು ಕಿಡಿಗೇಡಿಗಳು ಧ್ವಂಸಗೊಳಿಸಿರುವ ಘಟನೆ ನಡೆದಿದೆ. ಈ ಮೂಲಕ ಒಂದೇ ತಿಂಗಳಲ್ಲಿ ಎರಡು ಬಾರಿ ಪ್ರತಿಮೆಯನ್ನು ಧ್ವಂಸಗೊಳಿಸಲಾಗಿದೆ ಎಂದು ಮಾಧ್ಯಮವೊಂದು ಶುಕ್ರವಾರ ವರದಿ ಮಾಡಿವೆ.

'ಮಂಗಳವಾರ ವ್ಯಕ್ತಿಯೊಬ್ಬ ಗಾಂಧಿ ಪ್ರತಿಮೆಯನ್ನು ಸುತ್ತಿಗೆಯಿಂದ ಹೊಡೆದು ಉರುಳಿಸಿದ್ದಾನೆ. ಇದಾದ ಒಂದು ನಿಮಿಷದ ಬಳಿಕ ಆರು ಜನರ ಗುಂಪು ಸ್ಥಳಕ್ಕೆ ಧಾವಿಸಿ ಪ್ರತಿಮೆಯನ್ನು ಮತ್ತಷ್ಟು ವಿರೂಪಗೊಳಿಸಿರುವುದು ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದು ಸಿಬಿಎಸ್ ನ್ಯೂಸ್ ಡಾಕ್ ಕಾಂ ತಿಳಿಸಿದೆ.

ಕೆನಡಾ ಉದ್ಯಮಿಗೆ ಚೀನಾದಲ್ಲಿ 13 ವರ್ಷ ಜೈಲು

ಬೀಜಿಂಗ್ (ಎಪಿ): ಬಹುಕೋಟಿ ಡಾಲರ್ (8.1 ಬಿಲಿಯನ್) ಹಣಕಾಸು ಅಪರಾಧಗಳ ಪ್ರಕರಣ ಸಂಬಂಧ 2017ರಲ್ಲಿ ಹಾಂಗ್‌ಕಾಂಗ್‌ನಿಂದ ನಾಪತ್ತೆಯಾಗಿದ್ದ ಚೀನಾ ಮೂಲದ ಕೆನಡಾ ಉದ್ಯಮಿಗೆ 13 ವರ್ಷಗಳ ಜೈಲು ಶಿಕ್ಷೆಯನ್ನು ಚೀನಾ ಕೋರ್ಟ್ ಶುಕ್ರವಾರ ವಿಧಿಸಿದೆ.


ಷಿಯೊ ಜಿಯಾನ್ಹುವಾ ಶಿಕ್ಷೆಗೆ ಗುರಿಯಾದ ಉದ್ಯಮಿ. ಇವರು ತಮ್ಮ ನಿಯಂತ್ರಣದ 'ಟುಮಾರೊ ಗ್ರೂಪ್' ಮೂಲಕ ಬ್ಯಾಂಕಿನಲ್ಲಿ ಸಾರ್ವಜನಿಕರು ಇಟ್ಟಿದ್ದ ಠೇವಣಿ ಹಣವನ್ನು ದುರುಪಯೋಗ ಪಡಿಸಿಕೊಂಡ ಮತ್ತು ಅಧಿಕಾರಿಗಳಿಗೆ ಲಂಚ ನೀಡಿದ ಪ್ರಕರಣದಲ್ಲಿ ಶಾಂಘೈನ ನ್ಯಾಯಾಲಯ ಶಿಕ್ಷೆ ವಿಧಿಸಿದೆ.

ಷಿಯೊ ಅವರಿಗೆ 6.5 ದಶಲಕ್ಷ ಯುವಾನ್ ಮತ್ತು ಇವರ ಕಂಪನಿಗೆ 55 ಶತಕೋಟಿ ಯುವಾನ್ ದಂಡ ವಿಧಿಸಲಾಗಿದೆ ಎಂದು ನ್ಯಾಯಾಲಯ ತಿಳಿಸಿದೆ. ಷಿಯೊ 2017ರ ಜನವರಿಯಲ್ಲಿ ಹಾಂಗ್‌ಕಾಂಗ್ ಹೋಟೆಲ್‌ನಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದರು.

ಚೀನಾದ ಅಧಿಕಾರಿಗಳು ಅವರನ್ನು ವಶಕ್ಕೆ ಪಡೆದು ತಮ್ಮ ದೇಶಕ್ಕೆ ಕರೆದೊಯ್ದಿದ್ದು, ತನಿಖಾಧಿಕಾರಿಗಳ ವಿಚಾರಣೆಯಲ್ಲಿದ್ದಾರೆ ಎಂದು ಹೇಳಲಾಗಿದೆ. ಆದರೆ, ಈ ಬಗ್ಗೆ ಯಾವುದೇ ಮಾಹಿತಿ ಹೊರಬಿದ್ದಿಲ್ಲ.









ಕ್ರಿಕೆಟ್: ಜಿಂಬಾಬ್ವೆ ಎದುರಿನ ಎರಡನೇ ಏಕದಿನ ಪಂದ್ಯ ಇಂದು

ಸರಣಿ ಕೈವಶದತ್ತ ಭಾರತ ಚಿತ್ತ



ಶಿಖರ್ ಧವನ್ ಹಾಗೂ ಪ್ರಸಿದ್ಧ ಕೃಷ್ಣ –ಎಎಫ್‌ಪಿ ಚಿತ್ರ

ಹರಾರೆ (ಪಿಟಿಐ): ಆತಿಥೇಯ ಜಿಂಬಾಬ್ವೆ ಎದುರಿನ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಸುಲಭ ಜಯ ಸಾಧಿಸಿದ ಖುಷಿಯಲ್ಲಿರುವ ಭಾರತ ತಂಡವು ಈಗ ಸರಣಿ ಗೆಲುವಿನ ಮೇಲೆ ಕಣ್ಣಿಟ್ಟಿದೆ.

ಹರಾರೆಯಲ್ಲಿ ಶನಿವಾರ ನಡೆಯಲಿರುವ ಎರಡನೇ ಪಂದ್ಯದಲ್ಲಿ ಜಯಿಸುವುದರೊಂದಿಗೆ ತಮ್ಮ ಬ್ಯಾಟಿಂಗ್ ಕೌಶಲದ ಪರೀಕ್ಷೆಗೂ ಭಾರತ ತಂಡದ ನಾಯಕ ಕೆ.ಎಲ್. ರಾಹುಲ್ ಸಿದ್ಧರಾಗಿದ್ದಾರೆ.

ಗಾಯದ ಸಮಸ್ಯೆ ಮತ್ತು ಕೋವಿಡ್‌ನಿಂದ ಚೇತರಿಸಿಕೊಂಡ ನಂತರ ರಾಹುಲ್ ಆಡುತ್ತಿರುವ ಮೊದಲ ಟೂರ್ನಿ ಇದಾಗಿದೆ. ಮೊದಲ ಪಂದ್ಯದಲ್ಲಿ ಅವರು ಇನಿಂಗ್ಸ್ ಆರಂಭಿಸಲಿಲ್ಲ. ಆರಂಭಿಕ ಜೋಡಿ ಶಿಖರ್ ಧವನ್ ಮತ್ತು ಶುಭಮನ್ ಗಿಲ್ ಅವರು ಮುರಿಯದ ಮೊದಲ ವಿಕೆಟ್ ಜೊತೆಯಾಟದಲ್ಲಿ 192 ರನ್‌ಗಳ ಗುರಿಯನ್ನು ಯಶಸ್ವಿಯಾಗಿ ಪೂರೈಸಿದ್ದರು. ಇದರಿಂದಾಗಿ ರಾಹುಲ್ ಸೇರಿದಂತೆ ಉಳಿದ ಬ್ಯಾಟರ್‌ಗಳಿಗೆ ಕ್ರೀಸ್‌ಗೆ ತೆರಳುವ ಅವಕಾಶ ಒದಗಿಬರಲಿಲ್ಲ.

ಆದರೆ ಪಂದ್ಯದಲ್ಲಿ ಶಿಖರ್ ಎಡಗೈಗೆ ಚೆಂಡು ಬಡಿದು ಗಾಯವಾಗಿತ್ತು. ಅದೊಂದು ವೇಳೆ ಗಂಭೀರವಾಗಿದ್ದರೆ ಈ ಪಂದ್ಯದಲ್ಲಿ ಅವರು ಕಣಕ್ಕಿಳಿಯುವುದು ಅನುಮಾನ. ಆಗ ಶುಭಮನ್ ಜೊತೆಗೆ ರಾಹುಲ್ ಅಥವಾ ಸಂಜು ಸ್ಯಾಮ್ಸನ್ ಇನಿಂಗ್ಸ್ ಆರಂಭಿಸಬಹುದು.

ದೀರ್ಘ ಕಾಲದ ನಂತರ ಕಣಕ್ಕೆ ಮರಳಿರುವ ಬೌಲರ್ ದೀಪಕ್ ಚಾಹರ್ ತಮ್ಮ ಮೊದಲ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಕಳೆದ ಪಂದ್ಯದಲ್ಲಿ ಅವರು ಒಂದೇ ಸ್ಪೆಲ್‌ನಲ್ಲಿ ಏಳು ಓವರ್ ಬೌಲಿಂಗ್ ಮಾಡಿ ತಮ್ಮ ದೈಹಿಕ ಕ್ಷಮತೆಯನ್ನು ಸಾಬೀತು ಮಾಡಿರುವುದು ಆಶಾದಾಯಕ.

ದೀಪಕ್ ಹಾಗೂ ಕನ್ನಡಿಗ ಪ್ರಸಿದ್ಧ ಕೃಷ್ಣ ತಲಾ ಮೂರು ವಿಕೆಟ್ ಕಬಳಿಸಿ ಆತಿಥೇಯ ತಂಡಕ್ಕೆ ತಡೆಯೊಡ್ಡಿದ್ದರು.

ರೆಗಿಸ್ ಚಕಾಬ್ವಾ ನಾಯಕತ್ವದ ಜಿಂಬಾಬ್ವೆ ತಂಡವು ರಾಹುಲ್ ಬಳಗದ ಬ್ಯಾಟರ್‌ಗಳಿಗೆ ಕಡಿವಾಣ ಹಾಕಿದರೆ ಗೆಲುವಿನ ಕನಸು ಕಾಣಬಹುದು. ಜೊತೆಗೆ ಸರಣಿಯ ಜಯದ ಆಸೆಯನ್ನೂ ಜೀವಂತವಾಗಿಟ್ಟುಕೊಳ್ಳಬಹುದು.

ಪಂದ್ಯ ಆರಂಭ: ಮಧ್ಯಾಹ್ನ 12.45

ಬೆಂಗಳೂರಿನಲ್ಲಿ ನ್ಯೂಜಿಲೆಂಡ್ ಎ ತಂಡದ ಪಂದ್ಯಗಳು

ಕ್ರೈಸ್ಟ್‌ಚರ್ಚ್ (ಪಿಟಿಐ): ಸೆಪ್ಟೆಂಬರ್ ತಿಂಗಳಲ್ಲಿ ಭಾರತಕ್ಕೆ ಭೇಟಿ ನೀಡಲಿರುವ ನ್ಯೂಜಿಲೆಂಡ್ ಎ ತಂಡವನ್ನು ಶುಕ್ರವಾರ ಪ್ರಕಟಿಸಲಾಗಿದೆ.

ನಾಲ್ಕು ದಿನಗಳ ಮಾದರಿಯ ಮೂರು ಪಂದ್ಯಗಳು ಬೆಂಗಳೂರಿನಲ್ಲಿ ನಡೆಯಲಿವೆ. ಮೂರು ಏಕದಿನ ಪಂದ್ಯಗಳು ಚೆನ್ನೈನಲ್ಲಿ ನಡೆಯಲಿವೆ. ಎರಡೂ ಸರಣಿಗಳಿಗೆ ಕ್ರಮವಾಗಿ ಟಾಮ್ ಬ್ರೂಸ್ ಹಾಗೂ ರಾಬಿ ಒ ಡಾನೆಲ್ ಅವರಿಗೆ ನಾಯಕತ್ವದ ಹೊಣೆ ನೀಡಲಾಗಿದೆ. 15 ಆಟಗಾರರ ತಂಡವನ್ನು ಕ್ರಿಕೆಟ್ ನ್ಯೂಜಿಲೆಂಡ್ ಪ್ರಕಟಿಸಿದೆ. ಭಾರತ ಎ ತಂಡದ ವಿರುದ್ಧ ಪಂದ್ಯಗಳಲ್ಲಿ ಆಡಲಿದೆ.

ನ್ಯೂಜಿಲೆಂಡ್ ಎ ತಂಡ: ಟಾಮ್ ಬ್ರೂಸ್ (ನಾಯಕ), ರಾಬಿ ಒ ಡಾನೆಲ್, ಚಾಡ್ ಬೊವ್ಸ್, ಜೋ ಕಾರ್ಟರ್, ಮಾರ್ಕ್ ಚಾಪಮನ್, ಡೇನ್ ಕ್ಲೀವರ್ (ವಿಕೆಟ್‌ಕೀಪರ್), ಜೇಕಬ್ ಡಫಿ, ಮ್ಯಾಟ್ ಫಿಷರ್, ಕ್ಯಾಮೆರೊನಾ ಫ್ಲೆಚರ್ (ವಿಕೆಟ್‌ಕೀಪರ್), ಬೆನ್ ಲಿಸ್ಟರ್, ರಚಿನ್ ರವೀಂದ್ರ, ಮಿಚೆಲ್ ರಿಪನ್, ಸೀನ್ ಸೊಲಾ, ಲೊಗಾನ್ ವ್ಯಾನ್ ಬೀಕ್, ಜೋ ವಾಕರ್.

ನಾಲ್ಕು ದಿನದ ಪಂದ್ಯಗಳು: ಸೆ 1 ರಿಂದ 4, ಸೆ 8–11, ಸೆ 15–18 (ಬೆಂಗಳೂರಿನಲ್ಲಿ)

ಏಕದಿನ ಪಂದ್ಯಗಳು: ಸೆ 22, ಸೆ 25 ಹಾಗೂ ಸೆ 27 (ಚೆನ್ನೈನಲ್ಲಿ)

ಶಿವಕುಮಾರ್ ಆಲ್‌ರೌಂಡ್ ಆಟ

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ: ಹುಬ್ಬಳ್ಳಿ ಟೈಗರ್ಸ್ ಜಯಭೇರಿ

ಪ್ರಜಾವಾಣಿ ವಾರ್ತೆ



ಹುಬ್ಬಳ್ಳಿ ಟೈಗರ್ಸ್ ತಂಡದ ಬಿಯು ಶಿವಕುಮಾರ್ ಸಂಭ್ರಮ

ಮುಖ್ಯಾಂಶಗಳು

- ಹುಬ್ಬಳ್ಳಿ ಟೈಗರ್ಸ್‌ಗೆ 8 ವಿಕೆಟ್ ಗೆಲುವು
- ಸಿಸೊಡಿಯಾ ಅರ್ಧಶತಕ
- ಶಿವಮೊಗ್ಗ ಸ್ಟ್ರೈಕರ್ಸ್‌ಗೆ ನಿರಾಸೆ

ಬೆಂಗಳೂರು: ಆಲ್‌ರೌಂಡ್ ಆಟವಾಡಿದ ಬಿ.ಯು. ಶಿವಕುಮಾರ್ (ಔಟಾಗದೆ 61 ಹಾಗೂ 17ಕ್ಕೆ1) ನೆರವಿನಿಂದ ಹುಬ್ಬಳ್ಳಿ ಟೈಗರ್ಸ್ ತಂಡವು ಇಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯಗಳಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಹುಬ್ಬಳ್ಳಿ ತಂಡವು 8 ವಿಕೆಟ್‌ಗಳಿಂದ ಶಿವಮೊಗ್ಗ ಸ್ಟ್ರೈಕರ್ಸ್ ವಿರುದ್ಧ ಗೆದ್ದಿತು. ಟೂರ್ನಿಯಲ್ಲಿ ತಂಡಕ್ಕೆ ಇದು ನಾಲ್ಕನೇ ಜಯ.

ಟಾಸ್ ಗೆದ್ದ ಹುಬ್ಬಳ್ಳಿ ತಂಡದ ನಾಯಕ ಲುವನಿತ್ ಸಿಸೊಡಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಶಿವಮೊಗ್ಗ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 146 ರನ್ ಗಳಿಸಿತು. ಸಾಧಾರಣ ಗುರಿ ಬೆನ್ನಟ್ಟಿದ ಹುಬ್ಬಳ್ಳಿ ತಂಡವು 17.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 149 ರನ್ ಗಳಿಸಿತು. ಲುವನಿತ್ ಸಿಸೊಡಿಯಾ (62; 38ಎ, 4X6, 6X3) ಹಾಗೂ ಶಿವಕುಮಾರ್ ಮೊದಲ ವಿಕೆಟ್ ಜೊತೆಯಾಟದಲ್ಲಿ 107 ರನ್ ಸೇರಿಸಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಶಿವಕುಮಾರ್ ಏಳು ಬೌಂಡರಿ ಹಾಗೂ ಒಂದು ಸಿಕ್ಸರ್ ಬಾರಿಸಿದರು.

ಅವರು ಬೌಲಿಂಗ್‌ನಲ್ಲಿಯೂ ಮಿಂಚಿದ್ದರು. ಶಿವಮೊಗ್ಗ ತಂಡಕ್ಕೆ ಶರತ್ ಬಿಆರ್ (36; 33ಎ) ಹಾಗೂ ಸ್ಟಾಲಿನ್ ಹೂವರ್ (38; 25ಎ) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್‌ಗೆ 71 ರನ್ ಸೇರಿಸಿದ್ದ ಅವರ ಜೊತೆಯಾಟವನ್ನು ಶಿವಕುಮಾರ್ ಮುರಿದರು. ಹತ್ತನೇ ಓವರ್‌ನಲ್ಲಿ ಸ್ಟಾಲಿನ್ ವಿಕೆಟ್ ಪಡೆದ ಅವರು ಮಿಂಚಿದ್ದರು. ಸಿದ್ಧಾರ್ಥ್ (23) ಹಾಗೂ ಎಸ್. ಚೈತನ್ಯ (ಔಟಾಗದೆ 32) ಕೂಡ ಉಪಯುಕ್ತ ಕಾಣಿಕೆ ನೀಡಿದರು. ಆದರೆ, ಶಿವಮೊಗ್ಗ ತಂಡವು ಹುಬ್ಬಳ್ಳಿಗೆ ಕಠಿಣ ಗುರಿಯೊಡ್ಡುವಲ್ಲಿ ಸಫಲವಾಗಲಿಲ್ಲ.

ಮಿಸ್ಟಿಕ್ಸ್‌ಗೆ ಗೆಲುವು: ದಿನದ ಎರಡನೇ ಪಂದ್ಯದಲ್ಲಿ ನಾಯಕ ಮನೀಷ್ ಪಾಂಡೆ (58) ಅವರ ಅರ್ಧಶಕ ಮತ್ತು ಬೌಲರ್‌ಗಳ ಚುರುಕಿನ ದಾಳಿಯ ನೆರವಿನಿಂದ ಗುಲ್ಬರ್ಗಾ ಮಿಸ್ಟಿಕ್ಸ್ ತಂಡ 28 ರನ್‌ಗಳಿಂದ ಮಂಗಳೂರು ಯುನೈಟೆಡ್ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರು: ಶಿವಮೊಗ್ಗ ಸ್ಟ್ರೈಕರ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 146 (ಬಿ.ಆರ್. ಶರತ್ 36, ಸ್ಟಾಲಿನ್ ಹೂವರ್ 38, ಸಿದ್ಧಾರ್ಥ್ 23, ಎಸ್. ಚೈತನ್ಯ ಔಟಾಗದೆ 32, ವಿ. ಕೌಶಿಕ್ 29ಕ್ಕೆ2) ಹುಬ್ಬಿ ಟೈಗರ್ಸ್: 17.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 149 (ಲುವನಿತ್ ಸಿಸೊಡಿಯಾ 62, ಬಿ.ಯು. ಶಿವಕುಮಾರ್ ಔಟಾಗದೆ 61, ಲಿಯಾನ್ ಖಾನ್ ಔಟಾಗದೆ 19) ಫಲಿತಾಂಶ: ಹುಬ್ಬಳ್ಳಿ ಟೈಗರ್ಸ್‌ಗೆ 8 ವಿಕೆಟ್‌ಗಳ ಜಯ.

ಇಂದಿನ ಪಂದ್ಯಗಳು

ಮಂಗಳೂರು ಯುನೈಟೆಡ್–ಶಿವಮೊಗ್ಗ ಸ್ಟ್ರೈಕರ್ (ಮಧ್ಯಾಹ್ನ 3)

ಮೈಸೂರು ವಾರಿಯರ್ಸ್–ಬೆಂಗಳೂರು ಬ್ಲಾಸ್ಟರ್ಸ್ (ರಾತ್ರಿ 7)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್.



ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡ. ಮಂಡಿಯೂರಿದವರು (ಎಡದಿಂದ): ಅರುಣ್ ಸುರೇಶ್, ಕಾರ್ತಿಕೇಯನ್, ಅಕ್ಷಯ್ ಕುಮಾರ್, ಎಸ್.ದೀಪಕ್, ಪ್ರಶಾಂತ್ ಕಳಿಂಗ, ಶೆಲ್ಟನ್ ಪಾಲ್, ಕೆವಿನ್ ಕೋಶಿ, ಶರತ್ ರಾಜ್‌ಕುಮಾರ್, ಎಸ್.ಪವನ್, ಶಶಿ ಕುಮಾರ್, ಜೆ.ಮೋನಿಷ್. ನಿಂತವರು: ವಿ.ಸುದರ್ಶನ್, ಎಸ್.ಸಿಜು, ಪ್ರಿನ್ಸ್‌ವಿಲ್ ಎಮೆಕಾ, ಎ.ಜಾನ್ಸನ್, ರಘು ಕುಮಾರ್ (ಕೋಚ್), ಲಕ್ಷ್ಮಣ್ ಬಿ. (ಮುಖ್ಯಕೋಚ್), ಸರವಣ ಧರ್ಮನ್ (ಸಹಾಯಕ ಕೋಚ್), ಜಾನ್ ಪೀಟರ್, ಅಭಿಷೇಕ್ ಪೊವಾರ್, ಕ್ರಿಸ್ಟಿನ್ ಕ್ಲೀಟಸ್, ಎ.ಅರುಣ್, ರ್‍ಯಾನ್ ವಿಲ್ಫ್ರೆಡ್, ಸುನಿಲ್ –ಪ್ರಜಾವಾಣಿ ಚಿತ್ರ

ಫುಟ್‌ಬಾಲ್: ಕಿಕ್‌ಸ್ಟಾರ್ಟ್ ಎಫ್‌ಸಿ ಚಾಂಪಿಯನ್

ಬೆಂಗಳೂರು: ಹೊಂದಾಣಿಕೆಯ ಆಟವಾಡಿದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದವರು ಇಲ್ಲಿ ಕೊನೆಗೊಂಡ ಸಿ.ಪುಟ್ಟಯ್ಯ ಸ್ಮಾರಕ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಫೈನಲ್‌ನಲ್ಲಿ ಕಿಕ್‌ಸ್ಟಾರ್ಟ್ ತಂಡ 3–1 ಗೋಲುಗಳಿಂದ ಬೆಂಗಳೂರು ಈಗಲ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಪ್ರಿನ್ಸ್‌ವಿಲ್ ಎಮೆಕಾ ಅವರು 5ನೇ ನಿಮಿಷದಲ್ಲಿ ಕಿಕ್‌ಸ್ಟಾರ್ಟ್ ತಂಡದ ಗೋಲಿನ ಖಾತೆ ತೆರೆದರೆ, ರ್‍ಯಾನ್ ವಿಲ್ಫ್ರೆಡ್ 28ನೇ ನಿಮಿಷದಲ್ಲಿ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು. ಕಿಕ್‌ಸ್ಟಾರ್ಟ್ ತಂಡ ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿ, ಎದುರಾಳಿ ತಂಡದ ಮೇಲೆ ಒತ್ತಡ ಹೇರುವಲ್ಲಿ ಯಶಸ್ವಿಯಾಯಿತು. ಇದರಿಂದ ಮೊದಲ 30 ನಿಮಿಷಗಳಲ್ಲೇ ಎರಡು ಗೋಲುಗಳು ಬಂದವು.

ಆದರೆ ವಿರಾಮಕ್ಕೆ ಕೆಲವೇ ಕ್ಷಣಗಳಿರುವಾಗ ಈಗಲ್ಸ್ ತಂಡದ ಬಾನು ಪ್ರಕಾಶ್ (45 + 2) ಅವರು ಪೆನಾಲ್ಟಿ ಕಿಕ್ ಅವಕಾಶದಲ್ಲಿ ಗೋಲು ಗಳಿಸಿ ಹಿನ್ನಡೆಯನ್ನು 1–2ಕ್ಕೆ ತಗ್ಗಿಸಿದರು.

ಎರಡನೇ ಅವಧಿಯ ಆರಂಭದಲ್ಲೇ ಎಮೆಕಾ (47ನೇ ನಿ.) ತಮ್ಮ ಎರಡನೇ ಹಾಗೂ ತಂಡದ ಮೂರನೇ ಗೋಲು ಗಳಿಸಿದರು. ಎರಡು ಗೋಲುಗಳ ಮುನ್ನಡೆಯನ್ನು ಕೊನೆಯವರೆಗೂ ಕಾಪಾಡಿಕೊಂಡ ತಂಡ, ಇದೇ ಮೊದಲ ಬಾರಿಗೆ ಪುಟ್ಟಯ್ಯ ಸ್ಮಾರಕ ಟ್ರೋಫಿ ಗೆದ್ದು ಸಂಭ್ರಮಿಸಿತು.

ಭಾರತ ತಂಡಕ್ಕೆ ಮರಳಿದ ಜೂಲನ್



ಜೂಲನ್ ಗೋಸ್ವಾಮಿ

ನವದೆಹಲಿ (ಪಿಟಿಐ): ಅನುಭವಿ ಬೌಲರ್ ಜೂಲನ್ ಗೋಸ್ವಾಮಿ ಭಾರತ ಏಕದಿನ ಮಹಿಳಾ ಕ್ರಿಕೆಟ್ ತಂಡಕ್ಕೆ ಮರಳಿದ್ದಾರೆ.

ಸೆಪ್ಟೆಂಬರ್ 10ರಿಂದ ಇಂಗ್ಲೆಂಡ್‌ನಲ್ಲಿ ಸೀಮಿತ ಓವರ್‌ಗಳ ಸರಣಿ ಆರಂಭವಾಗಲಿದೆ. ಅದರಲ್ಲಿ ಮೂರು ಏಕದಿನ ಪಂದ್ಯಗಳಲ್ಲಿ 40 ವರ್ಷದ ಜೂಲನ್ ಆಡಲಿದ್ದಾರೆ. ಈ ಪ್ರವಾಸದಲ್ಲಿ ಮೂರು ಟಿ20 ಪಂದ್ಯಗಳ ಸರಣಿಯೂ ನಡೆಯಲಿದೆ. ಶುಕ್ರವಾರ ಬಿಸಿಸಿಐ ಆಯ್ಕೆ ಸಮಿತಿಯು ಏಕದಿನ ಹಾಗೂ ಟಿ20 ತಂಡಗಳನ್ನು ಪ್ರಕಟಿಸಿದ್ದಾರೆ.

ಟಿ20 ತಂಡದಲ್ಲಿ ಹೊಸಪ್ರತಿಭೆ ಕೆ.ಪಿ. ನವಗಿರೆ, ವಿಕೆಟ್‌ಕೀಪರ್ ರಿಚಾ ಘೋಷ್ ಹಾಗೂ ರಾಧಾ ಯಾದವ್ ಸ್ಥಾನ ಪಡೆದಿದ್ದಾರೆ. ಇವರು ಏಕದಿನ ಬಳಗದಲ್ಲಿ ಇಲ್ಲ.

ಎರಡೂ ಸರಣಿಗಳಲ್ಲಿ ಹರ್ಮನ್‌ಪ್ರೀತ್ ಕೌರ್ ತಂಡವನ್ನು ಮುನ್ನಡೆಸುವರು.

ತಂಡ: ಏಕದಿನ ಕ್ರಿಕೆಟ್: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಶಫಾಲಿ ವರ್ಮಾ, ಜೂಲನ್ ಗೋಸ್ವಾಮಿ, ಸಬ್ಬಿನೇನಿ ಮೇಘನಾ, ದೀಪ್ತಿ ಶರ್ಮಾ, ತಾನಿಯಾ ಭಾಟಿಯಾ (ವಿಕೆಟ್‌ಕೀಪರ್), ಯಷ್ಟಿಕಾ ಭಾಟಿಯಾ (ವಿಕೆಟ್‌ಕೀಪರ್), ಪೂಜಾ ವಸ್ತ್ರಕರ್, ಸ್ನೇಹಾ ರಾಣಾ, ರೇಣುಕಾ ಠಾಕೂರ್, ಮೇಘನಾ ಸಿಂಗ್, ರಾಜೇಶ್ವರಿ ಗಾಯಕವಾಡ, ಹರ್ಲಿನ್ ಡಿಯೊಲ್, ದಯಾಳನ್ ಹೇಮಲತಾ, ಸಿಮ್ರನ್ ದಿಲ್ ಬಹಾದ್ದೂರ್, ಜೆಮಿಮಾ ರಾಡ್ರಿಗಸ್.

ಟೆಸ್ಟ್ ಕ್ರಿಕೆಟ್: ಲಾರ್ಡ್ಸ್‌ನಲ್ಲಿ ದಕ್ಷಿಣ ಆಫ್ರಿಕಾ ಜಯಭೇರಿ

ಲಂಡನ್ (ಎಎಫ್‌ಪಿ): ಸ್ಪಿನ್ನರ್ ಕೇಶವ್ ಮಹಾರಾಜ್ ಹಾಗೂ ಎನ್ರಿಚ್ ನಾಕಿಯಾ ಅವರ ಅಮೋಘ ಬೌಲಿಂಗ್ ಬಲದಿಂದ ದಕ್ಷಿಣ ಆಫ್ರಿಕಾ ತಂಡವು ಆತಿಥೇಯ ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಅಮೋಘ ಜಯ ಸಾಧಿಸಿತು.

ಲಾರ್ಡ್ಸ್‌ನಲ್ಲಿ ಶುಕ್ರವಾರ ಕೊನೆಗೊಂಡ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಇನಿಂಗ್ಸ್ ಹಾಗೂ 12 ರನ್‌ಗಳಿಂದ ಗೆದ್ದಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ದಕ್ಷಿಣ ಆಫ್ರಿಕಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 161 ರನ್‌ಗಳ ಮುನ್ನಡೆ ಸಾಧಿಸಿತ್ತು. ಎರಡನೇ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ ತಂಡವು 37.4 ಓವರ್‌ಗಳಲ್ಲಿ 149 ರನ್‌ಗಳಿಗೆ ಆಲೌಟ್ ಆಯಿತು.

ಬೆನ್ ಸ್ಟೋಕ್ಸ್ ನಾಯಕತ್ವ ವಹಿಸಿಕೊಂಡ ನಂತರ ಇಂಗ್ಲೆಂಡ್ ತಂಡವು ಕಳೆದ ನಾಲ್ಕು ಟೆಸ್ಟ್‌ಗಳಲ್ಲಿ ಜಯ ಸಾಧಿಸಿತ್ತು. ಇದೀಗ ಆ ದಾಖಲೆ ಮುರಿದುಬಿದ್ದಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 45 ಓವರ್‌ಗಳಲ್ಲಿ 165. ದಕ್ಷಿಣ ಆಫ್ರಿಕಾ: 89.1 ಓವರ್‌ಗಳಲ್ಲಿ 326. ಎರಡನೇ ಇನಿಂಗ್ಸ್: ಇಂಗ್ಲೆಂಡ್: 37.4 ಓವರ್‌ಗಳಲ್ಲಿ 149 (ಅಲೆಕ್ಸ್ ಲೀಸ್ 35, ಬೆನ್ ಸ್ಟೋಕ್ಸ್ 20, ಸ್ಟುವರ್ಟ್ ಬ್ರಾಡ್ 35, ಕಗಿಸೊ ರಬಾಡ 27ಕ್ಕೆ2, ಕೇಶವ್ ಮಹಾರಾಜ 35ಕ್ಕೆ2, ಎನ್ರಿಚ್ ನಾಕಿಯಾ 47ಕ್ಕೆ3, ಮಾರ್ಕೊ ಜಾನ್ಸೆನ್ 13ಕ್ಕೆ2) ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ ಇನಿಂಗ್ಸ್, 12 ರನ್ ಜಯ. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ.

ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್: ಕೆಜಿಎಫ್ ವೂಲ್ವ್ಸ್ ತಂಡಕ್ಕೆ ನಿರಾಸೆ

ಮಂಡ್ಯ ಬುಲ್ಸ್ ಗೆಲುವಿನ ಓಟ

ಪ್ರಜಾವಾಣಿ ವಾರ್ತೆ



ಅನನ್ಯಾ ಪ್ರವೀಣ್ ಆಟದ ವೈಖರಿ –ಪ್ರಜಾವಾಣಿ ಚಿತ್ರ/ ಎಸ್.ಕೆ.ದಿನೇಶ್

ಮುಖ್ಯಾಂಶಗಳು

- 6–3 ಪಾಯಿಂಟ್‌ಗಳಿಂದ ಗೆಲುವು
- ಅನನ್ಯಾ ಪ್ರವೀಣ್, ಸಾಯ್ ಪ್ರತೀಕ್ ಉತ್ತಮ ಆಟ
- ಎರಡು ಪಂದ್ಯಗಳಿಂದ ಏಳು ಪಾಯಿಂಟ್ ಗಳಿಸಿದ ಬುಲ್ಸ್

ಬೆಂಗಳೂರು: ಮಂಡ್ಯ ಬುಲ್ಸ್ ತಂಡದವರು ಇಲ್ಲಿ ನಡೆಯುತ್ತಿರುವ ಗ್ರ್ಯಾನ್ ಪ್ರಿ ಬ್ಯಾಡ್ಮಿಂಟನ್ ಲೀಗ್‌ನ 'ಸೂಪರ್ ಲೀಗ್' ಹಂತದಲ್ಲಿ ಜಯ ಸಾಧಿಸಿದರು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಬುಲ್ಸ್ 6–3 ರಲ್ಲಿ ಕೆಜಿಎಫ್ ವೂಲ್ವ್ಸ್ ವಿರುದ್ಧ ಗೆದ್ದಿತು.

ಅನನ್ಯ ಪ್ರವೀಣ್ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ 15–14, 15–13 ರಲ್ಲಿ ಗ್ಲೋರಿಯಾ ವಿಜಯಕುಮಾರ್ ಅವರನ್ನು ಮಣಿಸಿ ಬುಲ್ಸ್‌ಗೆ ಮುನ್ನಡೆ ತಂದಿತ್ತರು.

ಪುರುಷರ ಡಬಲ್ಸ್‌ನಲ್ಲಿ ಆಶಿತ್ ಸೂರ್ಯ– ಸಾಯ್ ಪ್ರತೀಕ್ ಜೋಡಿ 15–9, 15–13 ರಲ್ಲಿ ಪ್ರಕಾಶ್ ರಾಜ್ ಮತ್ತು ವಿ.ಸುಹಾಸ್ ಅವರನ್ನು ಸೋಲಿಸಿತು. ಇದು 'ಟ್ರಂಪ್' ಪಂದ್ಯ ಆಗಿದ್ದರಿಂದ ಎರಡು ಪಾಯಿಂಟ್ ಗಿಟ್ಟಿಸಿಕೊಂಡ ಮಂಡ್ಯ, 3–0 ರಲ್ಲಿ ಮೇಲುಗೈ ಸಾಧಿಸಿತು.

ಆದರೆ ಪುರುಷರ ಸಿಂಗಲ್ಸ್‌ನಲ್ಲಿ ನರೇನ್ ಅಯ್ಯರ್ 15–14, 15–14 ರಲ್ಲಿ ಅನಿರುದ್ಧ ದೇಶಪಾಂಡೆ ಅವರನ್ನು ಮಣಿಸಿ ಕೆಜಿಎಫ್ ತಂಡದ ಹಿನ್ನಡೆ ತಗ್ಗಿಸಿದರು. ಮಿಶ್ರ ಡಬಲ್ಸ್‌ನಲ್ಲಿ ವೂಲ್ವ್ಸ್ ತಂಡದ ಹೇಮಂತ್ ಎಂ.ಗೌಡ ಮತ್ತು ಪಿ.ಅಮೃತಾ ಅವರು 15–12, 10–15, 15–9 ರಲ್ಲಿ ನಿತಿನ್ ಮತ್ತು ರುತ್ ಮಿಶಾ ವಿನೋದ್ ಅವರನ್ನು ಮಣಿಸಿ 3–3 ರಲ್ಲಿ ಸಮಸ್ಥಿತಿಗೆ ತಂದರು.

ಇದರಿಂದ ಕೊನೆಯಲ್ಲಿ ನಡೆದ 'ಸೂಪರ್ ಮ್ಯಾಚ್' ಉಭಯ ತಂಡಗಳಿಗೂ ನಿರ್ಣಾಯಕ ಎನಿಸಿದವು. ಪ್ರಬಲ ಪೈಪೋಟಿ ನಡೆದ ಸೂಪರ್ ಮ್ಯಾಚ್‌ನಲ್ಲಿ ಆಶಿತ್ ಸೂರ್ಯ/ ಸಾಯ್ ಪ್ರತೀಕ್ ಮತ್ತು ಎಂ.ಮಧುಸೂದನ್ ಅವರು 22–20 ರಲ್ಲಿ ಹೇಮಂತ್ ಗೌಡ/ ಪ್ರಕಾಶ್ ರಾಜ್/ ಸುಹಾಸ್ ವಿರುದ್ಧ ಜಯಿಸಿದರು.

ಸೂಪರ್ ಮ್ಯಾಚ್‌ನಲ್ಲಿ ಬುಲ್ಸ್ ತಂಡ 7–14 ರಿಂದ ಹಿನ್ನಡೆ ಅನುಭವಿಸಿತ್ತು. ಆದರೆ ಮರುಹೋರಾಟ ನಡೆಸಿ ಗೆಲುವು ಪಡೆದು ಪಂದ್ಯದಲ್ಲಿ ಒಟ್ಟು ಆರು ಪಾಯಿಂಟ್ಸ್ ಸಂಗ್ರಹಿಸಿತು.

ಸೋಲಿನ ನಡುವೆಯೂ ಮೂರು ಪಾಯಿಂಟ್ಸ್ ಕಲೆಹಾಕಿದ ವೂಲ್ವ್ಸ್ ತಂಡ ಎರಡು ಪಂದ್ಯಗಳಿಂದ ಒಟ್ಟು ಏಳು ಪಾಯಿಂಟ್ಸ್ ಗಳಿಸಿದೆ. ಬುಲ್ಸ್ ಕೂಡಾ ಇಷ್ಟೇ ಪಾಯಿಂಟ್ಸ್ ಹೊಂದಿದೆ.

ದಿನದ ಎರಡನೇ ಪಂದ್ಯದಲ್ಲಿ ಮಲ್ನಾಡ್ ಫಾಲ್ಕನ್ಸ್ 6–3 ರಲ್ಲಿ ಮಂಗಳೂರು ಶಾರ್ಕ್ಸ್ ತಂಡವನ್ನು ಮಣಿಸಿತು.

ಇಂದಿನ ಪಂದ್ಯಗಳು:

ಮಲ್ನಾಡ್ ಫಾಲ್ಕನ್ಸ್– ಕೆಜಿಎಫ್ ವೂಲ್ವ್ಸ್ (ಮಧ್ಯಾಹ್ನ 12.30)

ಮಂಡ್ಯ ಬುಲ್ಸ್– ಮಂಗಳೂರು ಶಾರ್ಕ್ಸ್ (ಸಂಜೆ 7)

ಚೆಸ್: ಪ್ರಗ್ನಾನಂದಗೆ ನಾಲ್ಕನೇ ಗೆಲುವು



ಪ್ರಗ್ನಾನಂದ

ಮಿಯಾಮಿ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಗ್ನಾನಂದ ಅವರು ಎಫ್‌ಟಿಎಕ್ಸ್ ಕ್ರಿಪ್ಟೊ ಕಪ್ ಚೆಸ್ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದ್ದಾರೆ.

ಶುಕ್ರವಾರ ನಡೆದ ನಾಲ್ಕನೇ ಸುತ್ತಿನಲ್ಲಿ ಅವರು 3–1 ರಲ್ಲಿ ಅಮೆರಿಕದ ಲೆವೊನ್ ಅರೋನಿಯನ್ ಎದುರು ಗೆದ್ದರು.

ನಾಲ್ಕು ಸುತ್ತುಗಳ ಬಳಿಕ 12 ಮ್ಯಾಚ್ ಪಾಯಿಂಟ್‌ಗಳನ್ನು ಹೊಂದಿರುವ ಪ್ರಗ್ನಾನಂದ ಅವರು ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಜತೆ ಜಂಟಿ ಅಗ್ರಸ್ಥಾನದಲ್ಲಿದ್ದಾರೆ. ಎಂಟು ಆಟಗಾರರು ಪಾಲ್ಗೊಂಡಿರುವ ಟೂರ್ನಿಯಲ್ಲಿ ಇನ್ನು ಮೂರು ಸುತ್ತುಗಳು ಬಾಕಿಯಿವೆ.

17 ವರ್ಷದ ಪ್ರಗ್ನಾನಂದ, ಅರೋನಿಯನ್ ಎದುರಿನ ಮೊದಲ ಎರಡು ಗೇಮ್‌ಗಳನ್ನು ಡ್ರಾ ಮಾಡಿಕೊಂಡರು. ಮೂರನೇ ಗೇಮ್‌ನಲ್ಲಿ ಚಾಣಾಕ್ಷ ಆಟವಾಡಿ ಗೆಲುವು ಪಡೆದು 2–1 ರಲ್ಲಿ ಮುನ್ನಡೆ ಪಡೆದರು. ನಾಲ್ಕನೇ ಗೇಮ್‌ನಲ್ಲೂ ಚತುರ ಆಟವಾಡಿ 44 ನಡೆಗಳಲ್ಲಿ ಗೆಲುವು ಒಲಿಸಿಕೊಂಡರು.

ಕಾರ್ಲ್‌ಸನ್ ಅವರು ನಾಲ್ಕನೇ ಸುತ್ತಿನಲ್ಲಿ 3–1 ಪಾಯಿಂಟ್‌ಗಳಿಂದ ಚೀನಾದ ಕುವಾಂಗ್ ಲಿಯೆಮ್ ಲಿ ಅವರನ್ನು ಪರಾಭವಗೊಳಿಸಿದರು. ಮೊದಲ ಎರಡು ಗೇಮ್‌ಗಳಲ್ಲಿ ಡ್ರಾ ಸಾಧಿಸಿದ ನಾರ್ವೆಯ ಆಟಗಾರ, ಕೊನೆಯ ಎರಡು ಗೇಮ್‌ಗಳನ್ನು ಗೆದ್ದರು.

ಭೈಚುಂಗ್ ಭುಟಿಯಾ ಸ್ಪರ್ಧೆ

ಎಐಎಫ್‌ಎಫ್ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ: ಹೆಚ್ಚಿದ ಕಾವು



ಭೈಚುಂಗ್ ಭುಟಿಯಾ

ನವದೆಹಲಿ (ಪಿಟಿಐ): ಭಾರತದ ದಿಗ್ಗಜ ಫುಟ್‌ಬಾಲ್ ಆಟಗಾರ ಭೈಚುಂಗ್ ಭುಟಿಯಾ ಅವರು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಅಧ್ಯಕ್ಷ ಸ್ಥಾನದ ಚುನಾವಣೆಗೆ ಶುಕ್ರವಾರ ನಾಮಪತ್ರ ಸಲ್ಲಿಸಿದರು.

ಭುಟಿಯಾ ಅವರ ಹೆಸರನ್ನು ಭಾರತ ತಂಡದ ಮಾಜಿ ಆಟಗಾರ ದೀಪಕ್ ಮೊಂಡಲ್ ಸೂಚಿಸಿದರೆ, ಮಧು ಕುಮಾರಿ ಅನುಮೋದಿಸಿದರು. ಮಧುಕುಮಾರಿ ಅವರ ಹೆಸರು 'ಖ್ಯಾತನಾಮ ಆಟಗಾರರ' ಪಟ್ಟಿಯಲ್ಲಿದ್ದು, ಮತದಾರರ ಪಟ್ಟಿಯಲ್ಲಿ ಕಾಣಿಸಿಕೊಂಡಿದ್ದಾರೆ.

'ಖ್ಯಾತನಾಮ ಆಟಗಾರರ ಪ್ರತಿನಿಧಿಯಾಗಿದ್ದುಕೊಂಡು ನಾನು ನಾಮಪತ್ರ ಸಲ್ಲಿಸಿದ್ದೇನೆ. ಮಾಜಿ ಆಟಗಾರರಿಗೆ ಮತದಾನದ ಹಕ್ಕು ನೀಡುವಂತೆ ಸುಪ್ರೀಂ ಕೋರ್ಟ್ ಸೂಚಿಸಿದೆ. ನಾವು ಉತ್ತಮ ಆಟಗಾರರು ಮಾತ್ರವಲ್ಲ, ಆಡಳಿತಗಾರರೂ ಹೌದು ಎಂಬುದನ್ನು ತೋರಿಸಬೇಕಿದೆ' ಎಂದು ಭುಟಿಯಾ ಪ್ರತಿಕ್ರಿಯಿಸಿದರು.

ನಾಮಪತ್ರ ಸಲ್ಲಿಕೆಗೆ ಶುಕ್ರವಾರ ಕೊನೆಯ ದಿನವಾಗಿತ್ತು. ದೆಹಲಿ ಫುಟ್‌ಬಾಲ್ ಸಂಸ್ಥೆ ಅಧ್ಯಕ್ಷ ಶಾಜಿ ಪ್ರಭಾಕರನ್, ಮಾಜಿ ಆಟಗಾರ ಯೂಜೆನ್ಸನ್ ಲಿಂಗ್ಡೊ ಮತ್ತು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸಹೋದರ ಅಜಿತ್ ಬ್ಯಾನರ್ಜಿ ಅವರು ಕೊನೆಯ ದಿನ ಉಮೇದುವಾರಿಕೆ ಸಲ್ಲಿಸಿದರು.

ಮುಂಚೂಣಿಯಲ್ಲಿ ಕಲ್ಯಾಣ್ ಚೌಬೆ: ಭಾರತ ತಂಡದ ಮಾಜಿ ಗೋಲ್‌ಕೀಪರ್ ಕಲ್ಯಾಣ್ ಚೌಬೆ ಅವರು ಎಐಎಫ್‌ಎಫ್ ಅಧ್ಯಕ್ಷ ಸ್ಥಾನದ ಹುದ್ದೆಗೆ ನಡೆಯುತ್ತಿರುವ ಪೈಪೋಟಿಯಲ್ಲಿ ಮುಂಚೂಣಿಯಲ್ಲಿದ್ದಾರೆ.

ಗುಜರಾತ್ ಫುಟ್‌ಬಾಲ್ ಸಂಸ್ಥೆಯು ಚೌಬೆ ಅವರ ಹೆಸರನ್ನು ಸೂಚಿಸಿದ್ದರೆ, ಅರುಣಾಚಲ ಪ್ರದೇಶ ಫುಟ್‌ಬಾಲ್ ಸಂಸ್ಥೆ ಅನುಮೋದಿಸಿತ್ತು.

ಮಾಜಿ ಆಟಗಾರರ ಅಲ್ಲದೆ, ರಾಜಕೀಯ ಹಿನ್ನೆಲೆಯಿಂದ ಬಂದವರೂ ಕಣಕ್ಕಿಳಿದಿರುವುದರಿಂದ ಆ.28 ರಂದು ನಡೆಯುವ ಚುನಾವಣೆಯ ಕಾವು ಸಹಜವಾಗಿ ಹೆಚ್ಚಿದೆ.

ಎನ್.ಎ.ಹ್ಯಾರಿಸ್ ಕಣಕ್ಕೆ: ಕರ್ನಾಟಕ ಫುಟ್‌ಬಾಲ್ ಸಂಸ್ಥೆಯ ಅಧ್ಯಕ್ಷರೂ ಆಗಿರುವ ಕಾಂಗ್ರೆಸ್ ಶಾಸಕ ಎನ್.ಎ.ಹ್ಯಾರಿಸ್, ರಾಜಸ್ಥಾನದ ಕಾಂಗ್ರೆಸ್ ಮುಖಂಡ ಮಾನವೇಂದ್ರ ಸಿಂಗ್ ಅವರೂ ಕಣದಲ್ಲಿದ್ದಾರೆ.

ಎಐಎಫ್‌ಎಫ್ ಚುನಾವಣೆಗೆ ಮತದಾರರ ಪಟ್ಟಿಯಲ್ಲಿ 36 ರಾಜ್ಯ ಸಂಸ್ಥೆಗಳ ಪ್ರತಿನಿಧಿಗಳು ಮತ್ತು 36 ಖ್ಯಾತನಾಮ ಆಟಗಾರರು ಇರಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆಟಗಾರರ ಪಟ್ಟಿಯಲ್ಲಿ 24 ಪುರುಷರು, 12 ಮಹಿಳೆಯರು ಇರಬೇಕು.

ಪ್ಯಾರಾ ಅಥ್ಲೆಟಿಕ್ಸ್: ಸುಮಿತ್ ವಿಶ್ವ ದಾಖಲೆ

ಬೆಂಗಳೂರು: ಪ್ಯಾರಾ ಜಾವೆಲಿನ್ ಥ್ರೋ ಸ್ಪರ್ಧಿ ಸುಮಿತ್ ಅಂಟಿಲ್ ಮತ್ತು ಡಿಸ್ಕಸ್ ಥ್ರೋ ಸ್ಪರ್ಧಿ ಯೋಗೇಶ್ ಕಥುನಿಯಾ ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ವಿಶ್ವ ದಾಖಲೆ ಸ್ಥಾಪಿಸಿದರು.

ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನ ಜಯಿಸಿದ್ದ ಸುಮಿತ್ ಅವರು 68.62 ಮೀ. ಸಾಧನೆ ಮೂಲಕ ತಮ್ಮದೇ ಹೆಸರಲ್ಲಿದ್ದ ವಿಶ್ವದಾಖಲೆ ಉತ್ತಮಪಡಿಸಿಕೊಂಡರು. ಎಫ್64 ವಿಭಾಗದಲ್ಲಿ ಸ್ಪರ್ಧಿಸುವ ಅವರ ಹಿಂದಿನ ವಿಶ್ವದಾಖಲೆಯ ದೂರ 68.55 ಮೀ. ಆಗಿತ್ತು. ಟೋಕಿಯೊ ಕೂಟದಲ್ಲಿ ಈ ಸಾಧನೆ ಮೂಡಿಬಂದಿತ್ತು.

ಡಿಸ್ಕಸ್ ಥ್ರೋನಲ್ಲಿ ಯೋಗೇಶ್ ಅವರು 48.34 ಮೀ. ಸಾಧನೆಯೊಂದಿಗೆ ವಿಶ್ವದಾಖಲೆ ಸ್ಥಾಪಿಸಿದರು.

ಫಿಫಾ, ಎಎಫ್‌ಸಿಗೆ ಕೇಂದ್ರ ಕ್ರೀಡಾ ಸಚಿವಾಲಯ ಮನವಿ

ಕ್ಲಬ್‌ಗಳಿಗೆ ಆಡಲು ಅವಕಾಶ ಕೊಡಿ

ನವದೆಹಲಿ (ಪಿಟಿಐ): 'ಎಐಎಫ್‌ಎಫ್ ಮೇಲೆ ಅಮಾನತು ಇದ್ದರೂ ಗೋಕುಲಂ ಕೇರಳ ಮತ್ತು ಎಟಿಕೆ ಮೋಹನ್ ಬಾಗನ್ ಕ್ಲಬ್‌ಗಳಿಗೆ ಮುಂಬರುವ ಟೂರ್ನಿಗಳಲ್ಲಿ ಆಡಲು ಅವಕಾಶ ನೀಡಬೇಕು' ಎಂದು ಕೇಂದ್ರ ಕ್ರೀಡಾ ಸಚಿವಾಲಯವು ಫುಟ್‌ಬಾಲ್ ಸಂಸ್ಥೆಗಳ ಅಂತರರಾಷ್ಟ್ರೀಯ ಒಕ್ಕೂಟ (ಫಿಫಾ) ಹಾಗೂ ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್‌ಗೆ (ಎಎಫ್‌ಸಿ) ಮನವಿ ಮಾಡಿದೆ.

ಗೋಕುಲಂ ಕೇರಳ ತಂಡ ಎಎಫ್‌ಸಿ ಮಹಿಳಾ ಕ್ಲಬ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲು ಉಜ್ಬೆಕಿಸ್ತಾನದಲ್ಲಿದೆ. ಈ ತಂಡ ಮೊದಲ ಪಂದ್ಯದಲ್ಲಿ ಆ.23 ರಂದು ಇರಾನ್‌ನ ಕ್ಲಬ್‌ಅನ್ನು ಎದುರಿಸಲಿದೆ. ಆದರೆ ಎಐಎಫ್‌ಎಫ್ ಅಮಾನತು ಆಗಿರುವುದರಿಂದ ಈ ತಂಡಕ್ಕೆ ಟೂರ್ನಿಯಲ್ಲಿ ಪಾಲ್ಗೊಳ್ಳಲು ಇನ್ನೂ ಎಎಫ್‌ಸಿ ಅನುಮತಿ ನೀಡಿಲ್ಲ.

ಮೋಹನ್ ಬಾಗನ್ ತಂಡ ಸೆ.7 ರಿಂದ ಬಹರೇನ್‌ನಲ್ಲಿ ನಡೆಯುವ ಎಎಫ್‌ಸಿ ಕ್ಲಬ್ ಅಂತರ ವಲಯ ಸೆಮಿಫೈನಲ್ಸ್‌ನಲ್ಲಿ ಆಡಲಿದೆ.

'ಫಿಫಾ ಅಮಾನತು ನಿರ್ಧಾರ ತೆಗೆದುಕೊಳ್ಳುವುದಕ್ಕೂ ಮುನ್ನವೇ ಗೋಕುಲಂ ಕೇರಳ ತಂಡ ಉಜ್ಬೆಕಿಸ್ತಾನಕ್ಕೆ ಪ್ರಯಾಣಿಸಿತ್ತು. ಯುವ ಆಟಗಾರ್ತಿಯರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಎಎಫ್‌ಸಿ ಮಹಿಳಾ ಕ್ಲಬ್ ಚಾಂಪಿಯನ್‌ಷಿಪ್‌ನಲ್ಲಿ ಆಡಲು ಅವಕಾಶ ನೀಡಬೇಕು' ಎಂದು ಫಿಫಾ ಮತ್ತು ಎಎಫ್‌ಸಿಗೆ ಇ-ಮೇಲ್ ಮೂಲಕ ಸಚಿವಾಲಯ ಮನವಿ ಮಾಡಿದೆ.

ಕೊಕ್ಕೊ ಲೀಗ್: ಒಡಿಶಾಗೆ ಜಯ

ಪುಣೆ (ಪಿಟಿಐ): ಸುಭಾಶಿಶ್ ಸಂತ್ರಾ ಅವರ ಮಿಂಚಿನ ಆಟದ ನೆರವಿನಿಂದ ಒಡಿಶಾ ಜಗ್ಗರ್‌ನಾಟ್ಸ್ ತಂಡ ಅಲ್ಟಿಮೇಟ್ ಕೊಕ್ಕೊ ಲೀಗ್‌ನಲ್ಲಿ 65–46 ರಲ್ಲಿ ರಾಜಸ್ತಾನ ವಾರಿಯರ್ಸ್ ತಂಡವನ್ನು ಮಣಿಸಿತು.

ಅದ್ಭುತ ಡೈವ್ ಮೂಲಕ ರಾಜಸ್ತಾನದ ಐವರು ಡಿಫೆಂಡರ್‌ಗಳನ್ನು ಔಟ್ ಮಾಡಿದ ಸಂತ್ರಾ, 14 ಪಾಯಿಂಟ್ ಕಲೆಹಾಕಿದರು. ಅವರಿಗೆ ತಕ್ಕ ಸಾಥ್ ನೀಡಿದ ನೀಲೇಶ್ ಜಾಧವ್ ಮತ್ತು ಆದಿತ್ಯ ಕ್ರಮವಾಗಿ ಒಂಬತ್ತು ಹಾಗೂ ಎಂಟು ಪಾಯಿಂಟ್ ಗಿಟ್ಟಿಸಿಕೊಂಡರು.



ಮನೀಷಾ ಕಲ್ಯಾಣ್

ಯುಇಎಫ್‌ಎಗೆ ಮನೀಷಾ ಕಲ್ಯಾಣ್

ನವದೆಹಲಿ (ಪಿಟಿಐ): ಯುವ ಫುಟ್‌ಬಾಲ್ ಆಟಗಾರ್ತಿ ಮನೀಷಾ ಕಲ್ಯಾಣ್ ಅವರು ಯುಇಎಫ್‌ಎ ಮಹಿಳಾ ಚಾಂಪಿಯನ್ಸ್ ಲೀಗ್‌ನಲ್ಲಿ ಆಡಿದ ಭಾರತದ ಮೊದಲ ಆಟಗಾರ್ತಿ ಎನಿಸಿಕೊಂಡರು.

ಸೈಪ್ರಸ್‌ನ ಅಪೊಲೊನ್ ಲೇಡಿಸ್ ಎಫ್‌ಸಿ ಕ್ಲಬ್ ಪ್ರತಿನಿಧಿಸುತ್ತಿರುವ ಅವರು ಸೈಪ್ರಸ್‌ನ ಎನ್‌ಗೊಮಿಯಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಆಡಿದರು. ಲಾತ್ವಿಯದ ಎಸ್‌ಎಫ್‌ಕೆ ರಿಗಾ ಎದುರಿನ ಪಂದ್ಯದ 60ನೇ ನಿಮಿಷದಲ್ಲಿ ಬದಲಿ ಆಟಗಾರ್ತಿಯಾಗಿ ಕಣಕ್ಕಿಳಿದರು. ಈ ಪಂದ್ಯವನ್ನು ಅಪೊಲೊನ್ ಕ್ಲಬ್ 3–0 ಗೋಲುಗಳಿಂದ ಗೆದ್ದಿತು.

ಅಪೊಲೊನ್ ತನ್ನ ಮುಂದಿನ ಪಂದ್ಯದಲ್ಲಿ ಆ.21 ರಂದು ಎಫ್‌ಸಿ ಜೂರಿಚ್ ಫ್ರುಯೆನ್ ತಂಡವನ್ನು ಎದುರಿಸಲಿದೆ.

20 ವರ್ಷದ ಮನೀಷಾ ವಿದೇಶಿ ಕ್ಲಬ್ ಪರ ಆಡಲು ಒಪ್ಪಂದ ಮಾಡಿಕೊಂಡ ಭಾರತದ ನಾಲ್ಕನೇ ಫುಟ್‌ಬಾಲ್ ಆಟಗಾರ್ತಿ ಎನಿಸಿಕೊಂಡಿದ್ದರು.

ರಾಷ್ಟ್ರೀಯ ತಂಡ ಮತ್ತು ಇಂಡಿಯನ್ ವುಮೆನ್ಸ್ ಲೀಗ್‌ನಲ್ಲಿ ಗೋಕುಲಂ ಕೇರಳ ತಂಡದ ಪರ ಅವರು ಗಮನಾರ್ಹ ಪ್ರದರ್ಶನ ನೀಡಿದ್ದರು. ಈಚೆಗೆ ಎಐಎಫ್‌ಎಫ್ ವರ್ಷದ ಆಟಗಾರ್ತಿ ಗೌರವಕ್ಕೆ ಪಾತ್ರರಾಗಿದ್ದರು.